
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೧೫ - ೮ - ೪೯

★

ಬೆಲೆ ಎರಡಾಣೆ



ಭಾರತದ ಭಾಗ್ಯತಾರೆಗಳು

ಸಂಪುಟ ೨೧ ಸಂಚಿಕೆ ೧೮

ಕರ್ಮವೀರ

ಸೋಮವಾರ ಶ್ರಾವಣ ಬ. ೬

ತಾರೀಖು ೧೫—೮—೧೯೪೯

ಮುಖಪತ್ರದಲ್ಲಿ

ಸ್ವತಂತ್ರ ಭಾರತದಲ್ಲಿ ಗಾಂಧೀಜಿಯ ಮರಣಾನಂತರ ಎಲ್ಲರಿಗಿಂತ ಹೆಚ್ಚು ಜನವಿಶ್ವಾಸಕ್ಕೆ ಪಾತ್ರರಾದವರೆಂದರೆ ಮುಖ್ಯಮಂತ್ರಿ ಜವಾಹರಲಾಲ ನೆಹರು ಮತ್ತು ಉಪಮುಖ್ಯಮಂತ್ರಿ ವಲ್ಲಭಭಾಯಿ ಪಟೇಲರು. ಇವರು ಭಾರತದ ಭಾಗ್ಯವನ್ನು ನಿರ್ಧರಿಸುವ ಜೋಡು ನಕ್ಷತ್ರವೆಂದರೂ ಸಲ್ಲುವುದು. ಅನೇಕ ವಿಷಯಗಳಲ್ಲಿ ಇವರಿಬ್ಬರ ಸ್ವಭಾವಗಳು ವಿರುದ್ಧವಾಗಿದ್ದರೂ ದೇಶಪ್ರೇಮದ ಉಭಯ ಸಾಮಾನ್ಯ ಕ್ಷೇತ್ರದಲ್ಲಿ ಇವರು ಹೆಗಲಿಗೆ ಹೆಗಲುಗೊಟ್ಟು ದುಡಿಯುತ್ತಿದ್ದಾರೆ. ಅವರಿಬ್ಬರೂ ಪುರುಷ-ಪ್ರಕೃತಿಗಳಂತಿದ್ದಾರೆ. ಒಬ್ಬರು ಭಾವನಾಜೀವಿ, ಸದಾ ಚೈತನ್ಯಮಯ; ಜನಸಾಗರವನ್ನು ಕಂಡರೆ ಉಕ್ಕಿಬರುವ ಸ್ಫೂರ್ತಿಯಿಂದ ಉಬ್ಬುವವರು. ಇನ್ನೊಬ್ಬರು ಪ್ರಶಾಂತ, ಅಂತರ್ಜ್ವಲ, ದೂರದರ್ಶಿ, ನಿಷ್ಠುರ; ಅತ್ಯಂತ ವ್ಯವಹಾರಜ್ಞ. ಹೆಚ್ಚು ಮಾತಿಲ್ಲದೆ, ಒಂದೇ ಸವನೆ ದುಡಿಯುತ್ತ ಹೋಗುವವರು; ದೃಢ ನಿರ್ಧಾರದಲ್ಲಿ ಅವರಿಗಿಂತ ಮಿಗಿಲಿಲ್ಲ. ಒಬ್ಬರ ಹೆಸರು ದಿಗ್ದೇಶಗಳಲ್ಲೆಲ್ಲ ಮನೆಮಾತು; ಇನ್ನೊಬ್ಬರ ಹೆಸರೆತ್ತುವವರ ಎದೆ ಕುಸುಬಡಿದುಕೊಳ್ಳುವ ಪ್ರಸಂಗ. ಇವೆರಡೂ ಧ್ರುವಗಳು ಇಂದು ಭಾರತದ ಅಭಿವೃದ್ಧಿಗಾಗಿ ಒಂದುಗೂಡಿವೆ. ಅವರಿಬ್ಬರಿಗೂ ಆಯುರಾರೋಗ್ಯಗಳನ್ನು ಭಾರತೀಯರೆಲ್ಲರೂ ಹಾರೈಸುವರು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ.

ಸಂಸ್ಥಾಪಕರು :

ಶ್ರೀ. ರಂ. ರಾ. ದಿವಾಕರ

ಸಂಪಾದಕರು :

ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಲೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಒಮ್ಮೆ ಚಂದಾದಾರರಾದವರಿಗೆ ಅವರ ಅವಧಿ ಮುಗಿಯುವ ೧೫ ದಿನ ಮುಂಚಿತವೇ ವ್ಹಿ. ಪಿ. ಮಾಡಲಾಗುವದು. ಬೇಡಾದವರು ಮೊದಲೇ ತಿಳಿಸಬೇಕು. ಚಂದಾ ಹಣ ಮುಂಗಡ.

ಲೇಖಕರು: "ಕರ್ಮವೀರ"ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ, ಕತೆ, ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ವ್ಯಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸ್ವಾತಂತ್ರ್ಯವರ್ಧಂತಿ

ಅರ್ಧ ಶತಮಾನಕ್ಕಿಂತಲೂ ದೀರ್ಘ ಕಾಲದ ಹೋರಾಟದಿಂದ ಸ್ವಾತಂತ್ರ್ಯವನ್ನು ಸಂಪಾದಿಸಿ ಅದರ ಎರಡನೆಯ ವರ್ಧಂತಿಯ ಉತ್ಸವವನ್ನು ಆಚರಿಸುತ್ತಿರುವಾಗ ಇಂದು ಮೊಟ್ಟಮೊದಲು— ಆ ಸ್ವಾತಂತ್ರ್ಯಕ್ಕಾಗಿ ಬೆವರಿಳಿಸಿದ, ಕಣ್ಣೀರು ಸುರಿಸಿದ, ಮತ್ತು ತಮ್ಮ ನೈಯ ನೆತ್ತರನ್ನು ಚೆಲ್ಲಿದ ಆ ಎಲ್ಲ ಜ್ಞಾತಾಜ್ಞಾತ ಹುತಾತ್ಮರಿಗೆ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸೋಣ. ಆ ಸ್ವಾತಂತ್ರ್ಯದ ಕಾರಣಪುರುಷನಾದ ಮಹಾತ್ಮನಿಂದು ಭೌತಿಕ ಶರೀರದಿಂದ ನಮ್ಮ ನಡುವೆ ಉಳಿದಿಲ್ಲವಾದರೂ ಅವನು ನೆಟ್ಟ ವೃಕ್ಷದಲ್ಲಿ, ಬಿಟ್ಟು ಹೋದ ಕೀರ್ತಿಯಲ್ಲಿ ಮತ್ತು ತೊಟ್ಟಿದ್ದ ಇನ್ನೂ ಅಪೂರ್ಣವಾದ ಪಣಗಳಲ್ಲಿ ತನ್ನ ಚೈತನ್ಯಶರೀರವನ್ನಿಟ್ಟು ಹೋಗಿ ನಮ್ಮನ್ನು ಸಾಕ್ಷಿ ದೃಷ್ಟಿಯಿಂದ ನೋಡುತಿದ್ದಾನೆಂದು ನಂಬಿ ನಮ್ಮ ಎಲ್ಲ ವ್ಯವಹಾರವನ್ನಿಟ್ಟುಕೊಳ್ಳೋಣ.

ಈ ಉತ್ಸವ ಸಮಾರಂಭದ ಕಾಲದಲ್ಲಿ ನಾವು ಸಾಧಿಸಿದ ಕಾರ್ಯಗಳನ್ನು ಕೊಂಡಾಡಿಕೊಂಡು ಗರ್ವಮದದಿಂದ ಹಿಂದುಮುಂದನ್ನು ಮರೆಯೋಣ ಬೇಡ. ಅದೇ ಸಮಯದಲ್ಲಿ ನಮ್ಮ ತಪ್ಪುಗಳನ್ನೇ, ಎಡಹುಗಳನ್ನೇ, ಅಪೂರ್ಣತೆಗಳನ್ನೇ, ದೌರ್ಬಲ್ಯಗಳನ್ನೇ ಅಥವಾ ಸೋಲುಗಳನ್ನೇ ನೆನೆನೆನೆದು ಹಲುಬುತ್ತ ಪಶ್ಚಾತ್ತಾಪ ಆತ್ಮಾವಹೇಲನಗಳ ನಿರ್ವೇದವನ್ನೂ ಹಣೆಯ ಮೇಲೆ ತಳೆಯದಿರೋಣ. ನಮ್ಮ ಇತಿಹಾಸವೆಷ್ಟೇ ಘನವಾಗಿರಲಿ ನಾವೂ ಮನುಷ್ಯರು, ಆದುದರಿಂದ ತಪ್ಪುಗಳು ಜರುಗುವುದು ಸಹಜವೆಂದು ಸಮಾಧಾನ ಮಾಡಿಕೊಂಡು, ನಾವೀಗಾಗಲೇ ಸಾಧಿಸಿದ ಕಾರ್ಯಗಳು ನಮ್ಮ ಸಾಮರ್ಥ್ಯದ ಪ್ರಮಾಣಗಳಾಗಿರುವುದರಿಂದ ಅವುಗಳಿಂದ ಸ್ಫೂರ್ತಿಯನ್ನು ಹೀರಿ, ಗರ್ವದಿಂದಲ್ಲ, ಸಾತ್ವಿಕ ಸ್ವಾಭಿಮಾನದಿಂದ ತಲೆಯೆತ್ತಿ ಮುಂದೆ ಸಾಗುವಾ.

ಈ ಸ್ವಾತಂತ್ರ್ಯಕ್ಕಿಂತ ಆ ಪಾರತಂತ್ರ್ಯವೇ ಲೇಸಾಗಿತ್ತೆಂದು ಹೊಸ ಸತ್ಯವನ್ನು ಕಂಡವರಂತೆ ಹೇಳುವವರು ನಮ್ಮಲ್ಲಿ ಕೆಲವರಿರಬಹುದು. ಅವರು ಸದಾಕಾಲವೂ ಅನ್ಯರ ಪಾಲನೆ ಪೋಷಣೆಯಲ್ಲೇ ಸುಖವನ್ನು ಕಾಣುವ ಚಿರಂತನ ಶಿಶುಗಳು. ನಡೆಯಲು ಕಲಿಯಬೇಕಾದರೆ ಎಡಹುವ ಭಯವಿದ್ದೇ ಇದೆ. ತಪ್ಪು ಮಾಡಿ ಅದರಿಂದ ಪಾಠ ಕಲಿಯುವದು ಜೀವಲೋಕದ ರೀತಿ, ಹಕ್ಕು. ಸ್ವಾತಂತ್ರ್ಯ ಬಂದೊಡನೆ ಸಕಲೈಶ್ವರ್ಯಗಳು ನಮ್ಮ ಕಾಲಬುಡಕ್ಕೆ ತಾವಾಗಿ ಬರುವವೆಂದು ನಮ್ಮಲ್ಲಿ ಅನೇಕರು ಭ್ರಾಂತರಾಗಿದ್ದೆವು. ಆದರೆ ಆ ತಿಳುವಳಿಕೆಯನ್ನು ತಿದ್ದಿಕೊಂಡು ನಾವು ದುಡಿದಷ್ಟೇ ನಮಗೆ ಪ್ರಾಪ್ತಿಯೆಂದು ಮನಗಾಣಬೇಕಾಗಿದೆ. ನಮ್ಮ ಭವಿಷ್ಯತ್ತನ್ನು ನಾವೇ ರೂಪಿಸಿಕೊಳ್ಳುವ ಹಕ್ಕಷ್ಟೇ ಸ್ವಾತಂತ್ರ್ಯದ ತಾತ್ಪರ್ಯ. ಸ್ವಾತಂತ್ರ್ಯವೃಕ್ಷ ಫಲವೀಯಬೇಕಾದರೆ ದಿನವೂ ಅದಕ್ಕೆ ನೀರೆರೆಯಬೇಕು. ಪ್ರತಿಯೊಬ್ಬ ನಾಗರಿಕನೂ ತನ್ನ ಹೊಣೆಯರಿತು ನಡೆಯಲು ಕಲಿತ ದಿನ ಈ ರಾಷ್ಟ್ರ ನಂದನವಾಗದಿರದು.

ಇಷ್ಟು ದಿನಗಳ ಸ್ವಾತಂತ್ರ್ಯದ ನಂತರ ನಾವು ಕಲಿತ ಪಾಠವೆಂದರೆ, ಮುಂದಾಳುಗಳೆಷ್ಟೇ ತೇಜಸ್ವಿಗಳಾಗಿರಲಿ, ಸದುದ್ದೇಶಪೂರಿತರಾಗಿರಲಿ, ಜನತೆಯ ಸಮಷ್ಟಿ ಯೋಗ್ಯತೆಗಿಂತ ಹೆಚ್ಚು ಯೋಗ್ಯತೆಯುಳ್ಳ ಸರಕಾರ ದೊರೆಯಲಾರದು. ಸರಕಾರದ ತಪ್ಪುಗಳನ್ನೇ ಎಣಿಸುವ ಮೊದಲು ನಾವು ಜನರ ಯೋಗ್ಯತೆಯನ್ನು ಹೆಚ್ಚಿಸುವ ಪ್ರಯತ್ನಗಳನ್ನು ಕೈಕೊಳ್ಳಬೇಕು. ಕೈಯಲ್ಲಾಗದ ಮುದುಕಿಯರಂತೆ ಜಗಲಿಯಲ್ಲಿ ಕುಳಿತು ಗುಣಗುಟ್ಟುವ ಬದಲು ಚೈತನ್ಯವುಳ್ಳ ಯುವಕರಂತೆ ತಪ್ಪುಗಳನ್ನು ತಿದ್ದಲು ಉದ್ಯುಕ್ತರಾಗೋಣ. ನಮ್ಮ ಸರಕಾರವೆಷ್ಟೇ ಕೆಟ್ಟಿದ್ದರೂ ನಾವೆಲ್ಲರೂ ಕೂಡಿದರೂ ತಿದ್ದದಷ್ಟು ಕೆಟ್ಟಿಲ್ಲ.

ನಮ್ಮ ಮುಂದೆ ಅನೇಕ ಪ್ರಚಂಡ ಸಮಸ್ಯೆಗಳಿವೆ. ಅನ್ನದ್ದು ಇದರಲ್ಲಿ ಮೊದಲನೆಯದು. ಸರಕಾರವು ಕಾಯದೆ ಕಾನೂನುಗಳಿಂದಾಗಲಿ ನೋಟಿನ ಕಟ್ಟುಗಳಿಂದಾಗಲಿ ಕಾಗದ ಪತ್ರಗಳಿಂದಾಗಲಿ ಅನ್ನವನ್ನು ಹುಟ್ಟಿಸಲಾರದು. ಅದು ಹುಟ್ಟಬೇಕಾದರೆ ಜನರು ಅದಕ್ಕಾಗಿ ದುಡಿಯಬೇಕು. ಈ ವಿಷಯದಲ್ಲಿ ಸರಕಾರ ಮಾಡಬಹುದಾದುದೆಂದರೆ ಗಾಲಿಯ ಗಣೆಗೆ ಕೀಲೆಣ್ಣೆ ಮಾಡಬಹುದಾದಷ್ಟೇ. ಅನ್ನದ ಸಮಸ್ಯೆಯನ್ನು ನಾವೂ ನೀವೂ ಮನಸುಕೊಟ್ಟರೆ ಮಾತ್ರ ಬಿಡಿಸಬಹುದು.

ನಮ್ಮನ್ನು ಸುತ್ತುವರಿದಿರುವ ಅನೇಕ ಸಾಮಾಜಿಕ ಅನೀತಿಗಳಿಗಾದರೂ ಇದೇ ಮಾತು ಅನ್ವಯಿಸುತ್ತದೆ. ನಾವು ಅನೀತಿಗಳೊಡನೆ ಅಸಹಕರಿಸದಿದ್ದರೆ ಅವು ಎಂದೆಂದೂ ತೊಲಗವು.

ಸ್ವಾತಂತ್ರ್ಯ ದಿನದಂದು ನಾವು ಮನಸಿನಲ್ಲಿ ಗಟ್ಟಿ ಮಾಡಿಕೊಳ್ಳಬೇಕಾದ ಮಾತು ಇದು. "ಉದ್ಧರೇದಾತ್ಮನಾತ್ಮಾನಂ": ನಾವೂ ಮಾನವರು, ನಮ್ಮ ಸಮಸ್ಯೆಗಳನ್ನು ನಾವು ಬಿಡಿಸಬಲ್ಲೆವೆಂಬ ವಿಶ್ವಾಸ ನಮ್ಮ ಹೃದಯದಲ್ಲಿ ಬೇರೂರಬೇಕು. ಬೇರೊಬ್ಬರು ಬಂದು ನಮ್ಮ ಸಮಸ್ಯೆಗಳನ್ನು ಬಿಡಿಸಲಾರರು. ನಮ್ಮದೇ ಹೊಲವಾದರೂ ನಾವು ಬೆವರು ಸುರಿಸಿದಲ್ಲದೆ ಬೆಳೆ ಬಾರದು; ಕಳೆ ಕಿತ್ತಲ್ಲದೆ ಕಳೆ ಹೋಗದು. ನಮ್ಮದೇ ರಾಜ್ಯವಾದರೂ ನಾವು ದುಡಿದಲ್ಲದೆ ಸುಖ ಶಾಂತಿ ಬಾರದು.

ಆ ಆತ್ಮವಿಶ್ವಾಸ, ಆ ಉದ್ಯೋಗಬುದ್ಧಿ, ಆ ಕ್ರಿಯಾಸಾಮರ್ಥ್ಯ ನಮಗೆ ಬರುವಂತಾಗಲಿ!

× × ×

ಅನೇಕ ಸಮಸ್ಯೆಗಳನ್ನು ಚರ್ಚಿಸಿ ನಿರ್ಣಯ ಕೈಕೊಂಡ ಕಾಂಗ್ರೆಸ್ ಕಾರ್ಯಸಮಿತಿ ಕೊನೆಯದಾಗಿ ಕಳೆದವಾರ ಭಾರತದಲ್ಲಿ ಬೇರೆ ಬೇರೆ ಭಾಷೆಗಳ ಬಳಕೆಯ ವಿಷಯದಲ್ಲಿ ಕೆಲ ನಿರ್ದೇಶಕ ತತ್ವಗಳನ್ನು ಒಂದು ಗೊತ್ತುವಳಿಯ ರೂಪದಲ್ಲಿ ಅಂಗೀಕರಿಸಿತು. ಹಿಂದುಸ್ತಾನಕ್ಕೊಂದು ರಾಷ್ಟ್ರಭಾಷೆಯಿರಬೇಕು ಮತ್ತು ಒಕ್ಕೂಟ ಸರಕಾರದ ವ್ಯವಹಾರ ಅದರಲ್ಲಿ ನಡೆಯಬೇಕು; ಪ್ರಾಂತದ ಆಡಳಿತೆಯಲ್ಲಿ ಪ್ರಾಂತದಭಾಷೆಯನ್ನೇ ಉಪಯೋಗಿಸಬೇಕು; ಪ್ರಾಥಮಿಕ ಶಿಕ್ಷಣ ಬಾಲಕರ ಪಾಲಕರಿಂದ ಅಥವಾ ಪೆತ್ರವರಿಂದ ನಿರ್ಣಯಿಸಲ್ಪಡುವ ಭಾಷೆಯಲ್ಲಿ ನಡೆಯಬೇಕು ಮಾಧ್ಯಮಿಕ ಶಿಕ್ಷಣದಲ್ಲಿ ರಾಷ್ಟ್ರಭಾಷೆಯನ್ನು ದ್ವಿತೀಯ ಭಾಷೆಯಾಗಿ ಕಲಿಸಬೇಕು; ವಿಶ್ವವಿದ್ಯಾಲಯ ಶಿಕ್ಷಣವು ಪ್ರಾಂತ ಭಾಷೆಯಲ್ಲಿ ಕೊಡಲ್ಪಡಬೇಕು ಮತ್ತು ಉರ್ದುಕೂಡ ಇಂಥ ಒಂದು ಭಾಷೆಯೆಂದು ಪರಿಗಣಿಸಬೇಕು. ಇದಿಷ್ಟು ಗೊತ್ತುವಳಿಯ ರೂಪರೇಷೆ. ಬಹುಭಾಷಾ ಪ್ರಾಂತಗಳಲ್ಲಿ ವಿವಿಧ ಪ್ರಮುಖ ಭಾಷೆಗಳ ಕ್ಷೇತ್ರಗಳನ್ನು ಗೊತ್ತುಪಡಿಸುವದು, ದ್ವಿಭಾಷಾ ಪ್ರದೇಶಗಳಲ್ಲಿ ಅಲ್ಪಸಂಖ್ಯರು ನೂರಕ್ಕೆ ೨೦ ಆದರೂ ಇದ್ದರೆ ಆಡಳಿತೆಯ ನಮೂನೆಗಳು, ಕಾಗದ ಪತ್ರಗಳೇ ಮೊದಲಾದವು ಅವರ ಭಾಷೆಯಲ್ಲಿಯೂ ದೊರೆಯಬೇಕು; ಅಂಥ ಪ್ರತ್ಯೇಕ ಅಲ್ಪಸಂಖ್ಯಾತ ಭಾಷೆಯಲ್ಲಿ ಕಲಿಯಬೇಕೆಂಬ ವಿದ್ಯಾರ್ಥಿಗಳು ಪ್ರತಿಶತ [illegible] ಅದರೂ ಇದ್ದರೆ ಅವರಿಗೆ ಆ ಭಾಷೆಯಲ್ಲಿ ಶಿಕ್ಷಣ [illegible] ಇಂಗ್ಲೀಷನ್ನು ಪೂರ್ತಿಯಾಗಿ [illegible] ಯೋಗ್ಯವಾಗಿದೆ. ಆದರೆ ವಿಶ್ವವಿದ್ಯಾಲಯ ಶಿಕ್ಷಣವನ್ನು "ಪ್ರಾಂತಭಾಷೆ"ಯಲ್ಲಿ ಕೊಡಬೇಕೆಂದುದು ಬಹುಭಾಷಾ ಪ್ರಾಂತಗಳಲ್ಲಿರುವ ಅಲ್ಪಸಂಖ್ಯ ಭಾಷಾ ಪ್ರದೇಶಗಳು, ವಿಶೇಷವಾಗಿ ಮುಂಬಯಿ ಪ್ರಾಂತದಂತೆ [illegible] ಅಲ್ಲಿನ [illegible] ಅನ್ಯಾಯವಲ್ಲವೆ?

× × ×

ದೇವನಾಗರೀ ಲಿಪಿಯುಳ್ಳ ಹಿಂದಿಯೇ ರಾಷ್ಟ್ರಭಾಷೆಯಾಗಬೇಕೆಂದು ಭಾಷಾ ಸಮಿತಿಯ ಕಾಂಗ್ರೆಸ್ ಪಕ್ಷದವರು ನಿರ್ಧರಿಸಿದರೆಂದು ಬಂದ ಸುದ್ದಿ ನಿಜವಾಗಿ ಸಮಾಧಾನಕರವಾಗಿದೆ. ೧೫ ವರ್ಷಗಳ ಅನಂತರ ಅದು ಪೂರ್ತಿಯಾಗಿ ಸರಕಾರದ ಭಾಷೆಯಾಗುವದು. ಆ ವರೆಗೆ ಸರಕಾರದ ವ್ಯವಹಾರ ಯಾವ ಯಾವ ಭಾಷೆಯಲ್ಲಿರಬೇಕೆಂಬ ಸೂಚನೆ ಕೊಡಲು ಒಂದು ಸಮಿತಿ ನೇಮಿಸಲ್ಪಟ್ಟಿದೆ. ನಾವು ಹಲಕಾಲದಿಂದ ಅನುಸರಿಸುತ್ತ ಬಂದ ಅನಿರ್ಧಾರದ ಧೋರಣೆಯ ಪರಿಣಾಮವಾಗಿ ಭಾರತದ ಆಡಳಿತೆಯಲ್ಲಿ ಭಾಷೆಯು ಬಿಕ್ಕಟ್ಟಿನ ಪ್ರಶ್ನೆಯಾಗಿ, ಅಥವಾ ಅದನ್ನು ಪರಿಹರಿಸುವಲ್ಲಿ ನಾವು ಎರಡೆರಡು ಲಿಪಿ, ಎರಡೆರಡು ಭಾಷೆಗಳನ್ನು ಅಂಗೀಕರಿಸುವ ಪ್ರಮೇಯವುಂಟಾಗಿ, ಎಷ್ಟು ನಿರರ್ಥಕ ಧನ ಶ್ರಮ ವ್ಯಯವೂ ಪ್ರಗತಿಗೆ ತಡೆಯೂ ಬರುವದೋ ಎಂಬ ಭೀತಿಯಿತ್ತು. ಆದರೆ ನಾಗರೀಲಿಪಿಯು ಅಂಗೀಕೃತವಾಯಿತು [illegible]. ಅಬುಲ ಕಲಾಮ ಅಝಾದರಂಥ ಇಸ್ಲಾಮಧರ್ಮಾನುಯಾಯಿ ಬೆಂಬಲ ಕೊಟ್ಟರೆಂದು ತಿಳಿಯುತ್ತದೆ. ಇದು ತುಂಬ ಪ್ರಶಂಸನೀಯ. ಈ ನಿರ್ಣಯದಿಂದ ರಾಷ್ಟ್ರಭಾಷೆಯು ಐಕ್ಯಕ್ಕೆ ಮುಖ್ಯವಾದದರಿಂದಲೂ ಅಗದಷ್ಟು ಸಹಾಯವಾಗುವಲ್ಲಿ ಸಂದೇಹವಿಲ್ಲ. ವ್ಯಾಕರಣದಲ್ಲಿ ಒಂದೇ ಆದ ಉರ್ದು ಮತ್ತು ಖಡೀಬೋಲಿ ಹಿಂದಿಗಳ ಸಾಹಿತ್ಯ ಶೈಲಿ ಕಲಿದ ಜನತೆ ವರ್ಗಗಳಿಂದ ದೂರದೂರವಾಗಲು ಉರ್ದು ಲಿಪಿಯೇ ಕಾರಣವಾಯಿತು. ನಾಗರಿಲಿಪಿಯನ್ನು ರಾಷ್ಟ್ರಲಿಪಿಯಾಗಿ ಮಾಡಿದ್ದರಿಂದ ಉರ್ದು ಲೇಖಕರನೇಕರು ನಾಗರಿಯಲ್ಲಿ ಬರೆಯತೊಡಗುವರಾದ್ದರಿಂದ ಅವೆರಡು ಮತ್ತೆ ಹತ್ತಿರ ಹತ್ತಿರ ಬಂದು ಹದಿನೈದು ವರ್ಷಗಳಲ್ಲಿ ಎರಡೂ ಶೈಲಿಗಳ ಮಿಶ್ರಣದಿಂದ ನಮ್ಮ ರಾಷ್ಟ್ರಭಾಷೆ ಗಾಂಧೀಜಿ ಅಪೇಕ್ಷಿಸಿದಂತೆ ಸಮನ್ವಯ ರೂಪದಲ್ಲಿ ಬೆಳೆದು ಬರಬಹುದು.

× × ×

ಈಚೆಗೆ ಬ್ರಿಟನ್ನಿಗೆ ಹೋಗಿ ಸ್ಟರ್ಲಿಂಗ್ ಶಿಲ್ಕಿನ ಸಂಬಂಧದಲ್ಲಿ ಬ್ರಿಟನ್ನಿನೊಡನೆ ಒಪ್ಪಂದ ಮಾಡಿಕೊಂಡ ಡಾ. ಜಾನ್‌ಮಥಾಯಿಯವರು ಹೊಸದಿಲ್ಲಿಗೆ ಮರಳಿದವರು ಸುದ್ದಿಗಾರರ ಸಭೆಯಲ್ಲಿ ಒಪ್ಪಂದದ ವಿವರಗಳನ್ನು ತಿಳಿಹೇಳಿದರು. ಈ ಒಪ್ಪಂದದ ಫಲವಾಗಿ ನಮ್ಮ ಪಾಲಿನ ಪೂರೈಕೆ ಹೆಚ್ಚುವದು. ಹಿಂದಿನ ವರ್ಷ ಶ್ರೀ ಷಣ್ಮುಖಂ ಚೆಟ್ಟಿಯವರು ಮಾಡಿಕೊಂಡು ಬಂದ ಒಪ್ಪಂದದನ್ವಯ ವರ್ಷಕ್ಕೆ ೬ ಕೋಟಿ ಪೌಂಡುಗಳಷ್ಟೇ ನಮಗೆ ಸ್ಟರ್ಲಿಂಗ್ ನಿಧಿಯಿಂದ ಪಡೆಯಲು ಸಿಕ್ಕುತ್ತು. ಇನ್ನು ಮುಂದೆ ನಮಗೆ [illegible] ಕೋಟಿ ಪೌಂಡುಗಳು ದೊರೆಯುವವು. ಇದರಿಂದ ಉದ್ಯೋಗೀಕರಣದ ಸಾಮಗ್ರಿ ತರಿಸಿಕೊಳ್ಳಲು ನಮಗೆಷ್ಟೋ ಅನುಕೂಲವಾಗುವದು. ಇದಲ್ಲದೆ ಸ್ಟರ್ಲಿಂಗ್ ಶಿಲ್ಕಿನ [illegible] ೧೯೪೮-೪೯ ರಲ್ಲಿ [illegible] ಲಕ್ಷ, ೧೯೪೯-೫೦, ೫೧ ರಲ್ಲಿ ಪ್ರತಿವರ್ಷ (ಈಗಿನ ೪೦೦ ಲಕ್ಷದ ಬದಲು) ೫೦೦ ಲಕ್ಷ ಪೌಂಡುಗಳನ್ನು ನಾವು ಉಪಯೋಗಿಸಿಕೊಳ್ಳಬಹುದು. ಸ್ಟರ್ಲಿಂಗ್ ಪ್ರದೇಶದ ಪಾಲಿನ [illegible] ಮುಂದೆ [illegible] ಭಾರತ [illegible]. ಇದ್ದುದರಲ್ಲಿ ಭಾರತಕ್ಕೆ ಹಿಂದಿನ ಒಪ್ಪಂದಕ್ಕಿಂತ ಹೆಚ್ಚು ಅನುಕೂಲತೆ ದೊರಕಿತೆ [illegible].

ಹೊಸ ಪುಸ್ತಕಗಳು

ವಿಡಂಬನಸಾಹಿತ್ಯಕ್ಕೊಂದು ಹೊಸ ಕಾಣಿಕೆ

ಹೊಸಗನ್ನಡದಲ್ಲಿ ವಿಡಂಬನಸಾಹಿತ್ಯ ಹೆಚ್ಚಾಗಿ ಬೆಳೆದುಬಂದಿಲ್ಲ. ಸಮಾಜದಲ್ಲಿ ಬೇರೂರಿರುವ ಮತ್ತು ಊರುತ್ತಿರುವ ದುರ್ವ್ಯಸನ ದುಷ್ಕಲ್ಪನೆ ದೌರ್ಬಲ್ಯಗಳನ್ನು ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸಿ ಅವನ್ನು ಖಂಡಿಸಿ ಮುಂಬರಿಯದಂತೆ ಮಾಡುವ ಕೆಲಸ ವಿಡಂಬನ ಸಾಹಿತಿಗಳದು. ಇಂಗ್ಲಿಷ ಸಾಹಿತ್ಯದಲ್ಲಿ ಇಂಥ ಸಾಹಿತಿಗಳಿಗೆ ಕೊರತೆಯಿಲ್ಲ. ಇವರು ಜನಮನದಲ್ಲಿರುವ ಕಸಗಳನ್ನು ಗುಡಿಸಿ ಶುದ್ಧಗೊಳಿಸುವ ಅನಾಸಕ್ತಯೋಗಿಗಳಾದ ಭಂಗಿಗಳು.

ಶ್ರೀ ಜಿ. ಪಿ. ರಾಜರತ್ನಂ ಬರೆದ ಕರ್ನಾಟಕದ ಸ-ಣಗಳ ಚರ್ಚೆಯಮೇಲಿನ ವಿಡಂಬನ ಕಾವ್ಯ ಪ್ರಸಿದ್ಧವಾದುದು. ಪ್ರಬಂಧರೂಪದಲ್ಲೂ ಹರಟೆಗಳ ರೂಪದಲ್ಲೂ ಶ್ರೀರಂಗರೇ ಮೊದಲಾದ ಸಾಹಿತಿಗಳು ಹಲವಾರು ವ್ಯಂಗ್ಯ ಲೇಖನಗಳನ್ನು ಪ್ರಸಿದ್ಧಿಸಿದ್ದಾರೆ. ಈಗ ಮೈಸೂರಿನ ಶ್ರೀ ಡಿ. ವಿ. ಕೃಷ್ಣಮೂರ್ತಿ ಬಿ. ಎ. ಆನರ್ಸ್ ಇವರ "ಪರದೆಯ ಹಿಂದೆ" ಎಂಬ ವಿಡಂಬನ ಕಥೆಯೊಂದು ಮೂರ್ತಿ ಏಜನ್ಸೀಸ ಕೃಷ್ಣಮೂರ್ತಿಪುರಂ, ಮೈಸೂರು ಅವರ ಪ್ರಕಾಶನದಲ್ಲಿ ಹೊರಬಿದ್ದಿದೆ. (ಪುಟ ೮೧, ಬೆಲೆ ರೂ. ೧.)

ಪಾಶ್ಚಾತ್ಯ ಮೇಲ್ಪಂಕ್ತಿಯ ದುರಂತತೆ

ಇಂಗ್ಲಿ ವಿಡಂಬಕ ಸ್ವಿಫ್ಟನ ಬಗ್ಗೆ, ಅವನು ಮಾನವ ದ್ವೇಷಿಯಲ್ಲ, ಮಾನವನಲ್ಲಿರುವ ಅಮಾನವತೆಯ, ದೌರ್ಜನ್ಯದ, ದಂಭದ ದ್ವೇಷಿ ಎಂದು ಹೇಳಲಾಗುವದು. ಅದೇ ಮಾತನ್ನು ಪ್ರಸ್ತುತ ಲೇಖಕರಿಗೂ ಅನ್ವಯಿಸಬಹುದಾಗಿದೆ. ಪಾಶ್ಚಾತ್ಯರ ಕೇವಲ ಚರ್ಮಗತ, ಮಾಂಸಗತ ಎನಿಸುವ ಭೋಗ, ವಿಲಾಸ, ಸಮಾಜನೀತಿಗಳನ್ನು ಭಾರತೀಯರು ಮೇಲ್ಪಂಕ್ತಿಯಾಗಿ ತೆಗೆದುಕೊಳ್ಳಹತ್ತಿರುವದನ್ನು ಕಂಡು ಅದರಅಂತ್ಯದ ಪರಿಣಾಮಗಳುಹೇಗೆ ಉದ್ವೇಗ ಹಾನಿಯನ್ನು ಉಂಟುಮಾಡುವುವು ಎಂಬ ಅಂಶವನ್ನು ಚಿತ್ರಿಸುವದೇ ಲೇಖಕರ ಗುರಿಯಿದ್ದಂತೆ ಕಾಣುತ್ತದೆ. ಅಮೇರಿಗೆ ಅವರು "ಸ್ತ್ರೀ ಸ್ವಾತಂತ್ರ್ಯ", ವಿವಾಹವಿಚ್ಛೇದ, glamour hunting, ಒಯ್ಯಾರ ಒನಪುಗಳ ಬೇಟೆ, ಹೊಸತಿನ ಹುಚ್ಚು, ಸ್ವಾರ್ಥ ಸ್ವಾಚ್ಛಂದ್ಯಗಳಪೂಜೆ ಕ್ಷಣಚಿತ್ತ ತೆಇವುತುಂಬಿದ ಕೌಟುಂಬಿಕ ಜೀವನದ ದೆಸೆಯಿಂದ ವಿವಾಹ ವ್ಯಭಿಚಾರಗಳು ಪರ್ಯಾಯಪದಗಳಾಗುತ್ತಿರುವ ಬಗೆ ಮುಂತಾದ ತೊಗಲುಬೊಂಬೆ ಎಂದು ಕರೆಯಲರ್ಹರಾದ ಮಾನವರ ನಾಗರಿಕತೆಯ ಸೋಗು ದುರಂತದಲ್ಲಿ ಪರಿಣಮಿಸುವ ಅಂಶವನ್ನು ಮಾರ್ಮಿಕವಾಗಿ ಬಯಲಿಗೆಳೆದಿದ್ದಾರೆ.

"ಅದೊಂದು ಸುಧಾರಿಸಿದ ರಾಷ್ಟ್ರ" ಎಂದು ಪ್ರಾರಂಭವಾಗುವ ಕಥೆ ಅಮೇರಿಕವನ್ನೇ ದೃಷ್ಟಿಯಲ್ಲಿಟ್ಟುಕೊಂಡಿದೆ ಎನಿಸುವಂತಿದೆ. ಅಲ್ಲಿಯ ನಗರಲಕ್ಷ್ಮಿಯ ಸೌಂದರ್ಯವನ್ನು ಬಣ್ಣಿಸಿದ ಬಗೆ ಅಂತಿದೆ. ಇದು ಅಮೇರಿಕನ್ ಮಾದರಿಯ ನಾಳಿನ ಭಾರತದ ಚಿತ್ರ. ಆ ರಾಷ್ಟ್ರದಲ್ಲಿರುವದು ಆದರ್ಶದಾಂಪತ್ಯ, ಅಂದರೆ ವಿವಾಹವಿಚ್ಛೇದ ಮುಂತಾದ ಅಪದ್ಧರ್ಮಗಳನ್ನು ನಿತ್ಯಧರ್ಮವೆಂದು ನಿಷ್ಠೆಯಿಂದ ಬಳಕೆಗೆ ತಂದಿದ್ದಾರೆ ಜನರು. ಅಲ್ಲಿಯ ನ್ಯಾಯನಿಷ್ಠೆ ಅದ್ವಿತೀಯ-ಅಂದರೆ ಅಲ್ಲಿ ಮಾತ್ರ ಅದು ಸಾಧು; ಅನ್ಯದೇಶಗಳಲ್ಲಿ ಅದು ಅನ್ಯಾಯ, ಅಸಾಧು ಎಂದು ವ್ಯಂಗ್ಯ. "ರಾಜಧಾನಿಯಲ್ಲಿ ಎಲ್ಲ ಮುಖ್ಯ ರಸ್ತೆಗಳೂ ನ್ಯಾಯಸ್ಥಾನದಲ್ಲಿ ಕೊನೆಗಾಣುತ್ತಿದ್ದವು" ಎಂಬ ಸೂಚ್ಯವಾಕ್ಯದಲ್ಲಿ "ನ್ಯಾಯ" ಎಂದರೆ ಬಯಲು ಸೀಮೆಯಲ್ಲಿ ಹೇಳುವಂತೆ "ಕಲಹ" ಎಂದು ವ್ಯಂಜಿಸಲಾಗಿದೆ.

ಅವಿಮರ್ಶಕ ಬುದ್ಧಿ

ಮಗುವನ್ನು ಕಳೆದುಕೊಂಡ ಒಬ್ಬ ತಂದೆ ಅದನ್ನು ಹೋಲುವ ಒಂದು ಮಗುವನ್ನು ಮುದ್ದಿಸಹೋದುದನ್ನು ಕಂಡು ಸಾರ್ವಜನಿಕರು ಅವನು ಮಗುವನ್ನು ಅಪಹರಿಸುವವನೆಂದು ಗದ್ದಲಹಾಕಿ, ಕೋರ್ಟಿಗೆ ಒಯ್ದು, ಅವನಿಗೆ ಮರಣದಂಡನೆ ವಿಧಿಸುವಂತೆ ಮಾಡಿದ್ದೇ ಕಥಾಸೂತ್ರ. ಅವನಬಾಲಾಪಹಾರದವರ್ಣನೆ ಒಬ್ಬೊಬ್ಬರ ಬಾಯಲ್ಲಿ ಒಂದೊಂದು ವಿಧ-ಅದೊಂದು ಅತಿಶಯೋಕ್ತಿಯ ಗೌರೀಶಂಕರ, ಅಸತ್ಯದ ಶೂರ್ಪಣಖಾಸೌಂದರ್ಯ, ಮಾಯಾಮಾರೀಚಕಳೆ! ಹುಡುಗರು ಮುದುಕರು ಹೆಂಗಸರೆನ್ನದೆ ಅದಿರುತ್ತಿರುವ ಅಬಲೆಯ ಕೈಯಿಂದ ಮಗುವನ್ನು ಗುಂಡಾಗಿರಿಯಿಂದ ಎತ್ತಿಕೊಂಡು ಹೋಗಲು ಯತ್ನಿಸುತ್ತಿದ್ದ ಅವನ "ದುಶ್ಚರ್ಯೆ"ಯನ್ನು ನಿಂದಿಸಿ ಸ್ತ್ರೀದಾಕ್ಷಿಣ್ಯದಿಂದ ಆ (ಅವ್ಯಕ್ತಳಾದ) ಅವಳಿಗೆ ಮರುಕದೋರದವರೇ ಇಲ್ಲ! ನ್ಯಾಯಸ್ಥಾನದಲ್ಲಿ ನೆರೆದ ಜನಸಂದಣಿಯನ್ನು ಎಣಿಸಲು ಆದಿಶೇಷನಿಗೂ ಅಳವಲ್ಲ. ಆ ಸ್ತ್ರೀಪುರುಷರ ದಿವ್ಯ ಚರಿತ್ರವನ್ನು(!) ಹಾದಿಯುದ್ದಕ್ಕೂ ತುಂಬಿ ನಡೆಯುತ್ತಿದ್ದ ವಿದ್ಯಾರ್ಥಿಗಳ ಬಾಯಿಂದ ನಾವು ಕೇಳುತ್ತೇವೆ. ವಿವಾಹ ವಿಚ್ಛೇದದ ನ್ಯಾಯ್ಯತೆಯನ್ನು ಸಿದ್ಧಮಾಡಿ ತೋರಿಸುವ ಛಲಕ್ಕಾಗಿಯೇ ಗಂಡನನ್ನು ಬಿಟ್ಟು ಮತ್ತೊಬ್ಬನನ್ನು ಮದುವೆಯಾದ ಒಬ್ಬಳಿಗೆ ಆ ಎರಡನೆಯ ಗಂಡನು ರಾತ್ರಿ ಹೊತ್ತು ನಾಲ್ಕೈದು ಸಲ ಸೀನುವ ದುರಭ್ಯಾಸ ತನ್ನ ಮೊದಲಿನ ಹೆಂಡತಿಗಿತ್ತೆಂದು ಅವಳನ್ನು ಬಿಟ್ಟನೆಂದು ಹೇಳುವುದು ಮೋಜಾಗಿ ಕಂಡರೂ ಅಮೇರಿಕದಂಥ ಮುಂಬರಿದ ರಾಷ್ಟ್ರಗಳ ಹಾಲಿವುಡ್‌ಧರ್ಮದ ನಿತ್ಯಾಚರಣೆಯಾಗಿದೆ. ಹೊರಗೆ ಒಬ್ಬರನ್ನು ಒಬ್ಬರು ಸದಾ ದೆಸಿಗೆ ಹಾಕಿ ಅಂಟಿಸಿಕೊಂಡಂತೆ ತಿರುಗಿದರೂ ಒಳಗೆ ಕೇವಲ ಸ್ವಾರ್ಥ ಚಾಂಚಲ್ಯಗಳು ತುಂಬಿರುವುದರಿಂದ ಅಂಥ ನರನಾರಿಯರು ಗೋಮುಖ ವ್ಯಾಘ್ರಗಿಂತ ಉತ್ತಮರಲ್ಲ, ಅಪರುಪಯೋಮುಖವಿಷಕುಂಭರುಎಂಬ ಅಂಶವನ್ನು ಪುಸ್ತಕದಮುಖ ಚಿತ್ರವೇ ಹೇಳುತ್ತದೆ.

ಆವೇಶ ಚಾಂಚಲ್ಯಗಳು

ನಿರಪರಾಧಿಯನ್ನು ಅವೇಶಭ್ರಮಿಷ್ಟರಾದ ಜನರು ಅಪರಾಧಿಯೆಂದು ಗಣಿಸಿ ಕೋಲಾಹಲವೆಬ್ಬಿಸಿದ ಕಾರ್ಯದ ಮೇಲೆ ಗ್ರಂಥಕರ್ತರು ಮಾಡಿದ ಟೀಕೆ ವಿಡಂಬನದ ಸಾರಸರ್ವಸ್ವವಾಗಿದೆ.

"ಅವನ ಮೇಲೆ ಜನ ಎಳೆದಿದ್ದ ಪರದೆ ಅಷ್ಟು ಬಿಗಿಯಾಗಿತ್ತು. ಅಲ್ಲದೆ, ಪಬ್ಲಿಕ್ ಪ್ರಾಸಿಕ್ಯೂಟರರೇ ಮೊದಲಾದ ಪ್ರತಿಭಾಶಾಲಿಗಳು ಆ ಪರದೆಯನ್ನು ನೆರಿಗೆನೆರಿಗೆಯಾಗಿ ಹಿಡಿದು ಜನರ ಮುಂದೆ ಮನಮೆಚ್ಚುವಂತೆ ಎಳೆದು ಕಟ್ಟಿದರು. ಎಲ್ಲರೂ ಆ ಪರದೆಯನ್ನು ನೋಡುವವರೆ! ಅದರ ಹಿಂದೆ ಹೋಗಿ ತುಡುಕಬಲ್ಲ ಧೈರ್ಯ ಅವರಿಗೆ ಇರಲಿಲ್ಲವೋ ಏನೋ. ಒಬ್ಬೊಬ್ಬರು ಒಂದೊಂದು ಪರದೆಯನ್ನು, ಮುಖವಾಡವನ್ನು ಹಾಕಿಕೊಂಡು ಅದರ ಮುಚ್ಚಿನಲ್ಲೇ ತಮ್ಮ ತಮ್ಮ ಮುಖವನ್ನು ಮರೆಸಿಕೊಂಡು ಜೀವನ ಸಾಗಿಸುತ್ತಿದ್ದುದರಿಂದ ಪರದೆಯ ಹಿಂದೆ ಹೋಗಿ ತಡಕಲು ಅವರು ಅಂಜುತ್ತಿದ್ದರೋ ಏನೋ!..." ಮತ್ತು ಅಪರಾಧಿ ಸ್ಥಾನದಲ್ಲಿ ನಿಂತ ಮನುಷ್ಯನ ಬಾಯಿಂದ "ನೀರುಗುಳ್ಳೆಯಂತಿರುವ ಈ ನನ್ನ ದೇಹಕ್ಕಿಂತಲೂ ನಿಗಿಲಾದ, ಅಮರವಾದಆತ್ಮವನ್ನು ನಿಮ್ಮ ಮುಂದೆ ತೋರುವ ಅಧಿಕಾರವಾದರೂ ನನಗೆಲ್ಲಿಯದು" ಎಂದು ನುಡಿಸಿರುವುದರಲ್ಲಿ ಆ ನಾಗರಿಕತೆ ಆತ್ಮರಹಿತವಾದದು, ಅಸತ್ಯವೇಷ್ಟಿತವಾದುದು, ದಂಭಾಡಂಬರನಿರ್ಭರವಾದುದು; ಇಂಥ ನಾಗರಿಕತೆಯು ಪ್ರಹಸನ, ನಾಟಕೀಯ ವಿಡಂಬನ, ಪ್ರಚ್ಛನ್ನ ಕ್ರೌರ್ಯ, ಅನಾಗರಿಕತೆ ಎಂದು ಸೂಚಿಸಿದ್ದು ಕಂಡುಬರುತ್ತದೆ. ಪುಸ್ತಕದ ಸಾಲುಸಾಲಿನಲ್ಲೂ ಪದಪದದಲ್ಲೂ ಈ ನಗೆಯ ಕಟುಸತ್ಯಾವಿಷ್ಕರಣವನ್ನು ಕಾಣಬಹುದಾಗಿದೆ.

ಕೃಷ್ಣಮೂರ್ತಿಯವರಿಗೆ ಹರಟೆಯ ಶೈಲಿಗೆ ಉಚಿತವಾದ ಗ್ರಾಮ್ಯದ ಓಜಸ್ವಿಯಾದ ಓಟ ಅಳವಟ್ಟಿದೆ; ವ್ಯಂಗ್ಯದ ಬಾಗುಗತ್ತಿಯ ಇರಿತದ ಕೌಶಲ ಸಾಕಷ್ಟಿದೆ. ಅವರ ವಾಕ್ಯವೆಂದರೆ ಅಸಿಷ್ಣದ ಮೇಲೆ ಹೊಡೆದ ಚಿನ್ನದ ಚಾಟಿಯ ಏಟು, ಸುಕುಮಾರಪ್ರಹರಣ, ಅಹಿಂಸಾರೂಪದ ಶಿಕ್ಷಾತ್ಮಕ ಶಿಕ್ಷಣಾರ್ಥದ ಹಿಂಸೆ. ಇವರ ಕೊರಲಗಿನ ಲೇಖನಿಯಿಂದ ಜಡರನ್ನೂ ದುರಹಂಕಾರಿಗಳನ್ನೂ ಹೊಡೆದೆಚ್ಚರಿಸಿ ಕರ್ತವ್ಯೋಪದೇಶ ಮಾಡುವ ಇನ್ನೂ ಇಂತಹ ಹಲವಾರು ಕಿರುಗತೆ ಅಥವಾ ಹರಟೆಗಳು ಹೊರಬೀಳಲೆಂದು ಹಾರೈಸುತ್ತೇವೆ.

ಸಾಂಖ್ಯತತ್ವಸಾರ

ಬರೆದವರು ಮತ್ತು ಪ್ರಕಾಶಕರು: ವೈದ್ಯಗುರು ವಾ. ಅ. ಹಲಸೀಕರ, ಆಯುರ್ವೇದ ಪ್ರಸಾರಕ ಮಂಡಲ, ಅತ್ರೇಯ ಸದನ, ೧೮೫೦, ಹುಬ್ಬಳ್ಳಿ. ಪುಟ ೭೮, ಬೆಲೆ ೨ ರೂಪಾಯಿಗಳು.

ಸಾಂಖ್ಯವೆಂಬುದು ಹಿಂದುಸ್ಥಾನದ ಆರು ಶಾಸ್ತ್ರ ಅಥವಾ ಷಡ್ದರ್ಶನಗಳಲ್ಲಿ ಅತಿಪ್ರಾಚೀನವಾದುದು. ಶಾರೀರಿಕ ಮೀಮಾಂಸೆ ಮಿಕ್ಕ ಐದು ದರ್ಶನಗಳಿಗೆ ಅದು ಕೊಟ್ಟ ಮುಖ್ಯ ಕಾಣಿಕೆ ಭಗವದ್ಗೀತೆ ಸಾಂಖ್ಯವನ್ನವಲಂಬಿಸಿರುವುದು ಸ್ಪಷ್ಟವಿದೆ. ಶವಿಭಾವಶಾದಿಗಳಿಗೆ ಪ್ರಕೃತಿ ಪುರುಷ, ಶಿವಶಕ್ತಿಯರ ಕಲ್ಪನೆಯನ್ನು ಕೊಟ್ಟದ್ದು ಇದೇ. ಜಡಪ್ರಕೃತಿಯನ್ನು ಕ್ರಿಯಾತ್ಮಕವೆಂದೂ ಚೈತನ್ಯಾತ್ಮಕ ಪುರುಷನನ್ನು (ಅಸಂಖ್ಯ ಆತ್ಮನನ್ನು) ನಿರ್ಗುಣ ಬ್ರಹ್ಮನೆಂದೂ ಸಾರಿದ ಧಾರ್ಷ್ಟ್ಯ ಕಾಪಿಲರಾದ ಸಾಂಖ್ಯರದು. ಅವರು ನಿರೀಶ್ವರವಾದಿಗಳು. ಪುರುಷದೃಷ್ಟಿ ಪ್ರಕೃತಿಯ ಮೇಲೆ ಬೀಳುವುದರಿಂದ ಆ ಸ್ತ್ರೀಲಿಂಗಾವಚ್ಛಿನ್ನೆ ಕ್ರಿಯೆಗಾರಂಭಿಸುವಳು, ಅದರಿಂದ ಸೃಷ್ಟಿ ಸ್ಥಿತಿ ಲಯಗಳಾಗುವುವು. ಆಕೆಯ ಕಾರ್ಯ ತನ್ನದೆಂದುಕೊಂಡ ಅಜ್ಞಾನ ನಷ್ಟವಾದರೆ ಪುರುಷನಿಗೆ ಅಥವಾ ಸ್ತ್ರೀಪುಂರೂಪದ ಜೀವಿಗೆ ಮುಕ್ತಿ ಲಭಿಸುವುದು ಎಂಬುದು ಈ ಸತ್ಕಾರ್ಯವಾದಿಗಳ ಮತ.

ಸೃಷ್ಟಿಯಾದ ಬಗೆ ಹೇಗೆಂಬುದನ್ನು ವಿವರಿಸುವ ಕಲ್ಪನೆಯ ಒಂದು ಕಟ್ಟಿಗೆ ಸಾಂಖ್ಯರ ಷಷ್ಟಿತಂತ್ರವೆನ್ನಲಾಗಿದೆ. ಇದರಲ್ಲಿ ಐದು ಪ್ರಕಾರದ ವಿಪರ್ಯಯಗಳನ್ನೂ ಇಪ್ಪತ್ತೆಂಟು ಪ್ರಕಾರದ ಅಶಕ್ತಿಗಳನ್ನೂ ಒಂಬತ್ತು ಪ್ರಕಾರದ ತುಷ್ಟಿಗಳನ್ನೂ ಎಂಟು ಪ್ರಕಾರದ ಸಿದ್ಧಿಗಳನ್ನೂ ಹೇಳಲಾಗಿದೆ. ಈ ತಂತ್ರಕ್ಕೆ ಜಡ ಮತ್ತು ಚೇತನ ಎಂಬ ದ್ವೈತ ತತ್ವವೇ ಆಧಾರ. ಪ್ರಕೃತಿ, ಮಹತ್ತು, ಅಹಂಕಾರ ಮುಂತಾದ ೨೫ ತತ್ವಗಳ ಮತ್ತು ಸತ್ವರಜಸ್ತಮಗಳೆಂಬ ಗುಣಗಳ ಕಲ್ಪನೆ ಈ ದರ್ಶನದ ಜೀವನಾಡಿಯೆನಿಸಿದೆ.

ಪುಸ್ತಕದಲ್ಲಿ ೭೦ ಮೂಲ ಸಾಂಖ್ಯ ಕಾರಿಕೆಗಳನ್ನು ಅವುಗಳಲ್ಲಿ ಪ್ರತಿಯೊಂದಕ್ಕೂ ಅನ್ವಯ, ಅರ್ಥ, ಮತ್ತು ವಿಸ್ತೃತ ವಿವರಣಗಳನ್ನೂ ಕೊಡಲಾಗಿದೆ. ಈ ಅನ್ವಯಾದಿಗಳ ಸಹಾಯದಿಂದ ಸಾಂಖ್ಯಸಿದ್ಧಾಂತದ ಬಾಹ್ಯದ ಸ್ಥೂಲ ರೂಪರೇಷೆಗಳನ್ನು ಓದುಗರು ಸ್ಫುಟವಾಗಿ ತಿಳಿದುಕೊಳ್ಳಬಹುದು. ಇದು ನ್ಯಾಯಶಾಸ್ತ್ರದಂತೆಯೇ ವೈದ್ಯಕೀಯ ಅಭ್ಯಾಸಕ್ಕೆ ಸಹಕಾರಿ ಎಂಬ ಕಾರಣದಿಂದ ತಾವು ಇದರ ಪರಿಚಯ ಮಾಡಿಕೊಡಲು ಹೊರಟಿದ್ದಾಗಿ ಬರಹಗಾರರು ಹೇಳಿದ್ದಾರೆ. ಈ ಶಾಸ್ತ್ರ ಎಲ್ಲ ಶಾಸ್ತ್ರಗಳ ತಳಹದಿಯಲ್ಲಿರುವದರಿಂದ, ಅದಿ ಬುನಾದಿಯೆನಿಸಿರುವುದರಿಂದ ಇದರ ಪ್ರಕ್ರಿಯ ಪರಿಭಾಷೆಗಳ ಸಮ್ಯಗರ್ಥ ಜ್ಞಾನ ತತ್ವಜಿಜ್ಞಾಸುವಿಗಷ್ಟೇ ಅಲ್ಲದೆ ಭಾರತದ ಯಾವ ಪ್ರಾಚೀನ ಶಾಸ್ತ್ರದ ಅಭ್ಯಾಸಕ್ಕೂ ಅವಶ್ಯಕವೆಂದರೆ ತಪ್ಪಾಗದು. ಮುದ್ರಣವನ್ನು ಮಾತ್ರ ಚೆನ್ನಾಗಿದೆಯೆನ್ನಲು ಶಕ್ಯವಿಲ್ಲ. ಲೇಖಕರ ಕಾಲಪದಗಳ ರೂಪಜ್ಞಾನದ ಮುಂದೆ ಪ್ರಶ್ನಚಿಹ್ನವಿಕ್ಕಿಡಬೇಕಾಗಿದೆ.

ಸರ್ವಜ್ಞ ಸಂದೇಶ

ಪ್ರತಿತಿಂಗಳು –ಬೆಂಗಳೂರಿನಿಂದ ಹೊರಡುವ ಪತ್ರಿಕೆ ಸಂಪಾದಕರು ಪಂಡಿತ ಚೇಮನಹಳ್ಳಿ ರಘುನಾಥಾಚಾರ್ಯರು. ನಂ. ೨೩ ಹಯವದನಸದನ ೬ ನೇ ಬೀದಿ ಚಾಮರಾಜಪೇಟೆ ಬೆಂಗಳೂರು ನಗರ.

ಈ ಮಾಸಪತ್ರಿಕೆಯ ಮೊದಲಿನ ಎರಡು ಸಂಚಿಕೆಗಳುನಮ್ಮ ಕೈಸೇರಿವೆ-ಶ್ರೀಮಟ್ಟೇರಾಕೃತಪ್ಪದರ ಪುಣ್ಯತಿಥಿಯ ಶುಭದಿನದಿಂದ ಆಚಾರ್ಯರು ಪತ್ರಿಕೆಯನ್ನು ಹೊರಡಿಸಲು ಪ್ರಾರಂಭಿಸಿದ್ದಾರೆ. ವೇದ, ಉಪನಿಷತ್ತು, ವೇದಾಂತ, ಗೀತಾ, ಸೂತ್ರಪ್ರಸ್ಥಾನ, ಧರ್ಮಶಾಸ್ತ್ರ, ಪುರಾಣ ಮೊದಲಾದವುಗಳಲ್ಲಿಯ ಹಿತನುಡಿಗಳನ್ನು ಆಬಾಲವೃದ್ಧ ಸ್ತ್ರೀ ಪುರುಷರು ಪಂಡಿತ ಪಾಮರರಿಗೆಲ್ಲ ತಿಳಿಸಿಕೊಡಬೇಕೆಂಬುದನ್ನು ಲಕ್ಷ್ಯವಾಗಿಟ್ಟುಕೊಂಡು ಈ ಪತ್ರಿಕೆಯನು ಹೊರಡಿಸಿದ್ದಾಗಿದೆ. ಕಲಿಯುಗದ ಮಹಿಮೆಯಿಂದ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವವು ಹೆಚ್ಚಿದ್ದರಿಂದ ನಮ್ಮ ಪ್ರಾಚೀನ ಸಂಸ್ಕೃತಿಯನ್ನು, ಭಾರತವು ಪರಂಪರೆಯನ್ನುಮರೆತು ಬಿಟ್ಟು ಅದರಲ್ಲೇನಿದೆಯೆಂದು ಹೀಯಾಳಿಸಹತ್ತಿದೆಯಲ್ಲದೆ ಸಾವಿರಾರು ವರುಷಗಳಿಂದ ನಡೆದು ಬಂದು ಜಗತ್ತಿನಲ್ಲೆಲ್ಲ ಖ್ಯಾತಿಹೊಂದಿದ ಪ್ರಾಚೀನ ಶಾಸ್ತ್ರಕ್ಕೇ ಎರವಾಗುತಿರುವದು. ನಮ್ಮ ಪ್ರಾಚೀನ ವೇದಾಂತ ದೃಷ್ಟಿಯನ್ನು ವಿವೇಚನ ಪದ್ಧತಿಯನ್ನು, ಆಚಾರ ವಿಚಾರಗಳನ್ನು, ಸಾಮಾಜಿಕ ಬಂಧನಗಳನ್ನು, ನೈತಿಕ ಕರ್ತವ್ಯಗಳನ್ನು ತಿಳಿಸಿಕೊಡುವದಕ್ಕೆ ಇಂಥ ಪತ್ರಿಕೆಗಳು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ. ಆಚಾರ್ಯರು ಕೇವಲ ಪುಸ್ತಕಶಾಸ್ತ್ರದ ತಿರುಳನ್ನಷ್ಟೇ ತಿಳಿಸಲು ಮುಂದಾಗದೆ ಭಾರತೀಯರ ಹಿಂದಿನ ಪರಂಪರೆಯನ್ನು ಉಳಿಸಿಕೊಳ್ಳುವದಕ್ಕೆ ಯಾವ ಬಗೆಯ ಆಚರಣೆಯನ್ನು ಮಾಡಬೇಕೆಂಬದನ್ನೂ ತಿಳಿಸಲಣಿಯಾಗಿರುವರು. ಪ್ರಸ್ತುತ ಸಂಚಿಕೆಗಳಲ್ಲಿ ಈಶಾವಾಸ್ಯ ಉಪನಿಷತ್ತು, ಬ್ರಹ್ಮಸೂತ್ರಾರ್ಥಸಾರ ಸಂಗ್ರಹ ಪ್ರಸಿದ್ಧವಾಗಿರುವವಲ್ಲದೆ ಇನ್ನಿತರ ಉಪಯುಕ್ತ ಮಾಹಿತಿಯೂ ಪ್ರಸಿದ್ಧವಾಗಿದೆ. ಸನಾತನ ಧರ್ಮಾಭಿಮಾನಿಗಳೆಲ್ಲ ಈ ಪತ್ರಿಕೆಗೆ ಉದಾರಾಶ್ರಯ ಕೊಟ್ಟು ಚಿರಕಾಲ ಇದು ಜನಸೇವೆ, ರಾಷ್ಟ್ರಸೇವೆ ಮಾಡುವಂತೆ ಆಚಾರ್ಯರನ್ನು ಪ್ರೋತ್ಸಾಹಿಸಬೇಕೆಂದು ಸೂಚಿಸುತ್ತೇವೆ- ಈ ಪತ್ರಿಕೆಯ ವಾರ್ಷಿಕ ಚಂದಾ ೪ ರೂಪಾಯಿ ಬಿಡಿಪತ್ರಿಕೆಗೆ ೮ ಆಣೆ ಮಾತ್ರ ಇದೆ.

ಕೈಲಾಸ— ಮಾನಸ ಸರೋವರ ಯಾತ್ರೆ

ಬರೆದವರು ಶ್ರೀ ಕೃಷ್ಣ ನಾರಾಯಣ ಗೋಸಾವಿ. ಪ್ರಕಾಶಕರು ಸ್ವಾತಂತ್ರ್ಯ ಪ್ರಕಾಶನ. ಧಾರವಾಡ. ಪುಟ ೮೮, ಬೆಲೆ ೧೨ ಆಣೆಗಳು.

"ಭಾರತ ಸಂಚಾರಿ" ಎಂಬ ಗ್ರಂಥಕರ್ತರ ಬಿರುದೇ ಸಾಕು, ಅವರ ಯಾತ್ರಾಚಾತುರ್ಯವನ್ನು ನಿದರ್ಶಿಸಲು ಕೈಲಾಸ ಪರ್ವತ, ಮಾನಸ ಸರೋವರ, ನೇಪಾಳ, ತಿಬೇಟ ಮೊದಲಾದ ಸ್ಥಳಗಳನ್ನು ಸಂದರ್ಶಿಸಿದ ಗೋಸಾವಿಗಳು ತಾವು ಕಂಡ ಜೀವನದ ವಿಚಿತ್ರ ಚಿತ್ರಗಳನ್ನು, ಭೂಭಾಗಗಳ ಅಪೂರ್ವ ವರ್ಣನೆಗಳನ್ನು, ಜನ ಮತ್ತು ಸಮಾಜಗಳ ವಿಲಕ್ಷಣ ರೀತಿನೀತಿಗಳನ್ನು ಸ್ಥೂಲವಾಗಿಯಾದರೂ ರುಚಿಕಟ್ಟಾಗಿ ಈ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಪ್ರವಾಸ ಸಾಹಿತ್ಯ ವರ್ಗಕ್ಕೆ ಸೇರುವ ಇಂಥ ಪುಸ್ತಕಗಳು ವಿಷಯ ಸಂಗ್ರಹದ ದೃಷ್ಟಿಯಿಂದಲೂ ಪರನಿರ್ವ್ಯಕ್ತಿಯ ದೃಷ್ಟಿಯಿಂದಲೂ ಎಲ್ಲರಿಗೂ ಗ್ರಾಹ್ಯವೆನಿಸದಿರವು.

ಗವರ್ನರ್ ಜನರಲ್ ರಾಜಗೋಪಾಲಾಚಾರ್ಯರ ಸಂದೇಶ

ಆತ್ಮವಿಶ್ವಾಸವನ್ನು ನೆಮ್ಮಿರಿ; ಸರಕಾರಕ್ಕೆ ನೆರವಾಗಿರಿ!

"ನಾವು ಸ್ವಾತಂತ್ರ್ಯದ ಮೂರನೆಯ ವರ್ಷದಲ್ಲಿ ಪದಾರ್ಪಣ ಮಾಡುತ್ತಿದ್ದೇವೆ. ಬಂಧು ಭಗಿನಿಯರೆ, ನಿಮ್ಮೆಲ್ಲರ ಪರವಾಗಿ, ಮೊಟ್ಟಮೊದಲು, ನಾನು ಬಾಪೂಜಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಅವರ ಆತ್ಮ ನಮಗೆ ಸದಾಸಾಕ್ಷಿಯಾಗಿರಲಿ.

ತೊಡಕುಗಳನ್ನು ಮನಗಂಡು ಸಹಕರಿಸಿರಿ

ಕೇಂದ್ರದಲ್ಲಿಯೂ ಪ್ರಾಂತಗಳಲ್ಲಿಯೂ ಇರುವ ಸರಕಾರಗಳೂ ರಾಷ್ಟ್ರಸೇವೆಯಲ್ಲಿ ನಿರತವಾಗಿರುವ ಇತರ ಸಾರ್ವಜನಿಕ ಸಂಸ್ಥೆಗಳೂ ಸಮಸ್ಯೆಗಳನ್ನು ಬಿಡಿಸಲು ಶಕ್ತಿಮೀರಿ ಹೆಣಗುತ್ತಿವೆ. ನಮ್ಮ ಸಮಸ್ಯೆಗಳು ವಿವಿಧವಾಗಿವೆ, ಜಟಿಲವಾಗಿವೆ. ಜನರೆಲ್ಲರಿಗೂ ಸಾಮಾನ್ಯವಾಗಿ ಸಮ್ಮತವಾಗಿರುವ ಧೋರಣೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕೂಡ ಒಂದೆರಡಲ್ಲ ಹಲವು ಎಡರುತೊಡರುಗಳು ಉದ್ಭವಿಸುತ್ತಿವೆ. ಈ ಎಡರುತೊಡರುಗಳು ನಿವಾರಣೆ ಹೊಂದಬೇಕಾದರೆ ಜನರು ತೊಡಕುಗಳನ್ನು ಮನಗಂಡು ಹೃತ್ಪೂರ್ವಕವಾಗಿ ಸಹಕರಿಸಲು ನಿರ್ಧರಿಸಬೇಕು.

ಆಹಾರ ಮತ್ತು ಗೊಬ್ಬರ

ಆಹಾರ ಮತ್ತು ಗೊಬ್ಬರಗಳ ವಿಷಯದಲ್ಲಿ ಚಿಂತೆಯನ್ನು ವ್ಯಕ್ತಗೊಳಿಸಿ ಆ ಬಗ್ಗೆ ಜನರಿಗೆ ಬಿನ್ನಹವನ್ನು ಈ ಮೊದಲೇ ನಾನು ಹೊರಡಿಸಿದ್ದೇನೆ. ಅದೇ ನಮ್ಮ ತತ್‌ಕ್ಷಣದ ಮತ್ತು ಅತ್ಯಂತ ಮಹತ್ವದ ರಾಷ್ಟ್ರೀಯ ಕಾರ್ಯಕ್ರಮ.

> ಅನ್ನಂ ಬ್ರಹ್ಮೇತಿ ವ್ಯಜಾನಾತ್।
> ಅನ್ನಾದೇವ ಖಲ್ವಿಮಾನಿ ಭೂತಾನಿ ಜಾಯಂತೇ।
> ಅನ್ನೇನ ಜಾತಾನಿ ಜೀವಂತಿ।
> ಅನ್ನಂ ಪ್ರಯಂತ್ಯಭಿಸಂವಿಶಂತಿ॥
> ಅನ್ನಂ ನ ನಿಂದ್ಯಾತ್ ತದ್ವ್ರತಮ್।
> ಅನ್ನಂ ನ ಪರಿಚಕ್ಷೀತ ತದ್ವ್ರತಮ್।
> ಅನ್ನಂ ಬಹು ಕುರ್ವೀತ ತದ್ವ್ರತಮ್।
> ನ ಕಂಚನ ವಸತೌ ಪ್ರತ್ಯಾಚಕ್ಷೀತ ತದ್ವ್ರತಮ್।

ಇವು ನಮ್ಮ ಪ್ರಾಚೀನ ಶಾಸ್ತ್ರವಚನಗಳು. ಅವುಗಳ ತಾತ್ಪರ್ಯ ಹೀಗೆ: ಅನ್ನದಿಂದಲೆ ಸಮಸ್ತ ಜೀವರಾಶಿಗಳು ಉತ್ಪನ್ನವಾಗುತ್ತವೆ ಮತ್ತು ಅನ್ನದ ಬಲದಿಂದಲೇ ಅವು ಬದುಕುತ್ತವೆ. ಅವು ಪುನಃ (ಮರಣಾನಂತರ) ಇತರ ಜೀವಿಗಳಿಗೆ ಅನ್ನವಾಗಿಯೆ ಮಾರ್ಪಡುತ್ತವೆ. ಅರ್ಥಾತ್ ಅನ್ನವೇ ಬ್ರಹ್ಮ ಅಥವಾ ದೇವರು. ಅನ್ನವನ್ನು ಚೆಲ್ಲಬಾರದು, ಅನ್ನವನ್ನು ಧಾರಾಳವಾಗಿ ಬೆಳೆಸಬೇಕು. ಹಸಿದು ಬಂದವನು ಯಾವ ಮನೆಯಿಂದಲೂ ಹೊರಗಟ್ಟಲ್ಪಡದಿರಲಿ. ಇವು ಬಹಳ ಪ್ರಾಚೀನ ಕಾಲದ ನುಡಿಗಳು. ಆದರೂ ಅಂದಿನಷ್ಟೇ ಇಂದಿಗೂ ಅವು ಹೊಂದಿಕೆಯಾಗುತ್ತವೆ.

ದೆವ್ವನ ಮನೆಯಲ್ಲ

ಪ್ರಕೃತಿಸಂಪತ್ತಿಯಲ್ಲಿಯೂ ಜೀವನದ ಸ್ಥಿತಿಗತಿಗಳಲ್ಲಿಯೂ ನಾವು ಜಗತ್ತಿನ ಬೇರೆ ಎಷ್ಟೋ ರಾಷ್ಟ್ರಗಳ ಜನರಿಗಿಂತ ಎಷ್ಟು ಸುದೈವಿಗಳಾಗಿದ್ದೇವೆಂದು ಜನರಿಗೆ ಅರಿವಿಲ್ಲ. ನಮ್ಮ ನರನಾರಿಯರು ಜಗತ್ತಿನ ಇತರ ಭಾಗಗಳ ನರನಾರಿಯರಿಗಿಂತ ಕಡಿಮೆ ಪ್ರಾಮಾಣಿಕರಲ್ಲ. ವ್ಯರ್ಥ ಆತ್ಮಗ್ಲಾನಿ ಮತ್ತು ಆತ್ಮಾವಹೇಲನದಿಂದ ಯಾವ ಫಲವೂ ಇಲ್ಲ. ಆತ್ಮವಿಶ್ವಾಸವೇ ಸಾಹಸದ ಅಸ್ತಿವಾರ. ಭಗ್ನಮನೋರಥರೂ ನಿಸ್ಸತ್ವ ಭಾವದಿಂದ ಪೀಡಿತರೂ ಆದವರು ತಮಗೆ ತಾವೇ ಈ ಕೆಳಗಿನ ಪ್ರಶ್ನೆಯನ್ನು ಕೇಳಿಕೊಳ್ಳಬೇಕೆಂದು ಸೂಚಿಸುವೆ: ನಮ್ಮ ರಾಷ್ಟ್ರದ ಆತ್ಮವಿಶ್ವಾಸವನ್ನಾಗಲಿ ಸರಕಾರದ ಪ್ರತಿಷ್ಠೆಯನ್ನಾಗಲಿ ಕುಗ್ಗಿಸುವದರಿಂದ ಪರಿಸ್ಥಿತಿ ಸುಧಾರಿಸುತ್ತದೆಯೆ? ಬದುಕಿ ಬಾಳಬೇಕೆಂಬ ಇಚ್ಛೆ ನಮಗಿದ್ದರೆ ನಾವು ಪರಸ್ಪರ ಸಹಕರಿಸಿ ಆತ್ಮವಿಶ್ವಾಸವನ್ನು ಪುನರುಜ್ಜೀವನಗೊಳಿಸಬೇಕು ಮತ್ತು ವಿದೇಶಗಳಲ್ಲಿ ನಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಬೇಕು. ನಿಮ್ಮ ಮನೆಯಲ್ಲಿ ದೆವ್ವದ ಆವಾಸವುಂಟೆಂದು ನಂಬಿ ನೀವೇ ಆ ಭಾವನೆಯನ್ನು ಹಬ್ಬಿಸುತ್ತ ಹೋದರೆ ಅದಕ್ಕೆ ಬಾಡಿಗೆ [illegible]ವ ಅಥವಾ ಒಳ್ಳೆಯ ಬೆಲೆಗೆ ಅದನ್ನು ಮಾರುವ ಆಸೆಯನ್ನು ನೀವು ಇಟ್ಟುಕೊಳ್ಳಲಾರಿರಿ. ನೀವು ಮನೆಯ ಕಿಟಿಕಿಗಳ ಬಾಗಿಲುಗಳನ್ನು ತೆರೆದಿಕ್ಕಿ ಅಲ್ಲಿಯೆ ಬಾಳುವೆ ಮಾಡಿ ಅದನ್ನು ಬೆಳಗಿಸಬೇಕು. ಆಗ ನಿಮಗೆ ವಿಚಿತ್ರ ಧ್ವನಿಗಳೂ ಕೇಳಬರಲಿಕ್ಕಿಲ್ಲ, ದೆವ್ವಗಳೂ ಓಡಿಹೋದಾವು.

ಸರಕಾರವನ್ನು ಬಲಗೊಳಿಸಿರಿ, ಗೌರವಿಸಿರಿ

ತನ್ನ ಪಾಡಿಗೆ ತಾನಿರುವುದೆಂದು ಪ್ರಜಾತಂತ್ರದ ಅರ್ಥವಲ್ಲೆಂಬುದು ಸ್ವಯಂವೇದ್ಯ. ಸಾರ್ವಜನಿಕ ಕಲ್ಯಾಣವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ನಮ್ಮೀ ದೇಶದ ವಿಸ್ತಾರವೂ ನಮ್ಮ ಪ್ರಜಾಸಂಖ್ಯೆಯೂ ಪ್ರಜಾಯೋಗ್ಯತೆಯೂ ಎಂಥವೆಂದರೆ, ಪ್ರಾಚೀನ ಕಾಲದಲ್ಲಿ ನಿರಂಕುಶ ಪ್ರಭುಗಳು ತಮ್ಮ ಅಧಿಕಾರವನ್ನು ಎಷ್ಟು ಜಾಗರೂಕತೆಯಿಂದಲೂ ಸಾಹಸದಿಂದಲೂ ಕಾಪಾಡಿಕೊಳ್ಳುತ್ತಿದ್ದರೋ ಅಷ್ಟೇ ಜಾಗರೂಕತೆ ಸಾಹಸಗಳಿಂದ ನಮ್ಮ ಪ್ರಜಾತಂತ್ರಾತ್ಮಕ ಸರಕಾರವನ್ನು ನಾವು ಕಾಪಾಡಿಕೊಳ್ಳದಿದ್ದರೆ ಪ್ರಜಾತಂತ್ರವು ಇಲ್ಲಿ ಖಂಡಿತವಾಗಿ ಕುಸಿದುಬೀಳದಿರದು. ರಾಜ್ಯದ ಅಧಿಕಾರಕ್ಕೆ ಯಾವುದಾದರೊಂದು ಆಶ್ರಯ ಬೇಕು ಮತ್ತು ಅದು ಪರಿಣಾಮಕರವಾಗಿ ನಡೆಯಬೇಕು.

ಪ್ರಜಾತಂತ್ರದಲ್ಲಿ ವಿರೋಧಿ ಪಕ್ಷ

ನಮ್ಮ ರಾಜ್ಯದಲ್ಲಿ ಅಧಿಕಾರಾಪನ್ನರಾಗಿರುವವರು ಯಾವ ರೀತಿಯಲ್ಲಿಯೂ ನಿರಂಕುಶಾಧಿಕಾರಿಗಳಲ್ಲ. ಅವರಿಗೆ ಒಳಸಂಚಿನ ಚಟುವಟಿಕೆಗಳು ಬೇಕಾಗಿಲ್ಲವೇನೋ ನಿಜ, ಆದರೆ ಅಭಿಪ್ರಾಯಗಳನ್ನು ಹತ್ತಿಕ್ಕಲು ಅವರೆಂದಿಗೂ ಬಯಸಿಲ್ಲ. ಟೀಕೆಗಳನ್ನೂ ವಿರೋಧವನ್ನೂ ಅವರು ಸ್ವಾಗತಿಸುತ್ತಾರೆ. ಆದರೆ ಅದು ಅವ್ಯವಸ್ಥೆಯನ್ನುಂಟುಮಾಡುವ ಇಚ್ಛೆಯ ಮಟ್ಟಕ್ಕಿಳಿದಿರಬಾರದು, ಅಷ್ಟೆ. ಈ ಹಸುಳೆ ಪ್ರಜಾತಂತ್ರವು ಹಿಂಸೆಯನ್ನೂ ಅವ್ಯವಸ್ಥೆಯನ್ನೂ ತಾಳಿಕೊಂಡು ಬಾಳಲಾರದು. ಎಲ್ಲ ಶಾಸನಸಭೆಗಳಲ್ಲೂ ಈಗಿರುವ ಸರಕಾರಗಳಿಗೆ ಇಷ್ಟು ಬಹುಮತವಿರುವುದು ಅವುಗಳ ತಪ್ಪಲ್ಲ. ವಿರೋಧಪಕ್ಷಗಳಿರುವಲ್ಲೆಲ್ಲ ಅವಕ್ಕೆ ಅನಿರ್ಬಂಧವಾಗಿ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಅವಕಾಶ ಕೊಡಲಾಗಿದೆ. ಇದೇ ಪ್ರಜಾತಂತ್ರಕ್ಕೂ ಸರ್ವಾಧಿಕಾರಕ್ಕೂ ಇರುವ ಮುಖ್ಯ ಭೇದ. ಆದರೆ ಪ್ರಜಾತಂತ್ರದ ಚೈತನ್ಯವನ್ನು ಹೆಚ್ಚಿಸಲೆಂದು ಅಸ್ವಾಭಾವಿಕವಾಗಿ ವಿರೋಧಿ ಪಕ್ಷಗಳನ್ನು ಉಂಟುಮಾಡುವದು ಸಲ್ಲದ ಮಾತು. ನಾನು ಈ ಮಾತುಗಳನ್ನು ಹೇಳಲು ಕಾರಣವೇನೆಂದರೆ, ನಾವು ಸರ್ವಾಧಿಕಾರವಾದಿಗಳಾಗಿದ್ದು ವಿರೋಧಿಗಳನ್ನು ಹತ್ತಿಕ್ಕುತ್ತಿದ್ದೇವೆಂಬ ಭಾವನೆಯ ಆಧಾರದಿಂದ ಚರ್ಚೆಗಳು ನಡೆಯುತ್ತಿರುವುದು ನನಗೆ ಕಂಡುಬಂದಿದೆ. ಸದ್ಯದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಿಗಿರುವ ಹೆಚ್ಚಿನ ಬಹುಮತದಿಂದ ಉದ್ಭವಿಸಿದ ಭ್ರಾಂತಿಯಿದು. ಮುಂದೆ ಎಂದಾದರೂ ನಮ್ಮ ರಾಷ್ಟ್ರಭಕ್ತಿ ಈಗಿಗಿಂತಲೂ ಸಂಕುಚಿತವಾದ ಧ್ಯೇಯ ಧೋರಣೆಗಳ ತಳಹದಿಯಲ್ಲಿ ಕವಲೊಡೆಯಬಹುದು. ಆದರೆ ಇಂಥ ಸ್ಥಿತಿ ಸ್ವಾಭಾವಿಕವಾಗಿ ವಿಕಾಸಹೊಂದುವವರೆಗೆ ನಾವು ಕಾಯಬೇಕು. ಅಂಥ ಭೇದಗಳನ್ನು ಅವು ಪಕ್ವವಾಗುವ ಮೊದಲೇ ಬಲಾತ್ಕಾರದಿಂದ ಕಾರ್ಯಕ್ಕೆ ತರುವದರಿಂದ ಲಾಭವಿಲ್ಲ.

ಏಕಪ್ರಕಾರವಾದ ಪ್ರಗತಿಗೆ ಸ್ಥಿರ ಸರಕಾರ ಬೇಕು

ಅಧಿಕಾರಾರೂಢ ಜನರನ್ನು ಬದಲಿಸುವ ಅವಕಾಶ ಮತ್ತು ಹಕ್ಕು ಇರುವುದೇ ಪ್ರಜಾತಂತ್ರಾತ್ಮಕ ಘಟನೆಯ ಸಾರವೆಂಬುದು ನಿಜ. ಆದರೆ ಈ ಹಕ್ಕನ್ನು ಉಪಯೋಗಿಸುವಲ್ಲಿ ಒಪ್ಪಿಗೆಯಾದ ಒಂದು ಹೊಸ ಧೋರಣೆಯನ್ನೂ ಆ ಧೋರಣೆಯಲ್ಲಿ ನಿಶ್ಚಿತವಾದ ವಿಶ್ವಾಸವಿದ್ದು ಅದನ್ನು ಆಚರಣೆಗೆ ತರುವ ಸಲುವಾಗಿ ಕೆಲಸ ಮಾಡಲು ಸಿದ್ಧರಾದ ಜನರನ್ನೂ ಅಧಿಕಾರಕ್ಕೆ ತರುವುದೇ ಉದ್ದೇಶವಾಗಿರಬೇಕಲ್ಲದೆ, ಪ್ರತಿಯೊಬ್ಬನಿಗೂ ತನ್ನ ವೈಯಕ್ತಿಕ ಮಹತ್ವಾಕಾಂಕ್ಷೆಯನ್ನು ಸಾಧಿಸಿಕೊಳ್ಳುವ ಅವಕಾಶವೀಯುವದಾಗಿರಕೂಡದು. ನಮ್ಮ ಸರ್ವ ಲಕ್ಷ್ಯವೂ ಈಗ ಸ್ಥೈರ್ಯದ ಕಡೆಗೇ ಇರಬೇಕು. ನಮಗೀಗ ಏಕಪ್ರಕಾರವಾದ ಉತ್ಪಾದನೆ, ಏಕಪ್ರಕಾರವಾದ ಪ್ರಗತಿ, ಮತ್ತು ಇವೆಲ್ಲಕ್ಕೆ ಆಧಾರವಾದ ಸ್ಥಿರವಾದ ಆಡಳಿತ ಬೇಕು.

ಹೊಸ ವರ್ಷದಲ್ಲಿ ನಾವೆಲ್ಲರೂ ಆತ್ಮವಿಶ್ವಾಸದಿಂದಲೂ ಪರಸ್ಪರ ವಿಶ್ವಾಸದಿಂದಲೂ ನಮ್ಮ ಮಹಾದೇಶದ ಭವಿತವ್ಯತೆಯಲ್ಲಿ ಅವಿಚಲ ಶ್ರದ್ಧೆಯಿಂದಲೂ ಹೆಚ್ಚು ಹೆಚ್ಚು ಪ್ರಯತ್ನಶೀಲರಾಗುವಂತಾಗಲಿ!

- ಚಕ್ರವರ್ತಿ ರಾಜಗೋಪಾಲಾಚಾರಿ

ಕನ್ನಡಿಗರಿಗೆ ಸಂಸ್ಕೃತ

ಲೇಖಕರು:—ಶ್ರೀ ಡಿ. ವಿ. ಗುಂಡಪ್ಪನವರು

೧

ಹೊಸ ಹೊಸದಾಗಿ ಬರುತ್ತಿರುವ ಕನ್ನಡ ಪುಸ್ತಕ ಪತ್ರಿಕೆಗಳನ್ನು ಓದುವವರಿಗೆ ಆ ಪುಸ್ತಕ ಪತ್ರಿಕೆಗಳ ಲೇಖಕರು ಅನುಭವಿಸುತ್ತಿರುವ ಒಂದು ಕಷ್ಟವು ಗೋಚರವಾಗದೆ ಇರಲಾರದು. ಆ ಕಷ್ಟ ಕನ್ನಡ ಭಾಷೆಯ ಶಬ್ದ ಸಾಮಗ್ರಿಗೆ ಸಂಬಂಧಪಟ್ಟದ್ದು. ನಮ್ಮ ಜನಕ್ಕೆ ಈಗ ಹೊಸ ಹೊಸ ವಸ್ತುಗಳ ಸ್ವರೂಪವನ್ನು ವರ್ಣಿಸಿ ಹೇಳಬೇಕಾಗಿದೆ. ಹೊಸ ಹೊಸ ಸಂಗತಿಗಳ ಮರ್ಮಗಳನ್ನು ಚಿತ್ರಿಸಿ ತಿಳಿಸಬೇಕಾಗಿದೆ. ಯುರೋಪ್ ಅಮೇರಿಕಗಳಿಂದ ಪ್ರತಿನಿತ್ಯವೂ ಹೊಸಹೊಸಯಂತ್ರಕಲ್ಪನೆಗಳು, ಹೊಸ ಹೊಸ ವಿದ್ಯುತ್ ಸಾಧನಗಳು, ಹೊಸ ಹೊಸ ವಾಹನ ಸಂಧಾನಗಳು, ಹೊಸ ಹೊಸ ಯುದ್ಧೋಪಕರಣಗಳು ಬರುತ್ತಿವೆ. ಇವುಗಳ ರೂಪ ರಚನೆಗಳನ್ನು ವಿಶದವಾಗಿ ವಿವರಿಸಲು ಹೊಸ ಹೊಸ ಮಾತುಗಳು ಬೇಕಾಗುತ್ತಿವೆ. ಅದರಂತೆಯೇ ನಮ್ಮ ರಾಜಕೀಯದಲ್ಲಿಯೂ ಸಾಮಾಜಿಕದಲ್ಲಿಯೂ ಹೊಸ ಹೊಸ ತತ್ತ್ವಗಳೂ ಹೊಸ ಹೊಸ ಭಾವನೆಗಳೂ ತಲೆದೋರುತ್ತಿವೆ. ಪ್ರಜಾಪ್ರಭುತ್ವದ ವಿಧಾನಗಳು, ರಾಜ್ಯದ ಶಾಸನಾಂಗ ಕಾರ್ಯಾಂಗ ನ್ಯಾಯಾಂಗಗಳರೂಪರಚನೆಗಳು, ಅವುಗಳಪರಸ್ಪರ ಸಂಬಂಧಗಳು, ರಾಜ್ಯಾದಾಯದ ಕ್ರಮಗಳು, ಸುಂಕ ತೆರಿಗೆಗಳ ರೀತಿಗಳು, ಧನ ನಾಣ್ಯ ಪದ್ಧತಿಗಳು, ವ್ಯಾಪಾರ ಮಾರ್ಗಗಳು, ವ್ಯಕ್ತಿಯ ಹಕ್ಕುಬಾಧ್ಯತೆಗಳು, ರಾಜ್ಯದ ಕರ್ತವ್ಯ ಅಧಿಕಾರಗಳು— ಇವೇ ಮೊದಲಾದ ನೂರಾರು ವಿಚಾರಗಳಲ್ಲಿ ನಾವು ಈಗ ಅನ್ಯದೇಶಗಳವರ ಅಭಿಪ್ರಾಯ ಉಪಾಯಗಳೇನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಆ ನೂತನ ಅಭಿಪ್ರಾಯಗಳಿಗೆ ಸರಿಹೊಂದುವ ಪದಸಾಮಗ್ರಿ ನಮ್ಮಲ್ಲಿ ನೂತನವಾಗಿ ತಯಾರಾಗಬೇಕು. ಈಗ ನಾನಾ ಲೇಖಕರು ಆ ಬಗ್ಗೆ ನಾನಾ ರೀತಿಯಾಗಿ ಪದರಚನೆ ಮಾಡಿಕೊಳ್ಳುತ್ತಿದ್ದಾರೆ. ಈ ನೂತನ ಪದರಚನೆಯಲ್ಲಿ ಸಾಧುವಾದದ್ದೂ ಇವೆ, ಸಾಧುವಾಗಲಾರದ್ದೂ ಇವೆ. ಅವು ಎಂಥವೇ ಆಗಿರಲಿ, ಅವು ಉದ್ದಿಷ್ಟ ಕಾರ್ಯವನ್ನು ಮಾಡುತ್ತಿವೆಯೆ? ಎಂಬುದು ಮುಖ್ಯ ಪ್ರಶ್ನೆ.

ಸಂಸ್ಕೃತ, ಇಂಗ್ಲಿಷ್ ಎರಡೂ ಬೇಕು

ನಮಗೆ ಹೊಸದಾಗಿ ಬೇಕಾಗಿರುವ ಮಾತುಗಳನ್ನು ಒದಗಿಸಿಕೊಳ್ಳಲು ಇರುವುದು ಎರಡೇ ದಾರಿ. ಇಂಗ್ಲೀಷಿನಿಂದ ಮಾತುಗಳನ್ನು ಉಂಡುಂಡೆಯಾಗಿ ತೆಗೆದುಕೊಳ್ಳುವುದು ಒಂದು; ಅಂಥ ಪದಗಳಿಗೆ ಸಮಪದಗಳನ್ನು ಸಂಸ್ಕೃತದಲ್ಲಿ ತಯಾರು ಮಾಡಿಕೊಳ್ಳುವುದು ಇನ್ನೊಂದು. ವಾಸ್ತವವಾಗಿ ಎರಡು ರೀತಿಗಳೂ ನಮಗೆ ಅವಶ್ಯವಾಗುತ್ತವೆ. ಎಷ್ಟೋ ವೈಜ್ಞಾನಿಕ ಪದಗಳಿಗೆ ಸಂಸ್ಕೃತದಲ್ಲಿ ಕೂಡ ಸರಿಯಾದ ಸಮಪದಗಳು ರಚನೆಯಾಗುವುದು ಸಾಧ್ಯವಿಲ್ಲ. ಭಾಷೆಯೆಂಬುದು ಸಜೀವ ವಸ್ತುವಾದದ್ದರಿಂದ, ಅದರ ಸ್ವಭಾವವನ್ನು ತಿಳಿದುಕೊಂಡು ನಾವು ಅದರಿಂದ ಕೆಲಸ ತೆಗೆದುಕೊಳ್ಳಬೇಕಾಗಿದೆ. ಎಲ್ಲ ಭಾಷೆಗಳೂ ಎಲ್ಲ ಕೆಲಸಗಳನ್ನೂ ಒಂದೇ ರೀತಿ ಮಾಡಲಾರವು. ಸಂಸ್ಕೃತ ಮಾಡುವ ಎಷ್ಟೋ ಕೆಲಸಗಳನ್ನು ಮಾಡಲು ಇಂಗ್ಲೀಷಿಗೆ ಶಕ್ತಿಯಿಲ್ಲ. ಹಾಗೆಯೇ ಇಂಗ್ಲೀಷು ಮಾಡುತ್ತಿರುವ ಎಷ್ಟೋ ಕೆಲಸಗಳು ಸಂಸ್ಕೃತಕ್ಕೆ ಅಷ್ಟು ಸುಲಭವಲ್ಲ. ಆದುದರಿಂದ ವಿಜ್ಞಾನ ಪರಿಭಾಷೆಗೆ ನಾವು ಇಂಗ್ಲೀಷನ್ನು ಪೂರ್ತಿಯಾಗಿ ತ್ಯಜಿಸಲಾಗುವುದೆಂಬ ಅಭಿಪ್ರಾಯವನ್ನು ಬಿಟ್ಟುಬಿಡಬೇಕು.

ಆದರೆ ಇಂಗ್ಲಿಷ್ ಹಾಗೆ ತೀರಾ ಅನಿವಾರ್ಯವಾಗುವುದು ವಿಜ್ಞಾನಶಾಸ್ತ್ರದ ಮೇಲ್ಮಟ್ಟಗಳಲ್ಲಿ ಮಾತ್ರ. ಲ್ಯಾಟಿನ್, ಗ್ರೀಕ್, ಜರ್ಮನ್ ಮೊದಲಾದ ಐರೋಪ್ಯ ಭಾಷೆಗಳಿಂದ ನಾನಾ ದೇಶಗಳ ವಿಜ್ಞಾನಿಗಳು ಬಳಕೆಗೆ ತಂದು, ಆ ಮೂಲಕ ಇಂಗ್ಲಿಷ್ ಭಾಷೆ ಅಂಗೀಕರಿಸಿರುವ ಪಾರಿಭಾಷಿಕ ಶಬ್ದಗಳಿಂದಲೇ ನಮ್ಮ ಪ್ರೌಢ ವ್ಯಾಸಂಗಿಗಳು ತಮ್ಮ ವಿಜ್ಞಾನ ವ್ಯಾಸಂಗವನ್ನು ಸಾಗಿಸಬೇಕಾಗುತ್ತದೆ. ಆದರೆ ಪ್ರೌಢ ಪಂಡಿತರಿಗಲ್ಲದೆ ಸಾಮಾನ್ಯ ಜನಕ್ಕೆ ಉಪಯೋಗಪಡುವ ವಿಜ್ಞಾನಶಾಸ್ತ್ರ ಭಾಗ ಕೆಲವಿದ್ದೇ ಇರುತ್ತದೆ. ಈ ಭಾಗದಲ್ಲಿ ಬೇಕಾಗುವ ಹೊಸ ಪದಗಳನ್ನು ತಕ್ಕಮಟ್ಟಿಗೆ ಸಂಸ್ಕೃತದಿಂದ ರಚನೆಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಸಂಸ್ಕೃತದಿಂದ ತಯಾರಾಗಿ ಬಂದ ಪದಗಳು ಕನ್ನಡಕ್ಕೆ ಸುಲಭವಾಗಿ ಹೊಂದಿಕೊಳ್ಳುವುದು ಮಾತ್ರವಲ್ಲದೆ, ಸುಲಭ ಬೋಧನೆಗೂ ಸಹಾಯಕವಾಗುತ್ತವೆ. ಎಂದರೇನಾಯಿತು? ನಮ್ಮ ಜನಸಾಮಾನ್ಯದಲ್ಲಿ ವಿಜ್ಞಾನ ವಿಚಾರಜ್ಞಾನವೂ ಪ್ರಪಂಚದ ನೂತನ ಸಂದರ್ಭ ಪರಿಜ್ಞಾನವೂ ಹರಡಬೇಕಾದರೆ ನಮ್ಮ ಗ್ರಂಥಲೇಖನ ಪತ್ರಿಕಾಲೇಖನಗಳಲ್ಲಿ ಸಂಸ್ಕೃತ ಪದಗಳ ಪ್ರಯೋಗ ಹೆಚ್ಚು ಹೆಚ್ಚಾಗುವುದು ಅನಿವಾರ್ಯವೆಂದಾಯಿತು; ಮತ್ತು ಸಂಸ್ಕೃತದ ಉಪಯೋಗ ಬರವಣಿಗೆಯಲ್ಲಿ ಹೆಚ್ಚಾದರೆ, ಅದು ಅರ್ಥವಾಗಲು ನಮ್ಮ ವಾಚಕರಲ್ಲಿಯೂ ಸಂಸ್ಕೃತದ ಬಳಕೆ ಹೆಚ್ಚಾಗಬೇಕು ಎಂದಾಯಿತು.

೨

ನಮ್ಮ ಜನರು ಸಂಸ್ಕೃತ ವ್ಯಾಸಂಗ ಮಾಡಬೇಕೆನ್ನಲು ಇನ್ನೊಂದು ಪ್ರಬಲಕಾರಣವೂ ಉಂಟು. ಕನ್ನಡಜನತೆಯ ಮನೋಧರ್ಮದ ಮೂಲಾಂಶಗಳೂ, ಕನ್ನಡ ಭಾಷಾ ಮರ್ಯಾದೆಯ ಮೂಲಸೂತ್ರಗಳೂ ನಮಗೆ ದೊರೆಯುವುದು ಕನ್ನಡ ಸಾಹಿತ್ಯದಲ್ಲಿ. ಆ ಸಾಹಿತ್ಯದ ಪ್ರೌಢ ಗ್ರಂಥಗಳಾದರೋ ಸಂಸ್ಕೃತದಿಂದ ತುಂಬಿವೆ. ಪಂಪ, ರನ್ನ, ಷಡಕ್ಷರಿ, ಲಕ್ಷ್ಮೀಶ ಮೊದಲಾದ ಪ್ರಸಿದ್ಧ ಕನ್ನಡ ಕವಿಗಳ ಕಾವ್ಯಗಳು ನಮಗೆ ಚೆನ್ನಾಗಿ ಅರ್ಥವಾಗಬೇಕಾದರೆ ನಮ್ಮಲ್ಲಿ ಸಂಸ್ಕೃತಜ್ಞಾನ ಕೊಂಚಮಟ್ಟಿಗಾದರೂ ಅವಶ್ಯಕ. ಈ ದೃಷ್ಟಿಯಿಂದ ನೋಡಿದರೂ ಕನ್ನಡವನ್ನು ಚೆನ್ನಾಗಿ ಕಲಿಯಬೇಕೆನ್ನುವವನು ಸಂಸ್ಕೃತಕ್ಕೂ ಒಂದಿಷ್ಟು ಸೇವೆ ಮಾಡಬೇಕೆಂಬುದು ಸಿದ್ಧವಾಗುತ್ತದೆ.

(೧೧ ನೆಯ ಪುಟಕ್ಕೆ)

ಸಂಸ್ಥಾನಗಳ ಆರ್ಥಿಕ ಸಮೀಕರಣ

ಕೃಷ್ಣಮಾಚಾರಿ ಸಮಿತಿಯ ವರದಿ

ಘಟನಾಸಮಿತಿಯ ಕಾರ್ಯಕಲಾಪಗಳು

ಘಟನಾಸಮಿತಿ

ಘಟನಾಸಮಿತಿಯಲ್ಲಿ ಕಳೆದ ವಾರ ನಡೆದ ಕಾರ್ಯಕಲಾಪಗಳಲ್ಲಿ ಉಪ್ಪಿನ ಕರಕ್ಕೆ ಮತ್ತು ಕೇಂದ್ರ ಮತ್ತು ಪ್ರಾಂತಗಳ ನಡುವೆ ಆದಾಯದ ಹಂಚಿಕೆಗೆ ಸಂಬಂಧಿಸಿದ ಕಲಮುಗಳ ಚರ್ಚೆ ಮತ್ತು ಸ್ವೀಕಾರ ಮಹತ್ವದವುಗಳಾಗಿದ್ದವು. ಉಪ್ಪಿನ ಮೇಲೆ ಕರ ಹೇರುವದನ್ನು ಪ್ರತಿಬಂಧಿಸುವ ಕಲಮೊಂದು (೨೫೪) ಘಟನೆಯ ಕರಡಿನಲ್ಲಿತ್ತು. ಈ ಬಗೆಯಾಗಿ ಮುಂದಿನ ಸರಕಾರಗಳ ಕೈಯನ್ನು ಕಟ್ಟಿ ಬಿಡುವದು ಅಯೋಗ್ಯವೆಂದು ಕಾಂಗ್ರೆಸ್ ನಾಯಕರಿಗೆ ಅನಿಸಿರಬೇಕು. ಆದುದರಿಂದ ಶ್ರೀ ಮಹಾವೀರ ತ್ಯಾಗಿಯವರು ಅದನ್ನು ತೆಗೆದು ಹಾಕಬೇಕೆಂಬ ಸೂಚನೆಯನ್ನು ತಂದರು. ಅದನ್ನು ಡಾ. ಅಂಬೇಡಕರರೊಪ್ಪಿಕೊಂಡರೂ ಅಧ್ಯಕ್ಷ ರಾಜೇಂದ್ರ ಪ್ರಸಾದರು ಭಾವನಾಪರವಶರಾಗಿ ಮಾತಾಡುತ್ತ ಉಪ್ಪಿನಕರಕ್ಕೂ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗೂ ಇರುವ ಭಾವನಾತ್ಮಕಸಂಬಂಧವನ್ನುಲ್ಲೇಖಿಸಿ ಆ ಕರವನ್ನು ಪುನಃ ಹೇರುವದಾದರೆ ಉಗ್ರ ಚಳವಳಿಯೇಳುವುದು ಖಂಡಿತವೆಂದರು. ಅದು ಸರ್ಕಾರದ ಮೇಲೆ ತುಂಬ ಪರಿಣಾಮ ಮಾಡಿದಂತೆ ಕಂಡುಬಂದದ್ದರಿಂದ ಅದರ ಚರ್ಚೆಯನ್ನು ಮುಂದೂಡಲಾಯಿತು. [illegible] ಸೋಮವಾರ ದಿನ ಪಂ. ಜವಾಹರಲಾಲರು ಈ ಬಗ್ಗೆ ಮಾತಾಡಿ, ಉಪ್ಪಿನ ಕರ ಹೇರುವದು ತಮ್ಮ ಉದ್ದೇಶವಿಲ್ಲೆಂದೂ ಆದರೆ ಕರ ಎತ್ತುವ ವಿಷಯದಲ್ಲಿ ಮುಂದಿನ ಸರಕಾರದ ಕೈಗಳನ್ನು ಕಟ್ಟಿಬಿಡುವದು ಹಿತವಲ್ಲೆಂದೂ ವಿವರಿಸಿದ ಅನಂತರ ಶ್ರೀ ತ್ಯಾಗಿಯವರ ಸೂಚನೆ ಸ್ವೀಕೃತವಾಯಿತು. ಹೀಗೆ ಮುಂದಿನ ಘಟನೆಯಲ್ಲಿ ಉಪ್ಪಿನ ಮೇಲೆ ಕರ ಹೇರಬಾರದೆಂಬ ನಿಷೇಧ ಇಲ್ಲದಂತಾಯಿತು.

ಕೇಂದ್ರ ಮತ್ತು ಪ್ರಾಂತಗಳ ಕರ ಹೇರುವ ಅಧಿಕಾರ ಮತ್ತು ಕರದ ಹಂಚುವಳಿಗೆ ಸಂಬಂಧಿಸಿದ ಅನೇಕ ಕಲಮುಗಳು ಎರಡು ದಿನಗಳಲ್ಲಿ ಚರ್ಚಿಸಿ ಸ್ವೀಕರಿಸಲ್ಪಟ್ಟವು. ಬಂಗಾಲ, ಬಿಹಾರ, ಅಸಾಮು, ಓಡಿಸಾ ಪ್ರಾಂತಗಳಿಗೆ ಸೆಣಬಿನ ನಿರ್ಯಾತ ಕರದ ಒಂದು ಅಂಶವನ್ನು ೧೦ ವರ್ಷಗಳ ವರೆಗೆ ಸಹಾಯಧನವೆಂದು ಕೇಂದ್ರದಿಂದ ಕೊಡುವದು, ಕೇಂದ್ರದಿಂದ ಪ್ರಾಂತಗಳಿಗೆ ಪ್ರತಿ ವರ್ಷ ಸಹಾಯಧನ ಕೊಡುವದನ್ನು ನಿರ್ಣಯಿಸಲು ಭಾವೀ ಪಾರ್ಲಿಮೆಂಟಿನ ಅಧಿಕಾರ, ಪ್ರಾಂತಗಳಲ್ಲಿ ಸ್ಥಳೀಯ ಸಂಸ್ಥೆಗಳು ವ್ಯಾಪಾರ ಧಂಧೆಗಳ ಮೇಲೆ ಹೇರಬಹುದಾದ ಕರವನ್ನು ಒಬ್ಬ ವ್ಯಕ್ತಿಗೆ ೨೫೦ ರೂಪಾಯಿಗಿಂತ ಹೆಚ್ಚಿರತಕ್ಕದ್ದಲ್ಲೆಂದು ನಿರ್ಬಂಧಿಸುವದು, ನೂತನ ಘಟನೆ ಅಸ್ತಿತ್ವಕ್ಕೆ ಬಂದು ೨ ವರ್ಷಗಳೊಳಗೆ ಅಧ್ಯಕ್ಷನು ಕೇಂದ್ರ ಮತ್ತು ಪ್ರಾಂತಗಳ ನಡುವೆ ಉತ್ಪನ್ನವೇ ಮೊದಲಾದ ಕರಗಳನ್ನು ಹಂಚುವ ವಿಚಾರದಲ್ಲಿ ಸಲಹೆ ಕೊಡಲು ಒಂದು ಆರ್ಥಿಕ ಸಮಿತಿಯನ್ನು ನೇಮಿಸಬೇಕೆಂದು ವಿಧಿಸುವದು, ಹಿಂದುಸ್ತಾನದ ಉತ್ಪನ್ನದ ಹೊಣೆಯ ಮೇಲೆ ಸಾಲ ತೆಗೆಯಲು ಕೇಂದ್ರಕ್ಕೆ ಅಧಿಕಾರ ಕೊಡುವದು, ಪ್ರಾಂತಗಳ ಸಾಲ ಎತ್ತುವ ಅಧಿಕಾರದ ಮರ್ಯಾದೆಯನ್ನು ನಿರ್ಧರಿಸುವದೇ ಮೊದಲಾದ ವಿಷಯಗಳು ಆ ಕಲಮುಗಳಲ್ಲಿ ಅಡಕವಾಗಿವೆ.

ರಾಷ್ಟ್ರಭಾಷೆ ಮತ್ತು ಲಿಪಿಯ ಪ್ರಶ್ನೆ ಇನ್ನೂ ನಿರ್ಣಯವಾಗಿಲ್ಲ. ದೇವನಾಗರಿಲಿಪಿ, ಹಿಂದಿ ಭಾಷೆಗಳನ್ನೇ ರಾಷ್ಟ್ರಲಿಪಿ, ರಾಷ್ಟ್ರಭಾಷೆಯೆಂದು ಸ್ವೀಕರಿಸಬೇಕೆಂದು ಬಹುಮತದ ಅಭಿಪ್ರಾಯವಿದ್ದಂತೆ ತೋರುತ್ತದೆ. ದಿಲ್ಲಿಯಲ್ಲಿ ಸಭೆ ಸೇರಿದ ಭಾರತದ ಎಲ್ಲ ಪ್ರದೇಶಗಳ ನೂರು ಪಂಡಿತರಾದರೂ ಇದೇ ಆಶಯದ ಗೊತ್ತುವಳಿ ಮಾಡಿದ್ದಾರೆ.

ಪರಿಹಾರದ ಪ್ರಶ್ನೆ

ಕಳೆದ ಮಡಿಯಲ್ಲಿ ಘಟನಾಸಮಿತಿಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಒಂದು ಚಿಕ್ಕ ಕಾಳಗ ನಡೆದು ಹೋಯಿತೆಂದು ತಿಳಿಯುತ್ತದೆ. ರಾಷ್ಟ್ರೀಕರಣವೇ ಮೊದಲಾದದ್ದಕ್ಕಾಗಿ ಸರಕಾರ ವಶಪಡಿಸಿಕೊಳ್ಳಬಹುದಾದ ಆಸ್ತಿಗೆ ಪರಿಹಾರ ಕೊಡುವ ಕ್ರಮದ ಬಗ್ಗೆ ಘಟನೆಯಲ್ಲಿ ಅಡಕಗೊಳಿಸಬೇಕಾದ ನಿಬಂಧನೆಗಳನ್ನು ಕುರಿತಾಗಿತ್ತು ಅದು. ಪರಿಹಾರಕೊಡುವ ತತ್ವವೇನೋ ಸರ್ವಮಾನ್ಯವಾಗಿತ್ತು. ಆದರೆ ಸರಕಾರದವರು ವಶಪಡಿಸಿಕೊಂಡ ಆಸ್ತಿಗೆ ಅವರು ನಿರ್ಧರಿಸುವ ಪರಿಹಾರವೇ ಸ್ವೀಕರಿಸಲ್ಪಡಬೇಕೋ, ಅಥವಾ ಅದು ನ್ಯಾಯವಾದುದೋ ಅಲ್ಲವೋ ಎಂದು ತೀರ್ಮಾನಿಸಿಕೊಳ್ಳಲು ನ್ಯಾಯಸ್ಥಾನಕ್ಕೆ ಹೋಗಲು ಒಡೆಯರಿಗೆ ಹಕ್ಕು ಕೊಡಬೇಕೋ ಎಂಬುದು ವಿವಾದಾಸ್ಪದವಾಗಿತ್ತು. ಅದು ನ್ಯಾಯಸ್ಥಾನಾಧಿಕಾರಕ್ಕೆ ಒಳಪಡಬೇಕೆಂಬ ಅಭಿಪ್ರಾಯವನ್ನು ಸರದಾರ ಪಟೇಲರು ಬಹಳ ಬಲವಾಗಿ ವ್ಯಕ್ತಗೊಳಿಸಿದರಂತೆ. ಆದರೆ ಸಾಮ್ಯವಾದಿ ಒಲವಿನ ಸದಸ್ಯರಿಗೆ ಇದು ಮೆಚ್ಚಿಗೆಯಾಗಲಿಲ್ಲ. ಮೇಲಾಗಿ ಜಮೀನ್ದಾರಿ ನಿರ್ಮೂಲನಕ್ಕೆ ಬದ್ಧರಾದ ಪ್ರಾಂತಿಕ ಸರಕಾರಗಳು ನ್ಯಾಯಸ್ಥಾನದ ಹಸ್ತಕ್ಷೇಪ ಬಂದರೆ ತುಂಬ ಪೇಚಿಗೆ ಬೀಳಬಹುದಾಗಿದೆ. ಜಮೀನ್ದಾರರು ಅನಂತಕಾಲದ ವರೆಗೆ ಸರಕಾರದ ಕ್ರಮಗಳನ್ನು ವಿಲಂಬಿಸಲು ಸಮರ್ಥರಾದಾರು. ಕೊನೆಗೆ ಶ್ರೀ ಕೆ. ಎಂ. ಮುನಶಿ, ಶ್ರೀ ಗಾಡಗೀಳರು ಮಂಡಿಸಿದ ಮಧ್ಯಮಾರ್ಗದ ತಿದ್ದುಪಡಿ ಬಹಳ ಇಕ್ಕಟ್ಟಾದ ಬಹುಮತದಿಂದ ಸ್ವೀಕೃತವಾಯಿತೆಂದು ತಿಳಿಯುತ್ತದೆ. ಇದರನ್ವಯ ಜಮೀನ್ದಾರಿಗಳನ್ನು ವಶಪಡಿಸಿಕೊಂಡಾಗ ಪರಿಹಾರ ಪ್ರಮಾಣವನ್ನು ತೀರ್ಮಾನಿಸುವ ಅಧಿಕಾರ ಸರಕಾರಕ್ಕೇ ಸೇರಿರಬೇಕು ಮತ್ತು ಬೇರೆ ಉದ್ಯೋಗಗಳನ್ನು ವಶಪಡಿಸಿಕೊಂಡರೆ ಪರಿಹಾರದ ನ್ಯಾಯಾನ್ಯಾಯವನ್ನು ತೀರ್ಮಾನಿಸಲು ನ್ಯಾಯಸ್ಥಾನಕ್ಕೆ ಅಧಿಕಾರವಿರಬೇಕು.

ಸಂಸ್ಥಾನಗಳ ಆರ್ಥಿಕ ಸಮೀಕರಣ

ಸಂಸ್ಥಾನಗಳ ಆರ್ಥಿಕ ಸ್ಥಾನಮಾನವನ್ನು ಪ್ರಾಂತಗಳವಕ್ಕೆ ಸರಿಸಮಾನವಾಗಿ ಮಾಡಲು ಕೈಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಲು ನೇಮಿಸಲ್ಪಟ್ಟ ಶ್ರೀ ವಿ. ಟಿ. ಕೃಷ್ಣಮಾಚಾರಿ ಸಮಿತಿಯ ನಾಲ್ಕು ಸಂಪುಟಗಳ ವರದಿ ಇದೀಗ ಪ್ರಸಿದ್ಧವಾಗಿದೆ. ಹೈದರಾಬಾದೊಂದು ಹೊರತು ಉಳಿದೆಲ್ಲ ಸಂಸ್ಥಾನಗಳ ಬಗ್ಗೆ ಅದರಲ್ಲಿ ಸೂಚನೆಗಳಿವೆ. ಹೈದರಾಬಾದಿಗಾಗಿ ಬೇರೆಯೇ ಒಂದು ಉಪವರದಿ ಹೊರಬೀಳಲಿದೆ. ಇದರ ಪ್ರಕಾರ ಆರ್ಥಿಕ ಸಮೀಕರಣದ ಕಾರ್ಯ ಎಲ್ಲ ಸಂಸ್ಥಾನಗಳಲ್ಲಿ ೧೯೫೦ ಎಪ್ರಿಲದಿಂದಲೂ ಕೊಚ್ಚಿ ತಿರುವಾಂಕೂರು ಒಕ್ಕೂಟದಲ್ಲಿ ೧೯೪೯ ಅಗಸ್ಟ ೧೬ ರಿಂದಲೂ ಪ್ರಾರಂಭವಾಗಬೇಕು. ಈ ವರದಿ ಸರಕಾರಕ್ಕೆ ಸಮ್ಮತವಾದರೆ ಮುಂದೆ ಆರ್ಥಿಕ ವಿಷಯದಲ್ಲಿ ಪ್ರಾಂತಗಳಿಗೂ ಸಂಸ್ಥಾನಗಳಿಗೂ ಯಾವ ಅಂತರವೂ ಉಳಿಯುವದಿಲ್ಲ. ಆದರೆ ಈ ಕೆಲಸ ಸಂಪೂರ್ಣವಾಗಿ ಮುಗಿಯಬೇಕಾದರೆ ಹತ್ತು ವರ್ಷಗಳ ಅವಧಿ ಬೇಕಾಗಬಹುದು. ಏಕೆಂದರೆ ಒಂದೇ ಹೊಡೆತಕ್ಕೆ ಆಗುವ ಕೆಲಸವಿದಲ್ಲ. ಮೊದಲು ಸಂಸ್ಥಾನ ಮತ್ತು ಸಂಸ್ಥಾನ ಒಕ್ಕೂಟಗಳ ಆಡಳಿತೆಯನ್ನು ಕೇಂದ್ರ ಮತ್ತು ಸಂಸ್ಥಾನಿಕವೆಂದು ವಿಭಾಗಿಸಬೇಕು; ಆ ಮೇಲೆ ಕೇಂದ್ರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಆರ್ಥಿಕ ಮತ್ತು ಇತರ ಹೊಣೆಗಳನ್ನು ಕೇಂದ್ರವೇ ವಹಿಸಿಕೊಳ್ಳಬೇಕು; ಮತ್ತು ಕೊನೆಯದಾಗಿ ಸಂಸ್ಥಾನಗಳ ಆರ್ಥಿಕ ವ್ಯವಸ್ಥೆಗೆ ಅನುಕೂಲವಾಗುವಂತೆ ಕೇಂದ್ರದ ವಿಷಯಗಳನ್ನು ಕೇಂದ್ರಕ್ಕೆ ವಹಿಸಿಕೊಡುವ ವ್ಯವಸ್ಥೆ ಮಾಡಬೇಕು.

ಆದಾಯಕರ, ಕಾರ್ಪೋರೇಶನ್‌ಕರ(ಒಕ್ಕಲುತನ ಉತ್ಪನ್ನಕರವನ್ನು ಬಿಟ್ಟು), ನಿರ್ಯಾತಕರ, ಸುಂಕ, ಅಬಕಾರಿ, ರೇಲ್ವೆ, ಅಂಚೆತಂತಿ, ಟೆಲಿಫೋನ್, ಅಫುಬೆಳೆ, ನಿರ್ಯಾತಕ್ಕಾಗಿ ಉತ್ಪಾದನೆ ಮತ್ತು ಮಾರಾಟ, ಸ್ಟಾಕ ಎಕ್ಸ್‌ಚೆಂಜದ ಮೇಲೆ ಸ್ಟಾಂಪಡ್ಯೂಟಿ ಹೊರತು ಬೇರೆ ಕರ, ಸೈನ್ಯಶಾಖೆ, ಆಕಾಶವಾಣಿ, ಹವಾಮಾನಶಾಸ್ತ್ರ ಶಿಲ್ಪಶಾಸ್ತ್ರ, ಪ್ರಾಣಿಶಾಸ್ತ್ರ, ಪೇಟಂಟ್ ಮತ್ತು ಕಾಪಿರೈಟ, ರಾಷ್ಟ್ರೀಯ ಹೆದ್ದಾರಿಗಳು, ನಾಣ್ಯ ಚಲಾವಣೆ, ಟಂಕಸಾಲೆ, ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ; ಇವಿಷ್ಟು ಕೇಂದ್ರಕ್ಕೆ ಸೇರಬೇಕಾದ ವಿಷಯಗಳು.

ಮುಂದಿನ ಆರ್ಥಿಕ ವರ್ಷದಿಂದಲೆ ಎಲ್ಲ ಪ್ರಾಂತಗಳಲ್ಲೂ ಆದಾಯಕರ ಹೇರತೊಡಗಿ ಎರಡು ಮೂರು ಘಟ್ಟಗಳಲ್ಲಿ ಅದನ್ನು ಪ್ರಾಂತಗಳಲ್ಲಿರುವ ಪ್ರಮಾಣಕ್ಕೇ ತರಬೇಕು. ರಾಜಸ್ಥಾನ ಮತ್ತು ಮಧ್ಯಭಾರತ ಒಕ್ಕೂಟಗಳಲ್ಲಿ ಹೊರತು ಮತ್ತೆಲ್ಲ ಸಂಸ್ಥಾನಗಳಲ್ಲಿ ಒಳಸುಂಕಗಳನ್ನು ೧೯೫೦ ರ ಎಪ್ರಿಲದಿಂದಲೆ ರದ್ದುಗೊಳಿಸಬೇಕು. ಇವುಗಳಿಂದ ಸಂಸ್ಥಾನಗಳಿಗೇನಾದರೂ ಆರ್ಥಿಕ ಹಾನಿಯಾಗುತ್ತಿದ್ದರೆ ಪೂರಾಟಕರ ಮೊದಲಾದವುಗಳಿಂದ ತುಂಬಿಕೊಳ್ಳಬೇಕು.

ಈ ಪ್ರಕಾರ ಸಮೀಕರಣ ಮಾಡಿ ಸಂಸ್ಥಾನಗಳನ್ನು ಪ್ರಾಂತಗಳ ಮಟ್ಟಕ್ಕೆ ತಂದರೆ ಭಾರತದ ಆರ್ಥಿಕ ಅಭಿವೃದ್ಧಿಗೂ ಸಂಸ್ಥಾನಗಳ ಹಿತಕ್ಕೂ ತುಂಬ ಅನುಕೂಲವಾಗುವದೆಂದು ಸಮಿತಿ ಅಭಿಪ್ರಾಯಪಟ್ಟಿದೆ. ಇದರಿಂದ ಕೆಲ ಸಂಸ್ಥಾನಗಳಿಗೆ ತುಂಬ ಹಾನಿಯಾಗಿ ಪೂರಾಟಕರ ಮೊದಲಾದವುಗಳಿಂದಲೂ ಅದು ತುಂಬಬಾರದೆ ಹೋದರೆ ಕೇಂದ್ರದಿಂದ ಅದಕ್ಕೆ ೫ ವರ್ಷಗಳ ವರೆಗೆ ನಿಶ್ಚಿತ ಹಾನಿಯನ್ನು ತುಂಬಿಕೊಡಬೇಕೆಂದೂ ಮುಂದಿನ ೫ ವರ್ಷಗಳ ವರೆಗೆ ಅದರಲ್ಲಿ ನೂರಕ್ಕೆ ೬೦ ಭಾಗವನ್ನು ತುಂಬಿ ಕೊಡಬೇಕೆಂದೂ ಸೂಚಿಸಲಾಗಿದೆ.

ಕಾಸೀಮ ರಜವಿಯ ವಿಚಾರಣೆ

ಕಾಸೀಮ ರಜವಿಯ ವಿಚಾರಣೆಯಲ್ಲಿ ಅವನ ಪಕ್ಷವನ್ನು ಪ್ರತಿಪಾದಿಸಲು ಅವನ ಹೆಂಡತಿಯಿಂದ ನಿಯೋಜಿಸಲ್ಪಟ್ಟ ಲಂಡನ್ ಬ್ಯಾರಿಸ್ಟರರಾದ ಜಿ. ಪಿ. ರಾಬರ್ಟ್ಸ ಮತ್ತು [illegible]ವರಿಗೆ ನ್ಯಾಯಸ್ಥಾನದಲ್ಲಿ ಹಾಜರಾಗಲು ಕೊನೆಗೂ ಅಪ್ಪಣೆ ಸಿಗಲಿಲ್ಲ. ಅವರು ಬ್ಯಾರಿಸ್ಟರರಾಗಿದ್ದರೂ ಹೈದರಾಬಾದದಲ್ಲಿ ವಕೀಲರಾಗಿ ಕೆಲಸಮಾಡಲು ಉರ್ದೂ ಭಾಷೆ ಬಲ್ಲವರೇ ಇರಬೇಕೆಂಬ ನಿಯಮವಿದ್ದುದರಿಂದ ಹೈಕೋರ್ಟ ಅವರ ವಕಾಲತ್ ಅರ್ಜಿಯನ್ನು ಮಾನ್ಯ ಮಾಡಲಿಲ್ಲ. ಅನಂತರ ಅವರು ರಜವಿಯ ವಿಚಾರಣೆಗಾಗಿ ನೇಮಕಗೊಂಡಿದ್ದ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಹಾಕಿಕೊಂಡರು. ಆ ಅರ್ಜಿಗಳನ್ನು ವಿಚಾರಿಸಿದ ನಂತರ ಕ್ರಿಸ್ತ ನ್ಯಾಯಾಧೀಶರನ್ನೇ ಅಧ್ಯಕ್ಷರಾಗಿ ಉಳ್ಳ ಆ [illegible] ನ್ಯಾಯಸ್ಥಾನವು ಅವರನ್ನು ವಾದ ಮಾಡಲು ಒಪ್ಪಲಿಲ್ಲ. ಬ್ಯಾರಿಸ್ಟರ ರಾಬರ್ಟ್ಸರು ಈ ಪ್ರಕರಣದಲ್ಲಿ ವಾದಿಸಲು ಬಂದುದೇ ಒಂದು ಸಮಸ್ಯೆಯಾಗಿತ್ತು. ಅವರು ಹೈದರಾಬಾದಿ ಆರೋಪಿಯ ಪಕ್ಷಕ್ಕಾಗಿ ಬರಬೇಕಾಗಿದ್ದರು ಕರಾಚಿಯಲ್ಲಿಳಿದು ಅಲ್ಲಿ ಯಾರಿಂದಲೋ ಸೂಚನೆಗಳನ್ನು ಪಡೆದರು. ಪಾಕಿಸ್ತಾನದ [illegible]ಗಳಿಗೆ ಈ ಪ್ರಕರಣದಲ್ಲಿರುವ ಸಂಶಯಾಸ್ಪದ ಆಸ್ಥೆ ಇದರಿಂದ ಸ್ಪಷ್ಟವಾಗುತ್ತದೆ. ಮೊದಲೊಮ್ಮೆ ಈ ಪ್ರಕರಣದಲ್ಲಿ ವಾದಿಸಲು ಪಾಕಿಸ್ತಾನಿ ವಕೀಲರಿಗೆ ಅಸ್ಪದ ಕೊಡಬೇಕೆಂದು ಪಾಕಿಸ್ತಾನದವರು ಭಾರತ ಸರಕಾರಕ್ಕೆ ಕೇಳಿಕೊಂಡಿದ್ದರೆಂದೂ ಆಗ ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ನರು ಅರ್ಥಪೂರ್ಣವಾಗಿ, ಗಡಿನಾಡ ಗಾಂಧಿಯೇ ಮೊದಲಾದವರ ವಿಚಾರಣೆಯಾಗುವಾಗ ಅದರಲ್ಲಿ ಅವರ ಪರವಾಗಿ ವಾದಿಸಲು ಭಾರತೀಯ ವಕೀಲರಿಗೆ ಅಸ್ಪದ ಕೊಡಬಹುದೇ ಎಂದು ಪ್ರತಿಯಾಗಿ ಕೇಳಿದಾಗ ಪಾಕಿಸ್ತಾನಿಗಳ ಬಾಯಿ ಮುಚ್ಚಿಹೋಯಿತೆಂದೂ ಬಂದ ಸುದ್ದಿಯನ್ನು ಇಲ್ಲಿ ನೆನೆದುಕೊಳ್ಳಬಹುದು.

ಭಾರತದ ಸೈನ್ಯಪಡೆಯ ದಂಡನಾಯಕರು



ಭಾರತ ಸೈನ್ಯಪಡೆಯ ಪ್ರಥಮ ಭಾರತೀಯ ಮಹಾದಂಡನಾಯಕರಾಗಿ ಶ್ರೀ. ಕಾರ್ಯಪ್ಪನವರು ಅಧಿಕಾರ ವಹಿಸಿದಾಗ ತೆಗೆಸಿದ ಚಿತ್ರವಿದು. ಇದರಲ್ಲಿ ಸೈನ್ಯಪಡೆಯ ಎಲ್ಲ ದಂಡನಾಯಕರನ್ನು ಕಾಣಬಹುದು. ಥೋರಾತ ಮತ್ತು ರಾಯ ಇವರಿಬ್ಬರು ಮಾತ್ರ ಈ ಚಿತ್ರದಲ್ಲಿಲ್ಲ.

ಕುಳಿತವರು :— (ಎಡದಿಂದ ಬಲಕ್ಕೆ) ಕಲಾವಂತಸಿಂಗ, ಶ್ರೀನಾಗೇಶ, ರಾಜೇಂದ್ರಸಿಂಹಜಿ, ಕೆ. ಎಂ. ಕಾರ್ಯಪ್ಪ, [illegible]ಸಿಂಗ, ಮಾಸ್ಟರ್, ಅತಳ.

ನಿಂತವರು (ಮೊದಲನೆ ಸಾಲು) :— ಪಿ. ಎನ್. ಥಾಪರ, ಎ. ರುದ್ರ, ಡಿ. ಆರ್. ಥಾಪರ, ತಿಮ್ಮಯ್ಯ, [illegible], ಎ. ಎನ್. ಶರ್ಮಾ, ಬಾಳಿಗಾ, ಜಿ. ಎಸ್. ಧಿಲನ್, ಸಂತಸಿಂಗ.

ಎರಡನೆ ಸಾಲು :— ಡಿ. ಎಸ್ ಬ್ರಾರ, ತಾರಾಸಿಂಗ, ಹಿಮ್ಮತಸಿಂಹಜಿ, ಜೆ. ಎನ್. ಚೌಧರಿ, ಮಹೀಂದ್ರಸಿಂಗ, [illegible]ಸಿಂಗ.

ಎರಡು ವರ್ಷಗಳ ಸ್ವಾತಂತ್ರ್ಯ

ಒಂದು ಸಿಂಹಾವಲೋಕನ

(ನಿಷ್ಪಕ್ಷಪಾತಿಯಿಂದ)

ಭಾರತದ ಇತಿಹಾಸದಲ್ಲಿ ಆಗಸ್ಟ್ ತಿಂಗಳು— ಅಥವಾ ಶ್ರಾವಣಮಾಸವೆನ್ನಿರಿ— ಯಾವಾಗಲೂ ಅಘಟಿತ ಘಟನೆಗಳಿಂದ ಒಂದು ವಿಧವಾದ ಹೆಚ್ಚಳವನ್ನು ಪಡೆದಿದೆ. ಇದು ಪ್ರಾಚೀನ ಕಾಲಕ್ಕೆಷ್ಟೋ ಅಷ್ಟೇ ಆಧುನಿಕ ಯುಗಕ್ಕೂ ಅನ್ವಯಿಸುತ್ತದೆ. ಬಲಿಯನ್ನು ಪಾತಾಳಕ್ಕಟ್ಟಿದ ವಾಮನನ ಅವತಾರವಾದುದು ಈ ತಿಂಗಳಲ್ಲಿ. ಕಂಸ ಮರ್ದನನೂ ಮಹಾಭಾರತದ ಸೂತ್ರಧಾರನೂ ಆದ ಶ್ರೀಕೃಷ್ಣನು ಹುಟ್ಟಿದ್ದು ಶ್ರಾವಣ ಮಾಸದಲ್ಲಿ. ನಿಜವಾಗ್ಯ ಶ್ರಾವಣ ಮಾಸಕ್ಕೂ ಬಂಧವಿಮೋಚನೆಗೂ ಏನೋ ಸಂಬಂಧವಿದ್ದಂತಿದೆ. ವಾಮನನೂ ಶ್ರೀಕೃಷ್ಣನೂ ಅಸುರೀ ಶಕ್ತಿಗಳ ಮುಷ್ಟಿಯಿಂದ ಲೋಕವನ್ನು ಬಿಡುಗಡೆ ಮಾಡಿದರಲ್ಲವೆ?

ಈಚೆಗಿನ ಇತಿಹಾಸದಲ್ಲಿಯ ಉದಾಹರಣೆಗಳನ್ನೇ ಹೇಳಬೇಕಾದರೆ, ಬ್ರಿಟಿಶ ಸರಕಾರದ ನಿರಂಕುಶ ಅಧಿಕಾರದಿಂದ ಭಾರತದ ವಿಮೋಚನೆಯು ಶ್ರೀಗಣವಾದುದು ಬ್ರಿಟಿಶ ಸರಕಾರದ ೧೯೪೭ ರ ಆಗಸ್ಟ್ ಘೋಷಣೆಯೊಡನೆ. ಆ ಘೋಷಣೆಯು ಮೇರೆಗೆಯೆ ೧೯೪೭ ರಲ್ಲಿ ಪಾರ್ಲಿಮೆಂಟು ಭಾರತದ ಘಟನೆಯ ಕಾಯಿದೆಯನ್ನು ಮಾಡಿ ಇಲ್ಲಿ ಪ್ರಜಾತಂತ್ರದ ಪಾಸ್ತು ಪೂಜೆ ಮಾಡಿತು.

ಇನ್ನೂ ಈಚೆಗೆ ಬಂದರೆ ವೈಸರಾಯ ಲಾರ್ಡ್ ಲಿನ್‌ಲಿತ್‌ಗೋ ಅವರು ವಿಸ್ತೃತ ಕಾರ್ಯಕಾರಿ ಮಂಡಲವನ್ನು ರಚಿಸಿ ಅದಕ್ಕೆ ಸಾಕಷ್ಟು ಅಧಿಕಾರ ಕೊಡುವದಾಗಿ ಘೋಷಿಸಿದ್ದು ಆಗಸ್ಟ್ ೧೯೪೦ ರಲ್ಲಿ. ಅಗಸ್ಟಿನಲ್ಲೇ ಕಾಂಗ್ರೆಸ್ ಕಾರ್ಯಕಮಿತಿ ವಿಶಿಷ್ಟ ಕರಾರುಗಳನ್ನು ಹಾಕಿ ಯುದ್ಧಕಾಲದಲ್ಲಿ ಸರಕಾರದೊಡನೆ ಸಹಕರಿಸುವ ಸಿದ್ಧತೆಯನ್ನು ವ್ಯಕ್ತಗೊಳಿಸಿತು. "ಚಲೇಜಾವ್" ಚಳವಳಿಗೆ ಕರೆಗೊಟ್ಟ ಆ ಮಹಾ ಅ. ಭಾ. ಕಾಂಗ್ರೆಸ್ ಗೊತ್ತುವಳಿಯಾದ ಅಗಸ್ಟ್ ೮, ೧೯೪೨ ರ ದಿನವಂತೂ ರಕ್ತದಲ್ಲಿ ಬರೆಯಲ್ಪಟ್ಟಿದೆ. ಮೊದಲನೆ ಸಿಮ್ಲಾ ಪರಿಷತ್ತಿಗೆ ದಾರಿ ಮಾಡಿಕೊಟ್ಟ "ದೇಸಾಯಿ-ಲಿಯಾಕತ್" ಯುಕ್ತಿಯನ್ನು ಶ್ರೀ ಭೂಲಾಭಾಯಿ ದೇಸಾಯಿಯವರು ಯೋಜಿಸಿದ್ದಾದರೂ ಅಗಸ್ಟ್ ೧೯೪೪ ರಲ್ಲಿ. ಮುಂದೆ ಸ್ವತಂತ್ರ ಭಾರತದ ಪರವಾಗಿ ಅಧಿಕಾರಸ್ವೀಕಾರ ಮಾಡುವ ಭಾಗ್ಯಕ್ಕೆ ಭಾಗಿಯಾಗಲಿದ್ದ ನಡುಗಾಲ ಸರಕಾರವು ಪಂ. ನೆಹರೂ ಅವರ ನೇತೃತ್ವದಲ್ಲಿ ಸ್ಥಾಪಿತವಾದುದೂ ಅಗಸ್ಟ್ ತಿಂಗಳಲ್ಲಿಯೆ. ಕೊನೆಯದಾಗಿ ಪಾರ್ಲಿಮೆಂಟಿನ ೧೯೪೭ ಅಗಸ್ಟ್ ತಿಂಗಳ ಕಾಯಿದೆಯನ್ವಯವೇ ಅಗಸ್ಟ್ ೧೫ ರಂದು ನಾವು ಸ್ವತಂತ್ರರಾಗಿ ಇಂದು ಎರಡನೆಯ ಸ್ವಾತಂತ್ರ್ಯ ಜಯಂತಿಯನ್ನು ಆಚರಿಸುತ್ತಿದ್ದೇವೆ.

ಸ್ವತಂತ್ರ ಜೀವನದ ಎರಡು ವರ್ಷಗಳನ್ನು ಕಳೆದ ಬಳಿಕ ನಾವಿಂದು ಹಿಂದಿರುಗಿ ನೋಡಿ ಈ ಅವಧಿಯಲ್ಲಿ ನಾವು ಸಾಧಿಸಿದ, ಸಾಧಿಸದ ಸಂಗತಿಗಳನ್ನು ವಿವೇಚಿಸುವದು ಅವಶ್ಯವಾಗಿದೆ.

ಸೋಲು-ಗೆಲುವಿನ ಬೆರಕೆ

ನಮ್ಮೀ ಸಾಧನೆಗಳನ್ನು ಅವಲೋಕಿಸಿದರೆ ಎಲ್ಲ ಮಾನವೀ ಸಾಹಸಗಳಂತೆ ನಮ್ಮ ಸ್ವಾತಂತ್ರ್ಯಸಾಹಸವೂ ಒಪ್ಪು ತಪ್ಪುಗಳ ಕಲಬೆರಕೆಯಾಗಿರುವದನ್ನೂ ಅದರಿಂದ ನಮ್ಮ ಮನದಲ್ಲಿ ಉಂಟಾಗುವ ಭಾವನೆಗಳು ತೃಪ್ತಿ ಅಸಂತೋಷಗಳ, ಆಶೆ- ಆಶಂಕೆಗಳ ತಂಮಿಶ್ರಣವಾಗಿರುವದನ್ನೂ ಕಾಣುತ್ತೇವೆ. ಇವುಗಳಲ್ಲಿ ಬೆಳ್ಳಗಿನ ಅಂಶ ಹೆಚ್ಚೋ ಕಪ್ಪಿನದೋ ಒಂದು ವಿಂಗಡಿಸಿ ಹೇಳುವದು ತೀರ ಕಷ್ಟ. ಅದು ಭವಿಷ್ಯತ್ತಿಗೆ ಮಾತ್ರ ಸ್ವಲ್ಪಮಟ್ಟಿಗಾದರೂ ಸಾಧಿಸಬಹುದಾದ ಕೆಲಸ.

ನಾವು ನಮಗೆ ದೊರೆತ ಮುಂದಾಳುಗಳ ವಿಷಯದಲ್ಲಿ ತುಂಬ ಭಾಗ್ಯಶಾಲಿಗಳಾಗಿದ್ದೇವೆಂದು ನಿರ್ವಿವಾದವಾಗಿ ಹೇಳಬಹುದು. ಅವರ ಧೋರಣೆಗಳನ್ನು ಕುರಿತು ಇಂದು ತೀಕ್ಷ್ಣವಿಸ್ಮರಣ ಸ್ವಭಾವದ ಜನತೆ ಎಷ್ಟು ಅಸಂತುಷ್ಟವಾಗಿರಬಹುದಾದರೂ ಸ್ವಾತಂತ್ರ್ಯ

ಕ್ಕೆಗೆ ೬೦೦ ಕ್ಷಣದಿಂದಲೇ ಎದ್ದ ಜಾತೀಯತೆಯ ಪ್ರಲಯತಾಂಡವದ ಪರಿಣಾಮವಾಗಿ ಕೋಟ್ಯಂತರ ಜನರು ತಮ್ಮ ಯಾವ ತಪ್ಪೂ ಇಲ್ಲದೆ ತಾತಮುತ್ತಾತರ ಕಾಲದಿಂದ ಬಾಳಿ ಬಂದ ನೆಲಮನೆಗಳನ್ನು ತೊರೆದು ಇತಿಹಾಸದಲ್ಲೇ ಅಗಾಧವಾದ ದುರಂತ ಯಾತ್ರೆಯನ್ನು ಕೈಕೊಂಡಾಗ ತಲೆಯನ್ನು ಶಾಂತವಾಗಿಟ್ಟುಕೊಂಡು ಪರಿಸ್ಥಿತಿಯನ್ನು ಅದ್ಭುತ ಧೈರ್ಯದಿಂದ ಎದುರಿಸಿದ ಕೀರ್ತಿಗೆ ನಮ್ಮ ಮುಂದಾಳುಗಳು ಖಂಡಿತವಾಗಿ ಭಾಗಿಗಳಾಗಿದ್ದಾರೆ. ಆಗ ಅವರು ಎದೆಗುಂದಿದ್ದರೆ ಇಂದು ಈ ದೇಶದಲ್ಲೊಂದು ಸರಕಾರವಿರುತಿತ್ತೇ ಎಂಬದು ಸಂಶಯಾಸ್ಪದವಾಗಿದೆ. ೭೦ ಲಕ್ಷ ಸ್ತ್ರೀಪುರುಷ ಬಾಲಕೆಯಬಾಲ ನಿರಾಶ್ರಿತರಾದರು. ಪಶ್ಚಿಮದಿಂದ ಯಾವುದೋ ಒಂದು ದುರ್ನಿವಾರ್ಯವಾದ ಮಹಾಪೂರದಂತೆ ನಮ್ಮ ರಾಜಧಾನಿಯತ್ತ ಆ ನಿರಾಶ್ರಿತಧಾರೆ ಧಾವಿಸಿ ಬಂತು. ಮೊದಲೇ

ಆಹಾರದ ಕೊರತೆಯಿಂದ ಬಳಲುತ್ತಿದ್ದ ದೇಶದಲ್ಲಿ ಈ ಸರ್ವಥಾ ನಿರಾಶ್ರಿತವಾದ ಜನಕೋಟಿಯನ್ನು ಬರಮಾಡಿಕೊಂಡು ಆಶ್ರಯವಿತ್ತು ಅನ್ನವಸ್ತ್ರಗಳನ್ನಿತ್ತುದೇ ಒಂದು ದೊಡ್ಡ ಕೃತಿ. ಈ ದುರ್ದೈವಿ ಜನಕೋಟಿಗೆ ಇನ್ನೂ ವಸತಿಯೇ ಮೊದಲಾದ ಜೀವನ ಸೌಕರ್ಯಗಳು ಸಾಕಷ್ಟು ಒದಗಿಲ್ಲವೆಂಬದು ನಿಜ. ಅವರು ಹಲ ಬಗೆಯ ತ್ರಾಸಗಳನ್ನನುಭವಿಸುತ್ತ ತಮ್ಮ ಪೂರ್ಣ ಪುನರ್ನಿವೇಶನದ ದಾರಿಯನ್ನೆದುರು ನೋಡಬೇಕಾಗಿದೆ. ಅವರ ಮನಸ್ಸಿನಲ್ಲಿ ಸರಕಾರದ ಬಗ್ಗೆ ತುಂಬ ಆಕ್ರೋಶವುಂಟಾಗಿರಲೂ ಬಹುದು. ಆದರೆ ಸರಕಾರ ಅವರ ಮೇಲೆ ಅತ್ಯಂತ ಕನಿಕರದಿಂದ ಸಾಧ್ಯವಾದುದನ್ನೆಲ್ಲ ಮಾಡುತ್ತಿದೆಯೆಂದೂ ಕಾಲಾಂತರವು ಅವರಿಗೆ ಭಾರತದ ಸ್ವಾಭಿಮಾನಿ ಸ್ವಾವಲಂಬಿ ನಾಗರಿಕತ್ವವನ್ನು ತಂದು ಕೊಡದಿರದೆಂದೂ ಹೇಳಲು ಯಾವ ಸಂಶಯವೂ ಇಲ್ಲ.

ಸಂಸ್ಥಾನಗಳ ಉದ್ಧಾರ

ಮಹತ್ತರವಾದ ಎರಡನೆಯ ಕೃತಿಯೆಂದರೆ ಈಗ ಹೆಚ್ಚುಕಡಿಮೆ ಒಂದು ಶತಮಾನದಿಂದ ಬ್ರಿಟಿಶ ಸಾಮ್ರಾಜ್ಯವಾದಿಗಳು ಕಟ್ಟಿದ ಒಂದು ಕಟ್ಟುಕತೆಯನ್ನು ಗಾಳಿಗೆ ತೂರಿದ ಸರದಾರ ಪಟೇಲರ ಮುತ್ಸದ್ದಿತನ. ಈ ಎರಡು ವರ್ಷಗಳಲ್ಲಿ ಏಕಪ್ರಕಾರವಾದ ಯಾವುದಾದರೊಂದು ಪ್ರಗತಿಯಾಗಿದ್ದರೆ ಅದು ಭಾರತದ ನಕಾಶೆಯನ್ನು ವಿಕೃತಗೊಳಿಸಿದ್ದ ೫೬೨ ಸಂಸ್ಥಾನಗಳನ್ನು ಭಾರತದಲ್ಲಿ ಅಂತರ್ಗತವಾದ ಘಟಕಗಳಾಗಿ ಪುನರ್ಘಟಿಸಿದ್ದು. ಬ್ರಿಟಿಶರು ತಾವು ಹೊರಟುಹೋಗುವಾಗ ಈ ಸಂಸ್ಥಾನಗಳಿಗೆ ಸ್ವಾತಂತ್ರ್ಯ ಕೊಟ್ಟು ಹೋಗಿ ಅನಂತ ಕಾಲದ ಒಂದು ಸಮಸ್ಯೆಯನ್ನು ನಮಗೆ ಕೊಟ್ಟು ಹೋದವೆಂದು ಬಗೆದಿದ್ದರು. ಮತ್ತು ನಮ್ಮ ಮುಂದಾಳುಗಳು ಒಂದಾದರೂ ತಪ್ಪು ಹೆಜ್ಜೆಯನ್ನಿರಿಸಿದ್ದರೆ ಈ ಜಟಿಲ ಪ್ರಶ್ನೆ ನಮ್ಮ ನವಾರ್ಜಿತ ಸ್ವಾತಂತ್ರ್ಯಕ್ಕೆ ವಿಷಪ್ರಾಯವೂ ಆಗುತ್ತಿತ್ತು. ಆದರೆ ಇಂದು ಈ ಸಂಸ್ಥಾನಗಳಲ್ಲಿ ಹೈದರಾಬಾದ, ಮೈಸೂರು ಮತ್ತು ಅಂತಾರಾಷ್ಟ್ರೀಯ ಪಟ್ಟಕ್ಕೆ ಹೋಗಿರುವ ಕಾಶ್ಮೀರ ಸಂಸ್ಥಾನಗಳನ್ನು ಹೊರತು ಯಾವವೂ ಪ್ರತ್ಯೇಕವಾಗಿ ಉಳಿದಿಲ್ಲ. ೧,೦೬,೦೮೫ ಚ. ಮೈಲು ವಿಸ್ತಾರದ ೧೯೫ ಲಕ್ಷ ಜನಸಂಖ್ಯೆಯ ೨೧೯ ಸಂಸ್ಥಾನಗಳು ನೇರವಾಗಿ ಪ್ರಾಂತಗಳಲ್ಲಿ ಲೀನವಾಗಿ ಹೋಗಿವೆ; ೨೬,೪೨೯ ಚ. ಮೈಲು ವಿಸ್ತಾರದ ೨೫ ಲಕ್ಷ ಜನಸಂಖ್ಯೆಯ ೬೧ ಸಂಸ್ಥಾನಗಳು ಕೇಂದ್ರದ ಆಡಳಿತೆಗೆ ಬಂದಿವೆ. ೨,೪೬,೪೬೦ ಚ. ಮೈಲು ವಿಸ್ತಾರದ ೩೬೬ ಲಕ್ಷ ಪ್ರಜೆಗಳುಳ್ಳ ೨೭೫ ಸಂಸ್ಥಾನಗಳು ಆರು ಒಕ್ಕೂಟಗಳಾಗಿ ಪರಿವರ್ತಿಸಲ್ಪಟ್ಟಿವೆ. ಇನ್ನುಳಿದವೆಂದರೆ ಪೂರ್ವ ಭಾರತದ ಕುಚ್‌ಬಿಹಾರ, ಮಣಿಪುರ, ತ್ರಿಪುರ ಮತ್ತು ಖಾಸಿ ಪರ್ವತ ಸಂಸ್ಥಾನಗಳು ಮಾತ್ರ. ಇವುಗಳ ವಿಲಯನವೂ ಬೇಗನೆ ಆಗುವ ನಿರೀಕ್ಷೆಯಿದೆ. ಇಷ್ಟೆಲ್ಲ ಕಾರ್ಯ— ಹೈದರಾಬಾದ ಒಂದನ್ನು ಬಿಟ್ಟರೆ—ಒಂದು ಹನಿ ನೆತ್ತರೂ ಚೆಲ್ಲದೆ ಕೈಗೂಡಿದೆ. ಈಗ ಈ

ಸಂಸ್ಥಾನಗಳಲ್ಲಿ ಆಳಿಡುತ್ತಿದ್ದ ಪ್ರತಿಗಾಮಿ ಜಾಗಿರದಾರಿ (Feudal) ಅವಶೇಷಗಳನ್ನು ಕುಟ್ಟಿಹಾಕುವ ಕಾರ್ಯ ಭರದಿಂದ ಸಾಗಿದೆ. ನರೇಂದ್ರರಿಗೆ ಖಾಸಗಿ ವೆಚ್ಚಕ್ಕೆ "ಅಲಾವನ್ಸ್" ಕೊಟ್ಟು ಅವರಿಂದ ಅನೇಕ ಆಸ್ತಿಗಳನ್ನು-೧೦೦ ಕೋಟಿ ರೂಪಾಯಿ ಮಿಕ್ಕ ಬೆಲೆ ಬಾಳುವಷ್ಟನ್ನು-ಕಸಿದುಕೊಂಡು ಜನಪ್ರತಿನಿಧಿ ಸರಕಾರಗಳಿಗೆ ಒಪ್ಪಿಸಲಾಗಿದೆ. ಸಂಸ್ಥಾನಗಳೂ ಸಂಸ್ಥಾನ ಒಕ್ಕೂಟಗಳೂ ಪ್ರಾಂತಗಳಿಗೆ ಸರಿಸಮಾನ ದರ್ಜೆಗೆ ಬರುವಂತೆ ಅರ್ಥಿಕ ಸಮೀಕರಣದ ವ್ಯವಸ್ಥೆ ಬೇಗನೇ ಆಗಲಿದೆ. ಎಂದೆಂದೂ ಪ್ರಜಾತಂತ್ರದ ಸವಿಯರಿಯದ ಈ ೯ ಕೋಟಿ ಪ್ರಜೆಗಳು ಪ್ರಜಾತಂತ್ರದ ಮರ್ಮಗಳನ್ನು ಕಲಿಯತೊಡಗಿದ್ದಾರೆ.

ಗಾಂಧೀ ರಾಜ್ಯಕ್ಕೆ ಕೀರ್ತಿ

ಅಂತಾರಾಷ್ಟ್ರೀಯ ರಂಗದಲ್ಲಿ ಭಾರತದ ಪ್ರಭಾವ ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿದೆ.

ಸಂಯುಕ್ತರಾಷ್ಟ್ರ ಸಂಘದ ಹಲ ಸದಸ್ಯರಲ್ಲಿ ೫೦ ರಾಷ್ಟ್ರಗಳು ಭಾರತದಲ್ಲಿ ತಮ್ಮ ರಾಯಭಾರಿಗಳನ್ನಾಗಲಿ ಪ್ರತಿನಿಧಿಗಳನ್ನಾಗಿ ಇರಿಸಿರುವುದೇ ಭಾರತದ ಪ್ರತಿಷ್ಠೆಯ ದ್ಯೋತಕವಾಗಿದೆ. ಮುಖ್ಯಮಂತ್ರಿ ಮತ್ತು ವಿದೇಶಮಂತ್ರಿಗಳಾದ ಪಂ. ಜವಾಹರಲಾಲರ ಕೀರ್ತಿ ಈ ವಿಷಯದಲ್ಲಿ ನಮಗೆ ತುಂಬ ನೆರವಾಗಿದೆ. ಹೆಚ್ಚು ಕಡಿಮೆ ಎಲ್ಲ ರಾಷ್ಟ್ರಗಳಲ್ಲಿ ನಮ್ಮ ರಾಯಭಾರಿಗಳೋ ಪ್ರತಿನಿಧಿಗಳೋ ಇದ್ದಾರೆ. ರಾಯಭಾರ ಕಲೆ ನಮಗೆ ಹೊಸದು, ವಿದೇಶನೀತಿಯನ್ನು ನಾವಿನ್ನೂ ರೂಪಿಸಿಕೊಳ್ಳಬೇಕಾಗಿದೆ. ನಮ್ಮಲ್ಲಿ ಸಾಕಷ್ಟು ಜನ ತರಬೇತು ಹೊಂದಿದ ದೂತತಂತ್ರಜ್ಞರು ಇಲ್ಲ. ಅವರನ್ನು ಸಂಗ್ರಹಿಸುವ ಏರ್ಪಾಡು ನಡೆದಿದೆ. ಹೀಗಿದ್ದರೂ ಇಂಡೊನೇಶಿಯದ ಬಗ್ಗೆ ದಿಲ್ಲಿಯಲ್ಲಿ ಈ ವರ್ಷಾರಂಭದಲ್ಲಿ ನಾವು ಸೇರಿಸಿದ ಏಶಿಯನ್ ರಾಷ್ಟ್ರಗಳ ಪರಿಷತ್ತು ಯಶಸ್ವಿಯಾಗಿ ನಡೆದುದಲ್ಲದೆ ಸಾಮ್ರಾಜ್ಯವಾದಿ ಡಚ್ಚರನ್ನು ಎದೆಗುಂದಿಸಿ ಭದ್ರತಾಮಂಡಲದ ನಿರ್ಣಯದ ಮೇಲೂ ಪರಿಣಾಮ ಮಾಡಿತು. ನಿಜವಾಗಿ ಎಲ್ಲ ಅಸ್ವತಂತ್ರ ದೇಶಗಳೂ ನೆರವಿಗಾಗಿ ನಮ್ಮ ಕಡೆ ಆಶಾದೃಷ್ಟಿಯನ್ನು ಬೀರುತ್ತಿವೆ. ನಾವು ಅಂತಾರಾಷ್ಟ್ರೀಯ ವಿಚಾರದಲ್ಲಿ ವಹಿಸಿದ ನ್ಯಾಯೈಕಪಕ್ಷಪಾತ ನೀತಿಯಿಂದ ನಮಗೆ ಆದ ಪ್ರತ್ಯಕ್ಷ ಲಾಭ ಕಡಿಮೆಯೇನೋ ನಿಜ. ಆದರೆ ಆಗ್ನೇಯ ಏಶಿಯ, ದ. ಆಫ್ರಿಕ ಪ್ಯಾಲಿಸ್ತಾನ, ಸೈಯುಕ್ತ ಆಫ್ರಿಕ ಮೊದಲಾದವುಗಳ ಸಮಸ್ಯೆಗಳ ಬಗ್ಗೆ ನಾವು ವಹಿಸಿದ ನೀತಿ "ಗಾಂಧೀರಾಜ್ಯ"ಕ್ಕೆ ಕೀರ್ತಿ ತರುವಂತಿದೆ. ಉಪನಿವೇಶಗಳ ಬಗ್ಗೆ ಭದ್ರತಾ ಮಂಡಲದ ಆಸಕ್ತ ರಾಷ್ಟ್ರಗಳು ತಯಾರಿಸಿದ ಕುಟಿಲ ಯೋಜನೆ ನಮ್ಮ ಒಂದೇ ಮತದಿಂದ ಉರುಳಿದ್ದು ನಮ್ಮ ಪತ್ತನ್ನು ಬೆಳೆಸಿದೆ.

ಸಶಸ್ತ್ರ ಬಲಗಳ ಸಾಹಸ

ನಮ್ಮ ಸಶಸ್ತ್ರ ಬಲಗಳ ಕಾರ್ಯವಾದರೂ ಯೋಗ್ಯ ಸಾಧನಗಳನ್ನೊದಗಿಸಿದರೆ ಭಾರತೀಯ ನಾಯಕತ್ವದಲ್ಲಿ ಭಾರತೀಯ ಸೇನೆ ಎಂಥ ಸಾಹಸಗಳನ್ನೂ ಯಶಸ್ವಿಯಾಗಿ ನಡೆಸಬಲ್ಲದೆಂದು ಸಿದ್ಧಮಾಡಿ ತೋರಿಸಿದೆ. ಕಾಶ್ಮೀರದಲ್ಲಿ ನಮ್ಮ ಭೂಮ್ಯಾಕಾಶದಲಗಳು ಪ್ರಾಯಶಃ ಅಸಾಧ್ಯ ಸ್ಥಿತಿಗತಿಗಳಲ್ಲಿ ಹೋರಾಡಿ ಗೆಲವು ಪಡೆದವು. ಲಡಾಖದ ವಿಮೋಚನೆಯಂತೂ ನಮ್ಮ ವಿಮಾನಬಲದ ಅಪ್ರತಿಮ ಸಾಹಸವೇ ಸರಿ. ಹೈದರಾಬಾದದ ಮೇಲಿನ ೫ ದಿನಗಳ ಪೋಲೀಸು ಕ್ರಮ ಆದರ್ಶ ಪೂರ್ವಸನ್ನಾಹದ ಮಾದರಿಯಾಗಿತ್ತು.

ಗೃಹರಂಗದಲ್ಲಿ

ಹೀಗೆ ರಾಜಕೀಯ ರಂಗದಲ್ಲಿ ನಾವು ಗಳಿಸಿದ ಸಾಫಲ್ಯವನ್ನು ನಾವು ನಿಜವಾಗಿ ಅಭಿಮಾನದಿಂದ ಸಿಂಹಾವಲೋಕನ ಮಾಡಬಹುದು. ಆದರೆ ಈ ಭಾರತದ ಮಹಾಮಾನವ ಕೋಟಿಯ ನಿತ್ಯಜೀವನದಲ್ಲಿ ಸ್ವಾತಂತ್ರ್ಯದ ಮೆರುಗು ಎಷ್ಟುಮಟ್ಟಿಗೆ ತಳತಳಿಸುತ್ತಿದೆ? ನಾವು ಅಸಂತುಷ್ಟಿಯಿಂದ ನೋಡಬಹುದಾದ ಸಂಗತಿಗಳು ಗೃಹರಂಗದಲ್ಲಿ ದುರ್ದೈವದಿಂದ ಇವೆ. ನಾವು ಏನನ್ನೂ ಮಾಡಲು ಅಸಮರ್ಥರಾಗಿದ್ದೇವೆಂದಲ್ಲ, ಪ್ರಯತ್ನವನ್ನು

ಮಾಡಿಲ್ಲವೆಂದಲ್ಲ. ಅನೇಕ ಪ್ರಾಂತಗಳು ಜಮೀನುದಾರಿ ಪದ್ಧತಿಯ ಸಂಕೋಲೆಗಳಿಂದ ಬಡ ರೈತನನ್ನು ಮುಕ್ತಗೊಳಿಸಿವೆ, ಗೊಳಿಸುತ್ತಿವೆ. ನಮ್ಮ ಅತಿ ದೊಡ್ಡ ಪ್ರಾಂತಗಳು ಕೆಲವು ಮಹಾತ್ಮಾ ಗಾಂಧಿಯವರ ಅಚ್ಚುಮೆಚ್ಚಿನ ನೈತಿಕ ಕಾರ್ಯವಾದ ಮದ್ಯನಿರೋಧವನ್ನು-ಕೋಟ್ಯಂತರ ರೂಪಾಯಿಗಳ ಕರಹಾನಿಯನ್ನು ಲೆಕ್ಕಿಸದೆ-ಜಾರಿಗೆ ತಂದಿವೆ. ಅನೇಕ ಕೂಲಿಕಾರ ಕಾಯಿದೆಗಳನ್ನು ಮಾಡಿ ಪಟ್ಟಣಿಗ ಕೂಲಿಕಾರರ ಸ್ಥಿತಿಗತಿಗಳನ್ನು ಸಹ್ಯವಾಗಿ ಮಾಡಿದ್ದೇವೆ. ಬಂಡವಳಗಾರ-ಕೂಲಿಕಾರರ ನಡುವಣ ಕಚ್ಚಾಟಗಳಿಂದ ರಾಷ್ಟ್ರಕ್ಕೆ ಹಾನಿಯಾಗುವದನ್ನೂ ಎಷ್ಟೋ ತಡೆದಿದ್ದೇವೆ.

ಮನೆ ಮನೆಗೆ ಸ್ವರಾಜ್ಯ ಮುಟ್ಟಿಲ್ಲ

ಆದರೆ ಸ್ವರಾಜ್ಯವನ್ನು ಮನೆಮನೆಗೂ ಹಳ್ಳಿಹಳ್ಳಿಗೂ-ಜನರ ಜೀವನವನ್ನು ಹೆಚ್ಚು ಸುಖಿಯಾಗಿ ಮಾಡುವ ಮೂಲಕ- ಮುಟ್ಟಿಸುವಲ್ಲಿ ನಾವು ಕೈಗೂಡಿಸಿಕೊಂಡದ್ದಕ್ಕಿಂತ ಕೈಗೂಡಿಸಿಕೊಳ್ಳದ್ದು ಹೆಚ್ಚೆಂದು ಒಪ್ಪಿಕೊಳ್ಳಬೇಕಾಗಿದೆ. ಪಟ್ಟಣಿಗ ಕೂಲಿಕಾರರ ಬಾಳುವೆಯನ್ನು ಸುಧಾರಿಸಲು ನಾವು ಕೆಲ ಪರಿಣಾಮಕಾರಿ ಉಪಾಯಗಳನ್ನು ಕೈಕೊಂಡಿದ್ದರೂ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಕಣ್ಮರೆಯಾಗುವದನ್ನು ಹಣೆಯಲ್ಲಿ ಬರೆಸಿಕೊಂಡು ಬಂದ ಮಹಾ ಮಾನವಕೋಟಿಗಳ ಬಾಳುವೆ ಬೆಳಗಿಲ್ಲ. ಸಮಾಜದ ಬೆನ್ನೆಲುಬಾದ ಮಧ್ಯಮ ವರ್ಗವಂತೂ ಅತ್ಯಂತ ದಿಷನ್ನಾವಸ್ಥೆಯಲ್ಲಿ ನರಳುತ್ತಿದೆ. ಅನ್ನದ ಕೊರತೆಯೂ ದೂರವಾಗಿಲ್ಲ. ನಾವು ಹೆಚ್ಚು ಆಹಾರ ಬೆಳಯಲು ಮಾಡಿದ ಪ್ರಯತ್ನಗಳೆಲ್ಲವೂ ಈ ವರೆಗೆ ನೀರ ಮೇಲಿನ ಹೋಮದಂತಾಗಿವೆ. ಸದ್ಯಕ್ಕೇನೋ ಹೊರಗಿನಿಂದ ಅಪಾರ ಧನವ್ಯಯಮಾಡಿ ಆಹಾರ ತರಿಸಿ ದೊಡ್ಡಪ್ರಮಾಣದ ಬರಗಾಲವನ್ನು ನಿವಾರಿಸಲಾಗಿದೆ. ೧೯೫೧ರೊಳಗೆ ಆಹಾರಸ್ವಾವಲಂಬನದ ಸರಕಾರದ ಧೋರಣೆ ಫಲಕಾರಿಯಾಗುವದು ಅದು ಪ್ರಯೋಗಿಸುವ ಪದ್ಧತಿಯನ್ನೇ ಅವಲಂಬಿಸಿದೆ. ವಸತಿ ಸೌಕರ್ಯಗಳಾದರೂ ಹೆಚ್ಚಾಗಿಲ್ಲ. ಲಕ್ಷಗಟ್ಟಲೆ ನಿರಾಶ್ರಿತರು ಇನ್ನೂ ಬರಿ ಡೇರೆಗಳಲ್ಲಿ ವಾಸಿಸುತ್ತ ಚಳಿಬಿಸಿಲುಮಳೆಗಳೊಡನೆ ಹೋರಾಡಬೇಕಾಗಿದೆ.

ಬಂಡವಳದ ಕಣ್ಮರೆ

ಔದ್ಯೋಗಿಕ ಉತ್ಪಾದನೆಯನ್ನು ಹೆಚ್ಚಿಸುವದರಲ್ಲಾಗಲಿ ಹೊಸ ಉದ್ಯೋಗವನ್ನು ಸ್ಥಾಪಿಸುವದರಲ್ಲಾಗಲಿ ನಮಗೆ ದೊರೆತ ಸಾಫಲ್ಯ ಶೂನ್ಯಪ್ರಾಯವಾಗಿದೆ. ಲಿಯಾಕತ ಅಲ್ಲಿಖಾನರು ಅರ್ಥಮಂತ್ರಿಗಳಾಗಿದ್ದಾಗ ಕೈಕೊಂಡ ಧೋರಣೆಗಳ ದುಷ್ಪರಿಣಾಮದಿಂದ ನಾವಿನ್ನೂ ಪಾರಾಗಿಲ್ಲ. ಇಂದಿಗಾದರೂ ಎರಡು ಅರ್ಥಿಕ ತತ್ವಗಳ ನಡುವೆ ಹೊಯ್ದಾಡುತ್ತಿರುವ ನಮ್ಮ ಸರಕಾರ ನಿಶ್ಚಿತವಾದ ಅರ್ಥಿಕ ಧೋರಣೆಯನ್ನು ಕೈಕೊಳ್ಳಲಾರದುದೇ ನಮ್ಮ ಔದ್ಯಮಿಕ ಸ್ಥಾಗಿತ್ಯಕ್ಕೆ ಮೂಲವಾಗಿದೆ. ಬಂಡವಳಗಾರರು ಭೀತರಾಗಿದ್ದಾರೆ-ಏನಿಲ್ಲೆಂದರೂ ಭಯವನ್ನು ನಟಿಸಲು ಅವರಿಗೆ ನೆವಗಳನ್ನು ನಾವು ಒದಗಿಸಿದ್ದೇವೆ. ಶೇರುಪೇಟೆಯಲ್ಲಿ ಕಳೆದೆರಡು ವರ್ಷಗಳಿಂದ ಧನನಿಕ್ಷೇಪಕರಿಗೆ ಕೋಟ್ಯಂತರ ರೂಪಾಯಿ ಹಾನಿಯಾಗಿದೆ. ಇದರಿಂದ ಇದ್ದಬಿದ್ದ ಬಂಡವಳವೂ ಮರೆಸೇರಿಬಿಟ್ಟಿದೆ. ಉತ್ಪಾದನೆ ಹೆಚ್ಚಿಸುವಲ್ಲಿ ಬಂಡವಳಗಾರರ ಮತ್ತು ಕೂಲಿಕಾರರ ಸಹಕಾರವನ್ನು ಗಳಿಸಲು ನಾವು ಸಮರ್ಥರಾಗಿಲ್ಲ. ಉತ್ಪಾದನೆ ಕುಗ್ಗಿದ ಮೂಲಕ ಮೊದಲೇ ಇದ್ದ ಕೊರತೆಗಳು ಮತ್ತಷ್ಟು ದಾರುಣವಾಗಿ ಅಭೂತಪೂರ್ವ ಕಳ್ಳಪೇಟೆ ಲಂಚಗಳ ತಾಂಡವವನ್ನು ಕಾಣುತ್ತೇವೆ.

ಹೀಗೆ, ನಮ್ಮ ರಾಷ್ಟ್ರಪಿತ, ಸ್ವಾತಂತ್ರ್ಯಶಿಲ್ಪಿ ಮಹಾತ್ಮಾ ಗಾಂಧಿಯವರ ಕನಸಿನ ಸ್ವರಾಜ್ಯ, ಮನೆಮನೆಗೂ ವ್ಯಕ್ತಿಗಳಿಗೂ ಸ್ವರಾಜ್ಯ ಇನ್ನೂ ನಮ್ಮಿಂದ ದೂರವಾಗಿಯೇ ಇದೆ. ಅದನ್ನು ಅಸ್ತಿತ್ವಕ್ಕೆ ತರಲು ನಾವೆಲ್ಲರೂ ನಡುಬಿಗಿದು ನಿಲ್ಲುವುದೊಂದೇ ಮಾರ್ಗ.

ಪದವೀಧರರಾಗಲಿರುವ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ಚಾರಿತ್ರ್ಯಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುವಂತೆ ವಿವಿಧಧರ್ಮವೇದಾಂತಗಳ ಅಭ್ಯಾಸಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು. ಸದ್ಯದ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣಹೊಂದಿ ಹೊರಬೀಳುತ್ತಿರುವ ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವವೂ ವಿದ್ವತ್ತಿಗಿಂತ ಹೆಚ್ಚಾಗಿ ಚಾರಿತ್ರ್ಯವೂ ಒಡಮೂಡಿ ಬರಬೇಕು ಎಂದು ಮುಂಬಾದಿ ಗ. ಜ. ರಾಜಾಜಿ ಮುಂಬಯಿಯ ಚೌಪಾಟಿಯ ಮೇಲೆ ಕಟ್ಟಲಾಗಿರುವ ಭವಂತನ ಭಾರತೀಯ ವಿದ್ಯಾಭವನದ ಕಟ್ಟಡವನ್ನು ಉದ್ಘಾಟಿಸುವಾಗ ಹೇಳಿದರು.

ವಿಚಾರ ದ್ವಂದ್ವ

ಈ ತಲೆಕಟ್ಟಿನ ಕೆಳಗೆ ಜನಾಭಿಪ್ರಾಯವನ್ನು ವಾರವಾರವೂ ಪ್ರಕಟಿಸಲಾಗುವದು. ಕೇವಲ ಸ್ಥಾನಿಕ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಚರ್ಚೆ ನಡೆಸಿ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

*

ಸಹಾಯಕ—ಪುಸ್ತಕಗಳು

ಪ್ರಾಥಮಿಕ ಶಾಲೆಗಳಲ್ಲಿ ಸಹಾಯಕ ಪುಸ್ತಕಗಳು-ಪ್ರಶ್ನೋತ್ತರ ಪುಸ್ತಕಗಳು, ಶಬ್ದಾರ್ಥದ ಪುಸ್ತಕಗಳು ಮುಂತಾದವು ಇರಬಾರದೆಂದು ಆಜ್ಞೆ ಇದೆ. ಆದರೆ ಅವು ಇಲ್ಲದೆ ಯಾವ ಶಾಲೆಯೂ ಇದ್ದಂತೆ ನನಗೆ ಕಾಣುವದಿಲ್ಲ. ಹೀಗೆ "ಮುಚ್ಚುಮರೆ" ಏಕೆ ನಡೆಯಬೇಕು? ಮಾಡಿದ್ದರೆ, ಮಾಡುತ್ತಿದ್ದರೆ ಹೊಟ್ಟೆಗಾಗಿಯಲ್ಲವೆ? ಇಂದಿನ ಸತ್ಯಯುಗದಲ್ಲಿ-ಜನತಾ ರಾಜ್ಯದಲ್ಲಿ ಈ ಕೃತಿ ವರ್ಜ್ಯಿಸುವದು ಒಳಿತು.

ಏನೋ ಹಳೆಕಾಲದ ಟ್ರೇನಿಂಗ ಶಿಕ್ಷಕರು ಒಳ್ಳೇ ವಿದ್ಯಾವಂತರೆಂದೂ ಜ್ಞಾನಿಗಳೆಂದೂ ಎಲ್ಲ ವಿಷಯಗಳಲ್ಲಿ ಪ್ರವೀಣರೆಂದೂ ಹೇಳಲಾಗುತ್ತದೆ. ಇದು ಅಲ್ಲದೆ, ಅವರಿಗೆ ಟ್ರೇನಿಂಗ ಕಾಲೇಜದಲ್ಲಿ ಸಾಕಷ್ಟು ಅಭ್ಯಾಸ ಮಾಡಿಸಲಾಗುತ್ತಿತ್ತೆಂದೂ ಹೇಳುತ್ತಾರೆ. ಹೀಗಿದ್ದರೂ ಕೂಡ ಅವರ ಅಳಿಕೆಯಲ್ಲಿ ಕೂಡ ಈ ಸಹಾಯಕ ಪುಸ್ತಕಗಳಿಗೆ ಕೊರತೆ ಇದ್ದಿಲ್ಲ. ಕಾಯದೆ ಮಾತ್ರ ಇರಬಾರದೆಂದು ಇತ್ತು. ಆ ಪರಂಪರೆಯೇ ಈ ವರೆಗೆ ಸಾಗುತ್ತಬಂದಿದೆ. ಅದರಿಂದ ಲಾಭವು ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಸಾಕಷ್ಟು ದೊರಕಲಾರದಂತೆ ಆಗಿದೆ.

ಹಿಂದಿನ ಟ್ರೇಂಡ ಶಿಕ್ಷಕರಿಗಿಂತಲೂ ಇಂದಿನ ಟ್ರೇಂಡ ಶಿಕ್ಷಕರು ಅಷ್ಟು ಪರಿಪಕ್ವವಾಗಿ ಶಿಕ್ಷಣವನ್ನು ಅರಗಿಸಿಕೊಳ್ಳಲಾರರೆಂದು ಹೇಳಲಾಗುತ್ತದೆ. ಏನೋ ಕೆಲವರು ಅರಗಿಸಿಕೊಂಡಿದ್ದಾರೆ ಅರಗಿಸಿಕೊಳ್ಳಹತ್ತಿದ್ದಾರೆಎಂದು ಭಾವಿಸೋಣ. ಉಳಿದ ಬಹುಸಂಖ್ಯಾಕ ಶಿಕ್ಷಕರು ಮಾತ್ರ ಅವರಷ್ಟು ಪಚನಮಾಡಿಕೊಳ್ಳುತ್ತಿರುವದಿಲ್ಲವೆಂಬಂತಾಯಿತು. ಇದೇ ವರ್ಗವೇ ಬಹುಸಂಖ್ಯಾಕವಾಗಿ ಇರುವದು ಸಹಜ. ಪೂರ್ತಪಚನಮಾಡಿಕೊಳ್ಳಲಿಕ್ಕೆ ಟ್ರೇನಿಂಗ ಕಾಲೇಜದಲ್ಲಿಯಾದರೂ ಕೂಡ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡಲಿಕ್ಕೆ ಏನು ಯೋಜನಾಕ್ರಮಗಳಿವೆ? ಒಂದು ವೇಳೆ "ಇವೆ" ಎಂದು ಕಲ್ಪಿಸಿದರೆ ವ್ಯಕ್ತಿಯು ಎಷ್ಟು ವಿಷಯಗಳನ್ನು ಆಳವಾಗಿ ಎರಡೇ ವರ್ಷಗಳಲ್ಲಿ ಅಭ್ಯಾಸಮಾಡಬಲ್ಲನು? ಒಂದು ವೇಳೆ ಮಾಡಿದವರಿದ್ದಾರೆಂದು ತಿಳಿಯೋಣ. ಅವರು ಕಾಲೇಜ ಮುಗಿಸಿಕೊಂಡು ಕೆಲಸದ ಮೇಲೆ ಹಾಜರಾದ ಬಳಿಕ ಅವರು ಕಲಿಸುವ ವಿಷಯಗಳೆಷ್ಟು? ವರ್ಗಗಳೆಷ್ಟು? ವಿಷಯ ಹಾಗೂ ವರ್ಗಗಳ ಭಾರದಿಂದ ಪ್ರಾಥಮಿಕ ಶಿಕ್ಷಕನ ತಲೆಯಷ್ಟೇ ಬಾಗುವದಲ್ಲದೆ ಇಡಿಯ ಶರೀರವೇ "ನಾಗಾಲಾಟ" ಹಾಕುವದು. ಅದಕ್ಕೆ ತನ್ನ ಕರ್ತವ್ಯದಿಂದ! ಮುಕ್ತನಾಗಲಿಕ್ಕೆ ಸ್ವಲ್ಪಾವಧಿಯಲ್ಲಿ ಆಯಾಸವಿಲ್ಲದೆ ಗುರಿಸಾಧಿಸುವ ಸಾಧನಗಳನ್ನು-ಸಹಾಯಕ ಪುಸ್ತಕಗಳನ್ನು-ಅಪೇಕ್ಷಿಸುತ್ತಾನೆ. ಅಂತಹ ಉತ್ತಮ ಸಹಾಯಕ ಪುಸ್ತಕಗಳನ್ನು ಕಂಡರೆ, ಪ್ರಶಂಸಿಸುತ್ತಲೂ ಇರುತ್ತಾನೆ.

ಸಹಾಯ ಪುಸ್ತಕಗಳನ್ನು ಬಾಲಕರ ಕೈಯಲ್ಲಿ ಕೊಟ್ಟರೆ ಅವರ ವಿಚಾರಶಕ್ತಿ ನಷ್ಟವಾಗುತ್ತದೆ. ಬಾಲಕರು ಅವನ್ನು ಅರ್ಥ ತಿಳಿದುಕೊಳ್ಳಲಾರದೆ ಘೋಕರಿಸುವದರಿಂದ ವ್ಯರ್ಥ ದಣಿದು ಕಾಲಾಪವ್ಯಯ ಮಾಡಿಕೊಳ್ಳುತ್ತಾರೆಂದು ಬಲ್ಲವರು ಹೇಳುತ್ತಾರೆ. ಹೇಳಲಿ, ಬಿಡಲಿ, ನಮ್ಮೆಲ್ಲರಿಗೆ ಅದರ ಪರಿಣಾಮದ ಅನುಭವವು ಇದ್ದೇ ಇದೆ. ಅದನ್ನು ಅರ್ಥ ತಿಳಿದುಕೊಂಡು ಘೋಕಸಿದರೆ ಬಲ್ಲವರಾದವರು ಏನು ಹೇಳಬಲ್ಲರು?

ಪ್ರಾಥಮಿಕ ಶಿಕ್ಷಕನು ದಿನದ ಆರು ತಾಸುಗಳಲ್ಲಿ ಎಷ್ಟು ವಿಷಯ ಹಾಗೂ ವರ್ಗಗಳಲ್ಲಿ ಅಡ್ಡಾಡುತ್ತಾನೆಂಬದನ್ನು ದಯವಿಟ್ಟು ನೋಡಿರಿ. ಇದರಿಂದ ಆತನು ವಿಷಯ ರುಚಿ ಹೀನ ಪ್ರಾಣಿಯಾಗಿದ್ದಾನೆ! ಮಾಧ್ಯಮಿಕ ಶಿಕ್ಷಕನು ಹೆಚ್ಚು ವಿದ್ಯಾವಂತನು, ಹೆಚ್ಚು ಸಂಬಳವಂತನು "ಈ ವಿಷಯ ನನಗೆ ಬರುವದಿಲ್ಲ" ವೆಂದರೆ ಕ್ಷಮ್ಯವಾಗುತ್ತದೆ. ಆದರೆ ಅದೇ ಪ್ರಾಥಮಿಕ ಶಿಕ್ಷಕನು ಹಾಗೆಂದರೆ ಕ್ಷಮ್ಯವಾದೀತೆ? ಅದಕ್ಕೆ ಈಗಿದ್ದ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ಸ್ಥಿತಿಯು ಹಾಗೆಯೇ ಇನ್ನೂ ಮುಂದುವರಿಸುವದಾದರೆ ಈ ಸಹಾಯಕ ಪುಸ್ತಕಗಳು ಊಜುಗುಂಬಳಕಾಯಿಗಳಂತೆ ಬೇಕೇಬೇಕು.

ವಿಚಾರಪ್ರಚೋದಕ ಸುಲಭ ಶೈಲಿಯಲ್ಲಿ ಬರೆದ ಸಹಾಯಕ ಪುಸ್ತಕಗಳಿಗೆ ಸರಕಾರವು ಮಂಜೂರಿ ಕೊಡಲಿ. ಈ "ಮುಚ್ಚುಮರೆ" ಪರದೆ ಇನ್ನು ಮುಂದೆ ಹರಿಯಲಿ; ಇಂದಿನ ಸತ್ಯಯುಗವು ಸತ್ಯವಾಗಲಿ.

—ಭೀಮಶರ್ಮಾ ನಾಗನೂರು

× × ×

'ಲಂಚದ ಹೊಣೆ'

ದಿನಾಂಕ ೧-೮-೪೯ ರ ಕರ್ಮವೀರದಲ್ಲಿ ಸೌ. ರಾಧಾಬಾಯಿ ಗಾಂಜೇಕರ ಅವರು ಬರೆದ ಲೇಖ ಓದಿ ಸಮಾಧಾನವಾಯಿತು. ಆದರೆ ಲಂಚದ ಹೊಣೆಯನ್ನು ಸರಕಾರಿ ನೌಕರರ ಮೇಲೆಯೇ ಹಾಕಲು ಅವರು ವಿಷಯವನ್ನು ಕೇಂದ್ರೀಕರಿಸಿದ ಮೋಡಿ ಕಂಡರೆ ನಗೆ ಬರುವಂತಿದೆ.

ಲಂಚಗುಳಿತನದ ಹೊಣೆಯನ್ನು ಕೊಡ ತಕ್ಕೊಳ್ಳುವವರಲ್ಲಿ ಯಾರೊಬ್ಬರ ಮೇಲೆ ಹೊರಿಸುವಾಗ ಅದರ ಮೂಲವನ್ನು ಕೊಂಚ ಬೆದಕುವುದು ಉತ್ತಮ. ಹೀಗೆ ಬೆದಕಿದಾಗ ಬೆಳಕಿಗೆ ಬರುವ ಮೊದಲನೇ ವಿಷಯವೆಂದರೆ ಲಂಚಗುಳಿತನವು ಸೂಳೆಗಾರಿಕೆಯ ಇನ್ನೊಂದು ರೂಪ ಎಂದು. ಸೂಳೆ ತನ್ನ ಹೊಟ್ಟೆ ಬಟ್ಟೆ ಸಂಸಾರವ್ಯವಹಾರವನ್ನು ನಿರ್ವಹಿಸಲು ಗಂಡಸರನ್ನು ಸುಳ್ಳು ಮೋಹದಿಂದ ಸೆಳೆಯುವಂತೆ ಲಂಚಕೊಟ್ಟು, ಕೆಲಸವಾಗಬೇಕಾದವನು ಸರಕಾರೀ ನೌಕರನನ್ನು ಮೋಹಿಸುತ್ತಾನೆ. ಅಂದ ಮೇಲೆ ಸೂಳೆಗಾರಿಕೆಯ ಮಾಯದ ಬಲೆಯನ್ನು ಪ್ರಸ್ತುತ ಪತ್ರಗಾರ ಬೀಸಿದಂತಾಯಿತು. ಈ ಚಮತ್ಕೃತಿ ಬರೇ ಹಣದ ರೂಪದಲ್ಲಿ ವ್ಯಕ್ತವಾಗದೇ ಪ್ರತಿದಿನ ಹಲವಾರು ರೂಪ ತಾಳುತ್ತ ಕಲ್ಪನಾತೀತ ವೈವಿಧ್ಯವನ್ನು ಹೊಂದಿದೆ. ಆದರೆ ಪತ್ರಗಾರನಿಂದ ಚಹ ಕುಡಿದಾಗಲೂ ಅದೂ ಲಂಚದ ಒಂದ ಸ್ವರೂಪವೇ ಅನ್ನುವಾಗ ಅಲ್ಲಿ ವಿಚಾರದ ಮತ್ತು ಪ್ರಾಮಾಣಿಕ ಜೀವನದ ಸೂಕ್ಷ್ಮತೆ ಕಂಡರೂ ಮಾನವತೆಯ, ಹೊಂದಿಕೆಯ ಮತ್ತು ಪ್ರೀತಿ ವಿಶ್ವಾಸಗಳ ಬೆಳೆಗೆಯ ವಿಷಯದಲ್ಲಿ ಅದು ತತ್ವನಿಷ್ಠೆಯ ಅತಿರೇಕ ಕಾಠಿಣ್ಯವೆನಿಸೀತು. ಚಹಾ ಬೀಡಿ ಸಿಗಾರೇಟುಗಳನ್ನು ಒಬ್ಬರು ಒಬ್ಬರಿಗೆ ಕೊಡುವುದು ಸರಕಾರಿ ನೌಕರರಲ್ಲಿಯೂ ನಾಗರಿಕರಲ್ಲಿಯೂ ಕೆಲಸವಿರಲಿ ಇಲ್ಲದಿರಲಿ, ಅವ್ಯಾಹತವಾಗಿ ನಡೆದಿರುವದು ಅರಿತ ವಿಷಯವೇ. ಅಂದ ಮೇಲೆ ಈ ಶಿಷ್ಟಾಚಾರದಲ್ಲಿ ಕೂಡ ಲಂಚದ ರೂಪರೇಷೆ ಬರೆಯುವುದು ಅಸಮಂಜಸವಾಗಿ ಕಾಣಬಹುದಲ್ಲವೆ? ಸರಕಾರೀ ನೌಕರರು ತಮ್ಮ ನಿತ್ಯದ ಕೆಲಸಗಳಲ್ಲಿ ಸಂಪರ್ಕವಾಗುವವರೊಡನೆ ಯಾವ ತರಹದ ವ್ಯವಹಾರವನ್ನೂ ಇಟ್ಟುಕೊಳ್ಳತಕ್ಕದ್ದಲ್ಲವೆಂಬರ್ಥದ ಆಜ್ಞೆ ಹೊರಟಾಗ ಒಬ್ಬ ಪ್ರತಿಷ್ಠಿತ ನೌಕರರು "ಹಾಗಾದರೆ ನೌಕರರಿಗೆ ತಂತಮ್ಮ ಸಂಸಾರದ ವ್ಯವಹಾರಕ್ಕೆ ಮನೆಬಿಟ್ಟು ಮಾರುಕಟ್ಟೆ ಸೇರದಂತೆ ಎಲ್ಲ ತರಹದ ಸಾಹಾಯ್ಯ ಸೌಕರ್ಯವನ್ನು ಸರಕಾರವೇ ಏರ್ಪಡಿಸಿಕೊಟ್ಟು ಪಗಾರದಿಂದ ಅಷ್ಟು ಹಣ ಮುರಿದುಕೊಳ್ಳಬಾರದೇಕೆ?" ಅಂದು ಬಿಟ್ಟರು. ಈ ಮಾತು ಎಷ್ಟು ಅರ್ಥಪೂರ್ಣವಾಗಿದೆಯೋ ಹೇಳಲು ಶಕ್ಯವಿಲ್ಲ. ಆದರೆ ಲಂಚದ ಹೊಣೆಯನ್ನು ಯಾವುದಾದರೊಂದು ನಿರ್ದಿಷ್ಟವಾದ ಪಕ್ಷಕ್ಕೆ ಹೊರಿಸುವಾಗ ವಿಚಾರಮಂಥನ ಅವಶ್ಯವಿದೆ. ಸೂಳೆಗಾರಿಕೆಗೆ ಸೂಳೆಯರೇ ಕಾರಣವಲ್ಲದೇ ಅವರ ಅಜ್ಞಾನ ಬಡತನ ನಿರುದ್ಯೋಗ ಪರಿಸ್ಥಿತಿ ಗಂಡಸರ ಲಂಪಟತ್ವ ಕೂಡ ಕಾರಣವಾಗಿವೆಯೆಂದು ಎಲ್ಲರೂ ಒಪ್ಪುವ ವಿಷಯ. ಅದರಂತೇ ಲಂಚದ ವಿಷಯದಲ್ಲಿರುವ ಮೂಲ ಮಾತೆಂದರೆ ಕೆಳದರ್ಜೆಯ ನೌಕರರಲ್ಲಿ ರಕ್ತಗತವಾದ ಹೀನ ಸ್ಥಿತಿ. ಮೇಲ್ತರಗತಿಯವರಲ್ಲಿ ಮೈಯಂಡ ಶೃಂಗಾರ ಸೌಂದರ್ಯ ಸೌಕರ್ಯಗಳಿಗೆ ವ್ಯಯಿಸುವ ವ್ಯಸನ! ಒಟ್ಟಿನಲ್ಲಿ ಎಲ್ಲರೂ ಹಾಸಿಗೆ ಬಿಟ್ಟು ಕಾಲು ಚಾಚುತ್ತಿರುವ ಪ್ರಯುಕ್ತ ಕಡಿಮೆ ಬೀಳುವ ಬಂಡವಲವನ್ನು ಕೂಡಿಸುವ ಹೆಣಗಾಟ ನಡೆದಿದೆ. ಇಂತಹ ದುಃಸ್ಥಿತಿಯಲ್ಲಿ ತನ್ನ ಕೆಲಸ ಸಾಧಿಸಿಕೊಳ್ಳುವವನು ಅಪ್ರಾಮಾಣಿಕ ಸ್ಥಿತಿಯಲ್ಲಿ ಮಾಯದ ಬಲೆ ಬೀಸಿದರೆ ಮುಗಿಯಿತು; ಮರುಕ್ಷಣದಲ್ಲಿಯೇ ಬೇಟೆ ಕರತಲಾಮಲಕವಾಗುತ್ತದೆ. ಜನತಾ ಸೇವೆಗೆ ಆರಿಸಿ ಬಂದ ಸರಕಾರೀ ನೌಕರರ ತಂಡವೊಂದು ಸುಜ್ಞಾನಿಗಳ ತಂಡವೆಂದು ನಮ್ಮ ಮಹೋರಾಜ್ಯದಲ್ಲಿ ನಾವು ಸಿದ್ಧಾಂತ ಮಾಡಿದರೂ ಅವರು ಪ್ರಾಮಾಣಿಕತನದಲ್ಲಿಯೆ ಆ ಕೆಲಸಕ್ಕೆ ಬಂದರು-ಆ ಹುದ್ದೆಗೆ ಏರಿದರು ಎಂದು ಹೇಳಲು ಶಕ್ಯವುಂಟೇ? ಸತ್ಯನಿಷ್ಠೆ, ಪ್ರಾಮಾಣಿಕತನ, ಸೇವಾತತ್ಪರತೆ ಇವುಗಳ ಹೆಸರಿನಲ್ಲಿ-ಥಳಕಿನಲ್ಲಿ ಎಲ್ಲ ವ್ಯವಹಾರಗಳ ಕೈಚಳಕ ನಡೆದಿರುವಾಗ ಮೇಲಿನ ಸದ್ಗುಣಗಳು ನಾಗರಿಕರಲ್ಲಿಯೂ ಮತ್ತು ನೌಕರರಲ್ಲಿಯೂ ಮೈಯಂಡ ಹೊರತೂ ಏನೂ ಶಕ್ಯವಿಲ್ಲ. ಸರಕಾರೀ ನೌಕರರಲ್ಲಿ ಅಪ್ರಾಮಾಣಿಕರಿರುವಂತೆ ನಾಗರಿಕರಲ್ಲಿಯೂ ಇದ್ದಾರೆ. ಅದರಿಂದಲೇ ಲಂಚಗುಳಿತನವನ್ನು ಹತ್ತಿಕ್ಕಲು ಎಷ್ಟೇ ಪ್ರಯತ್ನಪಟ್ಟರೂ ಅದು ಬೃಹದಾಕಾರ ತಾಳುತ್ತಿದೆ. ಸೂಳೆ-ಕಾಮುಕ ಇಬ್ಬರೂ ಸೂಳೆಗಾರಿಕೆಯ ಒಳಮೈ ಹೊರಮೈಗಳಾಗಿರುವಂತೆ ಲಂಚ ಕೊಡತಗೊಳ್ಳುವ ಕಾರಸ್ಥಾನದಲ್ಲಿ ನೌಕರ-ನಾಗರಿಕರಿಬ್ಬರೂ ಸರಿಸಮ ಜವಾಬ್ದಾರರು; ಸಮಭಾಗಿಗಳು. ಒಬ್ಬರ ಅಸಮ್ಮತಿಯಲ್ಲಿ ಮತ್ತೊಬ್ಬರ ಕಾರ್ಯ ಸಾಧಿಸದು. ಇಬ್ಬರ ಸಮ್ಮತಿಯೇ ಈ ಲಂಚಕ್ಕೆ ಪುಟಕೊಡುವ ಮಾಯದ ರಸವಾದುದರಿಂದ ಲಂಚದ ಹೊಣೆ ಸರಿಸಮ ಹಂಚಿಹೋಗಬೇಕು.

ಕಾರವಾರ,
೧-೮-೪೯ -ಉಪೇಂದ್ರ ನಾಯಕ.

ಶಿಕ್ಷಕರ ಹಕ್ಕು ಮತ್ತು ಕರ್ತವ್ಯ

ವರ್ಧಾದಲ್ಲಿಯ ಸೆಕ್ಸೇರಿಯ ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎಸ್. ಎನ್ ಅಗರ್ವಾಲರು ಉಪಾಧ್ಯಾಯರ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಒಂದು ಕರಡು ಗೊತ್ತುವಳಿಯನ್ನು ತಯಾರಿಸಿ ಜಿನೀವಾದಲ್ಲಿ ಕೂಡಲಿರುವ ಜಾಗತಿಕ ಶೈಕ್ಷಣಿಕ ಕಾಂಗ್ರೆಸ್ಸಿಗೆ ಕಳಿಸಲಾಗಿ ಅದು ಪಾಸಾಯಿತು. ನಾಳಿನ ಅಕ್ಟೋಬರದಲ್ಲಿ ಅದರ ಆಧಾರದ ಮೇಲೆ ಕಾಂಗ್ರೆಸ್ಸು ಶಿಕ್ಷಕರ ಹಕ್ಕು ಮತ್ತು ಕರ್ತವ್ಯಗಳ ಒಂದು ತಾವ್ರಪಟವನ್ನು ಸಿದ್ಧಗೊಳಿಸುವುದೆಂದು ತಿಳಿಯುತ್ತದೆ. ಪರಿಷತ್ತಿಗೆ ಜಗತ್ತಿನ ೩೨ ರಾಷ್ಟ್ರಗಳ ಪ್ರತಿನಿಧಿಗಳು ಹೋಗಿದ್ದರು.

ಈ ಸಂದರ್ಭದಲ್ಲಿ ಜಿನೀವಾದಲ್ಲಿ ಮಾಡಿದ ಒಂದು ಭಾಷಣದಲ್ಲಿ ಶ್ರೀ ಅಗರವಾಲರು, "ಶಿಕ್ಷಕನು Architect of a nation ರಾಷ್ಟ್ರ ರಚನಾ ಶಿಲ್ಪಿಗಳು, ಎಂದು ಮುಂತಾಗಿ ಹೇಳಿ ಶಿಕ್ಷಕರಿಗೆ ಕೇವಲ ಸಂಬಳ ಹೆಚ್ಚಿಗೆ ಕೊಟ್ಟರೆ ಶಿಕ್ಷಕ ವೃತ್ತಿಯ ಮಟ್ಟ ಏರದು, ಗುಣ ನಡತೆ ನೀತಿ ಪ್ರಭಾವಗಳು ಹೆಚ್ಚಬೇಕು. ರಾಜಕೀಯ ವಿಚಾರಗಳಲ್ಲಿ ಶಿಕ್ಷಕರು ಒಂದು ಬಗೆಯ ಧಾರ್ಮಿಕ ನಿಷ್ಠೆಯಿಂದ ತಟಸ್ಥರಿರಬೇಕು; ಪಕ್ಷದ ರಾಜಕಾರಣದಲ್ಲಿ ಭಾಗವಹಿಸಬಾರದು. ಕಮ್ಯುನಿಜಮ್ಮನ್ನು ಪ್ರಸರಿಸದಂತೆ ತಡೆದು ನಿಲ್ಲಿಸಲು ಬಲಿಷ್ಠ ಸೈನ್ಯವಿಡುವುದು ಯೋಗ್ಯ ಉಪಾಯವಲ್ಲ. ಅದಕ್ಕಿಂತ ಹೆಚ್ಚಾಗಿ ಸ್ವತಂತ್ರವಾಗಿ ವಿಚಾರ ಮಾಡುವ ಮತ್ತು ವಿವೇಕದಿಂದ ವರ್ತಿಸುವ ಬುದ್ಧಿಯನ್ನು ತರುಣರಲ್ಲಿ ಬೆಳೆಯಿಸಬಲ್ಲ ಶಿಕ್ಷಕರ ಕೈಗೆ ಮುಂದಿನ ಜನಾಂಗವನ್ನು ಒಪ್ಪಿಸುವದೇ ಯೋಗ್ಯ ಉಪಾಯವಾಗಿದೆ" ಎಂದು ಅಭಿಪ್ರಾಯಪಟ್ಟರು. ಅಲ್ಲದೆ, ಶಿಕ್ಷಕರ ಹಕ್ಕುಗಳನ್ನು ಒತ್ತಿ ಹೇಳುವಾಗಲೇ ಅವರ ಕರ್ತವ್ಯವನ್ನು ಒತ್ತಿ ಹೇಳಬೇಕು ಎಂದೂ ಸರಕಾರವು ಅವರ "ಭೌತಿಕ ಅಸ್ತಿತ್ವಕ್ಕೆ ಅವಶ್ಯವಿರುವ ಮೌಲಿಕ ಕನಿಷ್ಠಾವಧಿಯ ಅರ್ಥಶಕ್ತಿ" ಇರುವಂತೆ ನೋಡಿಕೊಳ್ಳಬೇಕು ಎಂದೂ ಅವರು ಹೇಳಿದರು.

ಗುರುಕುಲವಾಸ ಮತ್ತು ಶೀಲಃಪೋಷಣೆ

ಶಿಕ್ಷಣದ ಬಗ್ಗೆ ಬರುವ ಇಂಥ ಸಲಹೆಗಳಾದರೂ ಆಹಾರಾದಿಗಳ ಬಗ್ಗೆ ಬರುವ ಸಲಹೆಗಳಂತೆಯೇ ವ್ಯವಹಾರದಲ್ಲಿ ಬರದೆ ಕೇವಲ ಚರ್ಚೆ ಉಪನ್ಯಾಸಗಳಲ್ಲಿ ಉಳಿಯುವ ಸಂಭವವೇ ಹೆಚ್ಚಾಗಿದೆ, ಅಲ್ಲದೆ ಸ್ವತಃ ಶಿಕ್ಷಣಜ್ಞರೆನಿಸಿಕೊಂಬವರಿಗೇ ಇಂದಿನ ಪಾಶ್ಚಾತ್ಯ ಶಿಕ್ಷಣ ಪದ್ಧತಿ ನ್ಯೂನವೆಂದು ಗೊತ್ತಿದ್ದರೂ ಸುಧಾರಿಸಲು ಮನಸ್ಸು ಬರುತ್ತಿಲ್ಲ; ಪ್ರಾಚೀನ ಪದ್ಧತಿಯ ಬಗ್ಗೆ ಪುರಸ್ಕಾರವಿದ್ದರೂ ಅದನ್ನು ಅಭ್ಯಸಿಸಿ ಅದರಲ್ಲಿಯ ಉತ್ತಮಾಂಶಗಳನ್ನು ಅಳವಡಿಸಿಕೊಳ್ಳುವ ಧೈರ್ಯವಿಲ್ಲ ಮತ್ತು ಭೂರಿ ಶಿಕ್ಷಣ (Mass Education) ಮತ್ತು ವಿಶೇಷಜ್ಞತೆಯ ಶಿಕ್ಷಣಗಳ ರೀತಿ ನೀತಿ, ಸ್ಥಾನ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಅವರಿಗೆ ಸರಿಯಾದ ಕಲ್ಪನೆಯಿಲ್ಲ. ಪೂರ್ವಕಾಲದಲ್ಲಿ ಶಿಕ್ಷಕರಿಗೆ ಸಂಬಳವಿದ್ದಿಲ್ಲ. ದಕ್ಷಿಣೆ, ಉಡುಗೊರೆ ಉತ್ತಾರ, ದಾನದತ್ತಿ ಮುಂತಾದ ದೀರ್ಘಕಾಲಿಕ ವ್ಯವಸ್ಥೆಯಿತ್ತು. ವಿದ್ಯಾರ್ಥಿಗಳು ಸದ್ಗುರುವನು ಆರಿಸಿ ಅವರ ಮೇಲೆ ತಮ್ಮ ಎಲ್ಲ ಹೊಣೆಯನ್ನು ಹಾಕಿ ವಿಧೇಯರಾಗುತಿದ್ದರು. ಅದೇ ಅವರ ಶೀಲಪೋಷಣೆಗೆ (Character) ಕಾರಣವಾಯಿತು, ವಿಶೇಷಜ್ಞತೆಗೆ ಅವಕಾಶವಿತ್ತು. ಆ ಗುರುಕುಲವಾಸ ಪದ್ಧತಿಯಲ್ಲಿ ಶಿಕ್ಷಕನಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು; ಅನ್ನದ ಚಿಂತೆಯಿದ್ದಿಲ್ಲ. ದುಡ್ಡಿನಿಂದ ಲಭ್ಯನಾಗುವ ಊಟ, ವಸತಿ, ವಸ್ತ್ರ ಅವನಿಗೆ ಉಚಿತ ಸಿಕ್ಕುತ್ತಿದ್ದವು. ಹೊಟ್ಟೆಯ ಚಿಂತೆ ಬಿಡಬಲ್ಲವನೊಬ್ಬನೇ ಆದರ್ಶ ಸಮಾಜ ಸೇವಕನಾಗಬಲ್ಲ; ಅರ್ಜನಪರನೆಂದೂ ನೂರಕ್ಕೆ ನೂರು ಪ್ರಾಮಾಣಿಕತೆಯಿಂದ ಶಿಕ್ಷಣದಾನದಂತಹ ಮಹತ್ವದ ಸಮಾಜ ಸೇವೆಯನ್ನುಮಾಡಲಾರ. ಸದ್ಗುರುವೆಂದೂ ಐಶ್ವರ್ಯದ ವೈಲಾಸಿಕ ಜೀವನವನ್ನು ಬಯಸಲಾರ. ಆದರೆ ತನ್ನ ಕುಟುಂಬವನ್ನು ಸ್ವಪ್ರಯತ್ನವಿಲ್ಲದೆ ನಾಗರಿಕ ಮರ್ಯಾದೆಯ ಕನಿಷ್ಠಾವಧಿ ಜೀವನೋಪಕರಣಗಳನ್ನು ಪಡೆದು ಪೋಷಿಸಲು ಶಕ್ತನಿರಬೇಕು. ಆ ರೀತಿ ಸರಕಾರವಾಗಲಿ, ಸಾಮಾಜಿಕ ಮುಖಂಡರಾಗಲಿ ಅವನಿಗೆ ವ್ಯವಸ್ಥೆ ಮಾಡಿಕೊಡುವುದು ಅತ್ಯವಶ್ಯ.

ಭೂರಿ ಶಿಕ್ಷಣದ ಮಿತಿ

ಇದು ವಿಶೇಷಜ್ಞತೆಯ ವಿದ್ಯಾಭ್ಯಾಸದ ಮಾತಾಯಿತು. ಭೂರಿ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳಲ್ಲಿ ವಿಶೇಷಜ್ಞತೆ ಮತ್ತು ಶೀಲವಂತಿಕೆಯನ್ನು ರೂಢಿಸಲು ಶಕ್ಯವಿಲ್ಲ; ಅದನ್ನು ಅಲ್ಲಿ ಬಯಸುವುದೇ ತಪ್ಪು. ಶಿಕ್ಷಕನ ಸ್ಥಿತಿಗತಿ ಗುಣಜ್ಞಾನಗಳಾದರೂ ಅಷ್ಟಕ್ಕಷ್ಟೆ. ಓದುವುದು ಬರೆಯುವದು, ಲೆಕ್ಕ ಈ ಮೂರೇ ಭೂರಿಶಿಕ್ಷಣದಲ್ಲಿ ಮುಖ್ಯವಿರತಕ್ಕದ್ದು. ಬಾಕಿ ನೀತಿ ನಡತೆ, ಆಚಾರಗಳೆಲ್ಲ ಸಾಮಾನ್ಯ ಉಪನ್ಯಾಸಗಳ ಶ್ರವಣದಿಂದ ತಕ್ಕಮಟ್ಟಿಗೆ ದೊರಕಿದರೆ ಸಾಕು. ಈ ಮಾರ್ಗವನ್ನು ಬಿಟ್ಟು ಭೂರಿಶಿಕ್ಷಣವನ್ನು ವಿಸ್ತರಿಸಹೋದರೆ ಉದ್ದೇಶಹಾನಿಯಾಗದೆ ಹೋಗದು, ವ್ಯರ್ಥ ಪ್ರಯತ್ನವಾಗದಿರದು, ಪರಿಣಾಮ ಶೂನ್ಯವಾಗದೆ ಉಳಿಯದು. ಶಾಲೆಗಳಿಗೂ ಕಾಲೇಜು ವಿಶ್ವವಿದ್ಯಾನಿಲಯಗಳಿಗೂ ತಳಿಕೆ ಹಾಕುವ ಇಂದಿನ ಪದ್ಧತಿಯಲ್ಲಾಗಿರುವಂತೆ ಎಲ್ಲಿಂದಲೂ ನಮಗೆ ನಿರ್ದಿಷ್ಟ ವರ್ಗದ ಜ್ಞಾನ ಗುಣಶೀಲಗಳ ನಿಶ್ಚಿತ ಮಟ್ಟವನ್ನು ಮುಟ್ಟಿದ ವಿದ್ಯಾರ್ಥಿಗಳು ಹೊರಬೀಳುವಂತೆಮಾಡುವದು ಸಾಧ್ಯವಾಗಲಾರದು. ಪಾಶ್ಚಾತ್ಯ ಪೌರಸ್ತ್ಯ ಪದ್ಧತಿಗಳ, ಶಿಕ್ಷಣ ರೂಢಿಗಳ ಮತ್ತು ವಿಷಯಗಳ ದುರ್ಯೋಗದಿಂದ ಇಂದಾಗುತ್ತಿರುವ ಧನ, ಶಕ್ತಿ, ಕಾಲಗಳ ಅಪವ್ಯಯ ಅಷ್ಟಿಷ್ಟಲ್ಲ. ತತ್ವ ಮತ್ತು ಆಚಾರಗಳಲ್ಲಿ, ಕಲಿಯುವುದು ಮತ್ತು ವ್ಯವಹಾರಗಳಲ್ಲಿ ಹೊಂದಿಕೆಯಿಲ್ಲದಂತಾಗಿ ವಿದ್ಯಾದಾನ ವಿದ್ಯಾವಂತಿಕೆಗಳೆಂದು ಕೇವಲ ಪ್ರಹಸನಗಳಾಗಿರುವುದನ್ನು ತಪ್ಪಿಸಬೇಕಾದರೆ ಮೇಲೆ ಹೇಳಿದಂತೆ ಶಿಕ್ಷಣದ ಕಲನೆಯಲ್ಲಿ ನಿರ್ದಿಷ್ಟ ವರ್ಗೀಕರಣವಾಗಬೇಕು, ವ್ಯವಸ್ಥೆಯಾಗಬೇಕು.

—ವಿದ್ಯಾಧರ

ಭಾರತದ ಸಶಸ್ತ್ರ ಬಲಗಳು

ನೆಲ, ಜಲ, ಆಕಾಶ ಪಡೆಗಳ ಪುನರ್ಘಟನೆ
ಕಾಶ್ಮೀರದ ಅಪ್ರತಿಮ ಸಾಹಸ

ಸುರಕ್ಷಿತತೆಯೇ ಎಲ್ಲ ಪ್ರಗತಿಯ ಮೂಲಾಧಾರ. ನಮ್ಮ ರಾಷ್ಟ್ರ ಅಹಿಂಸೆಯಲ್ಲಿಯೇ ನಂಬಿಕೆಯನ್ನಿಟ್ಟಿರುವದಾದರೂ ಆ ತತ್ವದಲ್ಲಿ ವಿಶ್ವಾಸವಿಲ್ಲದ, ಮತ್ತು ಅಹಿಂಸೆಯಲ್ಲಿ ಅಡಕವಾಗಿರುವ ಸಾತ್ವಿಕ ತೇಜಸ್ಸನ್ನು ಮನವರಿಯುವಷ್ಟು ಮಟ್ಟಿಗೆ ನೈತಿಕ ಉನ್ನತಿಗೆ ಇನ್ನೂ ಏರದ ಜಗತ್ತಿನಲ್ಲಿ ನಾವಿರಬೇಕಾದ ಕಾರಣ ನಮ್ಮ ಸುರಕ್ಷಿತತೆಗಾಗಿ ಸಾಂಪ್ರದಾಯಿಕ ಸಾಧನವಾದ ಸಶಸ್ತ್ರಬಲಗಳನ್ನೇ ಅವಲಂಬಿಸಬೇಕಾಗಿದೆ. ನಮ್ಮ ಸಶಸ್ತ್ರಬಲಗಳ ಸ್ಥಿತಿಹೇಗಿದೆ? ನಾನಾ ಪ್ರಕಾರದ ಸಮಸ್ಯೆಗಳಲ್ಲಿ ವ್ಯಸ್ತರಾದ ನಮಗೆ ಇತ್ತ ಲಕ್ಷ್ಯಕೊಡಲು ಸಾಧ್ಯವಾಗಿದೆಯೇ? ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುವವು. ಕಳೆದ ಒಂದು ವರ್ಷದಿಂದ ನಮ್ಮ ಭೂ-ಜಲಾಕಾಶ ಸೈನ್ಯಗಳಲ್ಲಿ ಆದ ಪ್ರಗತಿಯನ್ನು ಇಲ್ಲಿ ಸ್ಥೂಲವಾಗಿ ಅವಲೋಕಿಸಲಾಗುವದು.

ಭಾರತದ ವಿಭಜನೆಯೊಡನೆ ಸಶಸ್ತ್ರ ಬಲಗಳೂ ಉಭಯ ರಾಷ್ಟ್ರಗಳಲ್ಲಿ ಹಂಚಿ ಹೋದುದರಿಂದ ಅವನ್ನು ತಿರುಗಿ ವ್ಯವಸ್ಥಿತಗೊಳಿಸಲು ಕೆಲಕಾಲ ಹಿಡಿಯುವದು ಸ್ವಾಭಾವಿಕವಾಗಿತ್ತು. ಇದಲ್ಲದೆ ಸ್ವಾತಂತ್ರ್ಯದ ನಂತರ ಕೆಲತಿಂಗಳಲ್ಲೇ ಕಾಶ್ಮೀರವನ್ನು ನರರಾಕ್ಷಸರ ಆಕ್ರಮಣದಿಂದ ಉಳಿಸಲು ನಮ್ಮ ಭೂವಾಯುಪಡೆಗಳು ಅತ್ತ ಧಾವಿಸಬೇಕಾಯಿತು. ೧೯೪೮ ರಲ್ಲಿ ಹೈದರಾಬಾದದಲ್ಲಿ ಶಾಂತಿ ಸ್ಥಾಪನೆಯ ಹೊಣೆಯೂ ಅದಕ್ಕೆ ಗಂಟುಬಿತ್ತು.

ತರಬೇತಿಯ ವ್ಯವಸ್ಥೆಗಳು

ಹೀಗೆ ಸಶಸ್ತ್ರ ಬಲಗಳ ಲಕ್ಷ್ಯ ಅತ್ತಿತ್ತ ಹರಿಯಬೇಕಾಗಿ ಬಂದರೂ ಅವುಗಳ ಪುನರ್ಘಟನೆಯ ಕಾರ್ಯ ಒಂದೆಡೆ ಒತ್ತರದಿಂದಸಾಗಿತ್ತು. ಇದಕ್ಕಾಗಿ ಮೊದಲು ಅನೇಕ ಸಮಿತಿಗಳನ್ನು ರಚಿಸಲಾಯಿತು. ಅವುಗಳಲ್ಲಿ ಮಂತ್ರಿಮಂಡಲದ ಸಂರಕ್ಷಣ ಸಮಿತಿ, ಸೇನಾಸಿಬಂದಿಯ ಮುಖ್ಯಸ್ಥರ ಸಮಿತಿಗಳು ಉಲ್ಲೇಖಾರ್ಹವಾಗಿವೆ. ಅಂದಿನಿಂದೀಚೆಗೆ ಭೂ-ಜಲ-ಆಕಾಶ ಪಡೆಗಳನ್ನು ಬೇರೆಬೇರೆಯಾಗಿ ಪುನರ್ಘಟಿಸಿ ಬಲಗೊಳಿಸಲಾಗಿದೆ. ಸೈನ್ಯದ ಹಿಂದೀಕರಣವೂ ಭರದಿಂದ ಮುಂದುವರಿದಿದೆ. ಜನರಲ್ ಕೆ. ಎಂ. ಕಾರ್ಯಪ್ಪನವರು ಭೂಪಡೆಗಳ ಮುಖ್ಯ ಸೇನಾಪತಿಗಳಾಗಿ ನೇಮಿಸಲ್ಪಟ್ಟಿದ್ದಾರೆ.

ಸೈನ್ಯದ ಕಾರ್ಯನೈಪುಣ್ಯದಲ್ಲಿ ತರಬೇತಿಗೇ ಮುಖ್ಯ ಸ್ಥಾನ. ಅದಕ್ಕಾಗಿ ಮೊನ್ನೆ ಜನವರಿಯಲ್ಲಿ ದೇಹರಾಡೂನದಲ್ಲಿ ಸಶಸ್ತ್ರ ಬಲಗಳ ವಿದ್ಯಾಲಯ ಪ್ರಾರಂಭಿಸಲ್ಪಟ್ಟಿತು. ಅದರಲ್ಲಿ ಮಿಲಿಟರಿ ವಿಭಾಗವೊಂದು ಮತ್ತು ಭೂಜಲಾಕಾಶ ಬಲಗಳಲ್ಲಿ ಸಂಬಂಧ ಕಲ್ಪಿಸುವ ಅನ್ಯೋನ್ಯ ವಿಭಾಗವೊಂದು, ಹೀಗೆ ಎರಡು ಶಾಖೆಗಳಿವೆ. ಬೀಜರೂಪವಾಗಿರುವ ಈ ಸಂಸ್ಥೆಯನ್ನೆ ಬೆಳೆಸಿ, ಪುಣೆಯ ಸಮೀಪದಲ್ಲಿರುವ ಖಾರಕವಾಸಲದಲ್ಲಿ ೫.೮೭ ಕೋಟಿ ವೆಚ್ಚದಿಂದ ಮೂರೂ ಅಂಗಗಳಲ್ಲಿ ಸೇನಾಧಿಕಾರಿಗಳಿಗೆಶಿಕ್ಷಣಕೊಡಲು ರಾಷ್ಟ್ರೀಯ ಯುದ್ಧ ವಿದ್ಯಾಲಯ ಸ್ಥಾಪಿಸಲ್ಪಡುವದು. ಇದನ್ನು ಕಟ್ಟುವ ಕೆಲಸ ಇನ್ನೈದು ವರ್ಷಗಳಲ್ಲಿ ಮುಗಿಯುವಂತೆ ಇದೇ ವರ್ಷ ಮಳೆಗಾಲ ಮುಗಿದೊಡನೆ ಪ್ರಾರಂಭವಾಗುವದು. ಸಂರಕ್ಷಣ ಮಂತ್ರಿ ಸರದಾರ ಬಲದೇವ ಸಿಂಗರು ಮೊನ್ನೆ ಜೂನ್ ತಿಂಗಳಲ್ಲಿ ಖಾರಕವಾಸಲದಲ್ಲಿ ಇದರ ಮೇಲ್ವಿಚಾರಕ ಮಂಡಲದ ಸಭೆ ಕರೆದು ಅಲ್ಲಿ ಕಟ್ಟಲ್ಪಡುವ ವಸತಿಗಳ ಯೋಜನೆಗಳನ್ನು ಪರಿಶೀಲಿಸಿದರು.

ವಿಜ್ಞಾನಿಗಳ ಸಹಾಯ

ಆಧುನಿಕ ಯುದ್ಧ ಕಲೆಯಲ್ಲಿ ವೈಜ್ಞಾನಿಕ ಸಂಶೋಧನೆಗಳಿಗಿರುವ ಮಹತ್ವವನ್ನು ಸಂರಕ್ಷಣ ಮಂತ್ರಿಖಾತೆ ಕಡೆಗಣಿಸಿಲ್ಲ. ಅದಕ್ಕಾಗಿ ಸಂರಕ್ಷಣ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸುವ ಸಂಕಲ್ಪ ಮಾಡಿದ್ದು, ಅದಕ್ಕೆ ಪೂರ್ವಭಾವಿಯಾಗಿ ಒಬ್ಬ ವಿಜ್ಞಾನ ಸಲಹೆಗಾರರನ್ನೂ ಮೂವರು ಪ್ರಮುಖ ವಿಜ್ಞಾನಿಗಳನ್ನೊಳಗೊಂಡ ಒಂದು ಧೋರಣ ಸಮಿತಿಯನ್ನೂ ನೇಮಿಸಲಾಗಿದೆ. ಒಂದು ವರ್ಷದೊಳಗೆ ೪೦ ಹಿರಿಯ ಮತ್ತು ೧೦೦ ಕಿರಿಯ ವಿಜ್ಞಾನಿಗಳ ಸಹಾಯವನ್ನಾದರೂ ದೊರಕಿಸಿಕೊಳ್ಳಬಹುದೆಂಬ ಆಶೆಯಿದೆ.

ವಿದ್ಯಾರ್ಥಿದಲ

ಸುಶಿಕ್ಷಿತ ಯುವಕರಲ್ಲಿ ದೇಶರಕ್ಷಣೆಯ ಆಸ್ಥೆಯನ್ನುಂಟುಮಾಡಲು ರಾಷ್ಟ್ರೀಯ ಯುದ್ಧವಿದ್ಯಾರ್ಥಿ ದಲವನ್ನು ಸ್ಥಾಪಿಸಲಾಗಿದೆ. ಎಲ್ಲ ಪ್ರಾಂತಗಳಿಂದಲೂ ಆರಿಸಲ್ಪಟ್ಟ ಈ ದಲವನ್ನು ಕಾಲೇಜು ವಿದ್ಯಾರ್ಥಿಗಳಿಗಾಗಿ ಹಿರಿಯವಿಭಾಗ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ಕಿರಿಯ ವಿಭಾಗವೆಂದು ವಿಂಗಡಿಸಲಾಗಿದೆ.

ಗಂಡಾಂತರ ಪ್ರಸಂಗದಲ್ಲಿ ಹೆಣ್ಣುಮಕ್ಕಳೂ ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ಕೈಗೊಡುವಂತಾಗಲೆಂದು ಅವರಲ್ಲಿ ವ್ಯಕ್ತಿತ್ವ ಶಿಸ್ತುಗಳನ್ನು ಸಂಘಟಿಸಲು ಮೇಲಿನ ದಲದಲ್ಲಿ ಸ್ತ್ರೀ ವಿಭಾಗವನ್ನೂ ಸಿದ್ಧಗೊಳಿಸುವ ಏರ್ಪಾಡಾಗಿದೆ. ಪೂರ್ವ ಪಂಜಾಬ, ಮಧ್ಯಪ್ರಾಂತ ಮತ್ತು ಪಶ್ಚಿಮ ಬಂಗಾಲ ಪ್ರಾಂತಗಳಿಂದ ಈಗಾಗಲೆ ದಿಲ್ಲಿಯಲ್ಲಿ ಒಂಭತ್ತು ಸ್ತ್ರೀ-ಪ್ರೊಫೆಸರರು ಈ ಬಗ್ಗೆ ತರಬೇತಿ ಹೊಂದಿ, ಆಯಾ ಪ್ರಾಂತದಲ್ಲಿ ೯೦-೯೦ ಸ್ತ್ರೀ ವಿದ್ಯಾರ್ಥಿಗಳನ್ನು ಪ್ರಥಮತಃ ತರಬೇತಿ ಮಾಡುವರು.

ವಿದ್ಯಾರ್ಥಿ ದಲ ಯೋಜನೆಯನ್ವಯ ಈ ವರ್ಷ ಕಾಲೇಜುಗಳಲ್ಲಿ ೨೫,೦೦೦ ಹೈಸ್ಕೂಲುಗಳಲ್ಲಿ ೫೦,೦೦೦ ತರುಣರು ತರಬೇತಿ ಹೊಂದಿದ್ದಾರೆ. ವಿಮಾನ ಮತ್ತು ನೌಕಾ ಶಿಕ್ಷಣದ ಏರ್ಪಾಡೂ ಬೇಗನೆ ಆಗಲಿದೆ.

ಪ್ರಾದೇಶಿಕ ಸೈನ್ಯ

ಯುದ್ಧ ಪ್ರಸಂಗದಲ್ಲಿ ದೇಶದ ಅಂತರಿಕ ರಕ್ಷಣೆ, ವಿಮಾನದಾಳಿ ನಿರೋಧಕ ವ್ಯವಸ್ಥೆ ಮೊದಲಾದ ಕಾರ್ಯಗಳನ್ನು ಸ್ಥಾಯೀ ಸೈನ್ಯದಿಂದ ಕೆಲ ಮಟ್ಟಿಗೆ ಅಥವಾ ಪೂರ್ತಿಯಾಗಿ ವಹಿಸಿಕೊಳ್ಳುವ ಒಂದು ಸಂಸ್ಥೆ ಅಪೇಕ್ಷಣೀಯವಾಗಿದೆ. ಇದಕ್ಕಾಗಿ ಪ್ರಾದೇಶಿಕ ಸೈನ್ಯವನ್ನು ಎತ್ತುವ ವ್ಯವಸ್ಥೆ ಪ್ರಾರಂಭವಾಗಿದೆ. ಇದು ಶುದ್ಧ ಸ್ವಯಂಸೇವಕ ಬಲವೇ ಆಗಿದ್ದರೂ ಸೈನ್ಯದ ಶಾಖೆಗಳಲ್ಲೊಂದೋ ಅಂತೆಯೆ ಇಲ್ಲಿಯೂ ಸರ್ವವಿಧದ ತರಬೇತಿ ಕೊಡಲಾಗುವದು. ಈ ಪರಿಯಾಗಿ ೧,೩೦,೦೦೦ ಪ್ರಾದೇಶಿಕ ಸೈನ್ಯವನ್ನು ಸಿದ್ಧಗೊಳಿಸಬೇಕೆಂದಿದೆ. ಇದು ಎಲ್ಲ ದೃಢಕಾಯ ನಾಗರಿಕರಿಗೂ ಮುಕ್ತವಾಗಿದೆ.

ಸಂರಕ್ಷಣಾಂಗಗಳ ಬೆನ್ನೆಲುಬಾದ ಭೂಸೈನ್ಯವಂತೂ ಕುಶಲ ಸಮರಬಲವಾಗಿ ರಭಸದಿಂದ ರೂಪುಗೊಳ್ಳುತ್ತಿದೆ. ಅದರ ಹಿಂದೀಕರಣವಾದರೂ ಪೂರ್ತಿಯಾದಂತೆಯೆ ಆಗಿದೆ. ಸಲಹೆಗಾರರೆಂದಲ್ಲದೆ ಯಾವ ವಿದೇಶೀಯರೂ ಇಂದು ಸೈನ್ಯದಲ್ಲಿ ಅಧಿಕಾರಸ್ಥಾನದಲ್ಲಿಲ್ಲ.

ಹಿಂದೀ ಸೈನ್ಯ ನಡೆಸುತ್ತಿರುವ ಒಂದು ಸಾಮಾಜಿಕ ಚಟುವಟಿಕೆಯೆಂದರೆ ನಾಗರಿಕರಲ್ಲಿ ಶಿಸ್ತು ಸಂಘಟನೆಗಳನ್ನುಂಟುಮಾಡುವದಕ್ಕೋಸ್ಕರ ನಾಗರಿಕರಿಗೆ ಸರಳ ಸೈನ್ಯಶಿಕ್ಷಣ ಕೊಡುವದು. ದಿಲ್ಲಿ, ಲಖನೋ, ಝಾನ್ಸಿ, ಜಲಂಧರ, ಅಂಬಾಲ, ಅಮೃತಸರ, ಕಲಕತ್ತೆ ಮದರಾಸ, ಬೆಂಗಳೂರು, ಕೊಯಮುತ್ತೂರ, ಪುಣೆ ಮತ್ತು ಅಹಮದಾಬಾದಗಳಲ್ಲಿ ಈಗಾಗಲೆ ಈ ಬಗೆಯ ಕವಾಯತ್ತುಗಳು ಪ್ರಾರಂಭಿಸಲ್ಪಟ್ಟವೆ. ೧೫-೨೦ ಯುವಕರ ಒಂದೊಂದು ಗುಂಪು ಮಾಡಿ ಪ್ರತಿ ಬಾರಿಗೆ ೧೦ ನಿಮಿಷಗಳ ಅಂಗಸಾಧನೆ, ೨೦ ನಿಮಿಷಗಳ ಬಂದೂಕಿಲ್ಲದ ಸ್ಕ್ವಾಡ್ ಶಿಕ್ಷಣದ, ೨೦ ಮಿನಿಟುಗಳ ಆರೋಗ್ಯ ಶಿಕ್ಷಣಗಳಂತೆ ಆರು ಕವಾಯತ್ತುಗಳನ್ನು ನಡೆಸಲಾಗುವದು. ಪ್ರತಿ ಗುಂಪೂ ಒಬ್ಬ ಅನಧಿನಿಯುಕ್ತ (non-commissioned) ಸೈನ್ಯಾಧಿಕಾರಿಯ ಅಂಕಿತಕ್ಕೊಳಪಟ್ಟದ್ದು ಪ್ರತಿನಾಲ್ಕು ಗುಂಪುಗಳಿಗೆ ಒಬ್ಬ ಕಿರಿ ಅಧಿನಿಯುಕ್ತ ಅಧಿಕಾರಿಯಿದ್ದಾನೆ. ಇದರಿಂದ ಯುವಕರಲ್ಲಿ ನಾಗರಿಕತ್ವದ ಹೊಣೆಯ ಅರಿವು ಹೆಚ್ಚುವದೆಂದು ಆಶಿಸಲಾಗಿದೆ.

ನೌಕಾಪಡೆಯ ವಿಸ್ತಾರ

ದೀರ್ಘವಾದ ಕಡಲ ಕರೆಯುಳ್ಳ ಈ ದೇಶದ ರಕ್ಷಣೆಯಲ್ಲಿ ನೌಕಾಬಲಕ್ಕಿರುವ ಹಿರಿಮೆ ಅಷ್ಟಿಷ್ಟಲ್ಲ. ಅದರೆ ಮೊದಲೇ ದುರ್ಬಲ

-೧೦ನೆಯ ಪುಟಕ್ಕೆ

ಸಮಸ್ತ ಭಾರತ

ಮುಂಬಯಿ

ಡಾ. ಜೀವರಾಜಮೆಹ್ತಾ ಮತ್ತು ಫಲ್ಟಣದ ಮಾಲೋಜಿರಾವ್ ನಿಂಬಾಳಕರರು ಸ್ವೀಕರಿಸಿದರು. ಡಾ. ಮೆಹ್ತಾ ಸಾರ್ವಜನಿಕ ಆರೋಗ್ಯದ ಖಾತೆಯನ್ನೂ ಶ್ರೀ ನಿಂಬಾಳಕರರು ಉದ್ಯಮ ಖಾತೆಯನ್ನೂ ವಹಿಸಿಕೊಂಡಿದ್ದಾರೆ.

ಭಾರತದ ಅನೇಕ ಭಾಗಗಳಲ್ಲಿ ಗೀತಾ ಮಂದಿರಗಳನ್ನು ಸ್ಥಾಪಿಸಿದ ಸ್ವಾಮೀ ವಿದ್ಯಾನಂದರು ಗೀತಾ ಸಂಘವೊಂದನ್ನು ಅಖಿಲ ಭಾರತ ಪಾದಿಯಲ್ಲಿ ಸ್ಥಾಪಿಸುವ ಯೋಜನೆಯನ್ನು ತಯಾರಿಸಲಾರಂಭಿಸಿದ್ದಾರೆ. ಈ ಸಂಘವು ಭಾರತದಲ್ಲೂ ವಿದೇಶಗಳಲ್ಲೂ ಗೀತಾ ಪ್ರಚಾರವನ್ನು ಕೈಕೊಳ್ಳುವುದು. ಇದರ ಕೇಂದ್ರ ಕಾಶಿಯಲ್ಲಿ.

ಹಿಂದುಳಿದ ವರ್ಗಗಳ ಮಹಾ ಮಂಡಲದಿಂದ ಸಂಘಟಿಸಲ್ಪಟ್ಟ ಸ್ವಯಂಸೇವಕ ಸಂಸ್ಥೆಯಾದ ಸಮತಾ ಸೈನಿಕ ದಲದ ಮೇಲಿನ ನಿರ್ಬಂಧವು ಸದ್ಯದಲ್ಲೇ ದೂರಮಾಡಲ್ಪಡುವದೆಂದು ಸುದ್ದಿ.

ಮದ್ರಾಸ

ಮದ್ರಾಸ್ ಮಂತ್ರಿಗಳಲ್ಲಿ ಕೆಲವರ ಮೇಲೆ ಬಂದಿರುವ ಆರೋಪಗಳ ವಿಚಾರಣೆಯನ್ನು ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ ಮತ್ತು ಹಿಂದಿನ ಮುಖ್ಯ ಮಂತ್ರಿ ಪ್ರಕಾಶಂ ಇವರು ತಾ. ೨೦ ರೊಳಗಾಗಿ ಮುಗಿಸುವರೆಂಬ ನಿರೀಕ್ಷಣೆಯಿದೆ.

ಚಂದ್ರನಗರವನ್ನು ಹಿಂದುಸ್ಥಾನಕ್ಕೊಪ್ಪಿಸುವ ಕಾರ್ಯವು ಬಹುಶಃ ಇದೇ ೧೫ ನೆಯ ತಾರೀಕಿನೊಳಗಾಗಿ ಪೂರ್ತಿಯಾಗಬಹುದು. ಒಂದು ವೇಳೆ ಸಾಧ್ಯವಾಗದಿದ್ದಲ್ಲಿ ಸಪ್ಟಂಬರಿನಲ್ಲಿ ಆ ಕಾರ್ಯ ಮುಗಿಯುವುದು ಖಂಡಿತವೆಂದು ಹಿಂದುಸ್ಥಾನದಲ್ಲಿಯ ಫ್ರೆಂಚ್ ಉಪನಿವೇಶಗಳ ಕಮಿಶನರರಾದ ಜೀನ ಚಂಬಾನರು ಹೇಳಿದರು.

ನಿಯಂತ್ರಿತ ಪದಾರ್ಥಗಳ ಕಳ್ಳಪೇಟೆಯನ್ನು ತಪ್ಪಿಸುವುದಕ್ಕಾಗಿ ಮದ್ರಾಸು ಸರಕಾರದವರು ಅನುಮತಿಪತ್ರ ತೆಗೆದುಕೊಂಡವರ ಮೇಲೆ ಕಣ್ಣಿಡಲು ಪ್ರಾಂತಿಕ ಸಿ. ಐ. ಡಿ. ಶಾಖೆಗೆ ಆದೇಶ ಕೊಟ್ಟಿದ್ದಾರೆ.

ಪಶ್ಚಿಮ ಬಂಗಾಲ

ರೇಲ್ವೆ ಕೆಲಸಗಾರರ ಮಹಾಮಂಡಲದ ಅಧ್ಯಕ್ಷರಾದ ಜಯಪ್ರಕಾಶ ನಾರಾಯಣರು ಸಿಲ್ಹಾದಲ್ಲಿ ರೇಲ್ವೆ ಶಾಖೆಗೂ ಮಹಾ ಮಂಡಲಕ್ಕೂ ಆದ ಒಪ್ಪಂದಗಳನ್ನು ಕಾರ್ಯಕ್ಕೆ ತರಲು ವಿಳಂಬ ಮಾಡಬಾರದು, ಹಾಗೆ ಮಾಡಿದರೆ ಅದು ಸಾಂಕೇತಿಕ ಸಂಪನ್ನು ಹೂಡಬೇಕಾದೀತು ಎಂದು ಹೇಳಿದರು.

ಬರದ್ವಾನ್ ಜಿಲ್ಲೆಯ ಚಿತ್ತರಂಜನದಲ್ಲಿ ಭಾರತದ ರೇಲ್ವೆ ಎಂಜಿನ್ ತಯಾರಿಸುವ ಕಾರಖಾನೆಯ ಪ್ರದೇಶವನ್ನು ಪಶ್ಚಿಮ ಬಂಗಾಲ ಸರಕಾರವು ಸಾರ್ವಜನಿಕ ಸುರಕ್ಷಿತತೆಯ ಕಾಯದೆಯನ್ವಯ ಸಂರಕ್ಷಿತ ಪ್ರದೇಶವೆಂದು ಸಾರಿದೆ.

ಜುಲೈ ೧೪ ಕ್ಕೆ ಬ್ರಿಗೇಡ್ ಪರೇಡ್ ಬಯಲಿನಲ್ಲಿ ಸೇರಿದ್ದ ಪಂ. ನೆಹರು ಅವರ ಸಾರ್ವಜನಿಕ ಸಭೆಯಲ್ಲಿ ಗುಂಡಿಕ್ಕಲು ಪ್ರಯತ್ನಿಸಿದ ಬಗ್ಗೆ ಬಂಧಿಸಲಾದ ೮ ಜನರಲ್ಲಿ ಐವರನ್ನು ಸಾಕಷ್ಟು ಪ್ರಮಾಣಗಳಿಲ್ಲದ ಮೂಲಕ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಬಿಟ್ಟುಬಿಟ್ಟರು. ಇನ್ನುಳಿದ ಮೂವರನ್ನು ರಿಮಾಂಡಿನಲ್ಲಿಡಲಾಗಿದೆ.

ಹೊಸದಿಲ್ಲಿ

೧೯೫೨ ರೊಳಗಾಗಿ ೫೦ ಲಕ್ಷ ಟನ್ ಆಹಾರ ಧಾನ್ಯವನ್ನು ಹೆಚ್ಚಾಗಿ ಬೆಳೆಯುವ ಯೋಜನೆಯನ್ನು ಹಿಂದುಸ್ಥಾನ ಸರಕಾರದ ಆಹಾರ ಕಮಿಶನರಾದ ಶ್ರೀ ಆರ್. ಕೆ. ಪಾಟೀಲರು ತಾ ೯ ರ ತಮ್ಮ ಮೊದಲನೆಯ ಪತ್ರಿಕಾ ಪರಿಷತ್ತಿನಲ್ಲಿ ವಿವರಿಸಿದರು. ಇವುಗಳಲ್ಲಿ ೩೫೦೦೦೦ ಟನ್ ಧಾನ್ಯವನ್ನು ಸಾಗುವಳಿಯನ್ನು ಉತ್ಕೃಷ್ಟಗೊಳಿಸುವದರಿಂದಲೂ ೩೫೦೦೦೦ ಟನ್ ಧಾನ್ಯವನ್ನು ಬಂಜರು ಭೂಮಿಯನ್ನು ಸಾಗುವಳಿ ಮಾಡುವದರಿಂದಲೂ ೨೫೦೦೦೦ ಟನ್ ಧಾನ್ಯವನ್ನು ಕಬ್ಬು ಬೆಳೆಯುವ ಭೂಮಿಯಲ್ಲಿ ಧಾನ್ಯ ಬೆಳೆಯುವದರಿಂದಲೂ ೨೫೦೦೦೦ ಟನ್ ಧಾನ್ಯವನ್ನು ನೀರಾವರಿಯ ಮೂಲಕವಾಗಿ ಬೆಳೆಯುವುದರಿಂದಲೂ ಪೂರೈಸಲಾಗುವದೆಂದು ತಿಳಿಸಿದರು.

ಇಂಡೋನೇಶಿಯನ್ ಪ್ರಜಾರಾಜ್ಯದ ಮುಖ್ಯ ಮಂತ್ರಿಗಳಾದ ಡಾ. ಹಟ್ಟಾ ಅವರು ಹಾಲೆಂಡಿಗೆ ಹೊರಟಿದ್ದಾರೆ. ಹಾದಿಯಲ್ಲಿ ಕರಾಚಿಯಲ್ಲಿ ಇಳಿದರು. ಪಂ. ನೆಹರು, ಭಾರತದಲ್ಲಿಯ ಇಂಡೋನೇಶಿಯನ್ ರಾಯಭಾರಿ ಮತ್ತು ದಿಲ್ಲಿಯಲ್ಲಿಯ ಇಂಡೋನೇಶಿಯನ್ ನಾಗರಿಕರು ಅವರನ್ನು ದಿಲ್ಲಿಯ ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟರು.

ಸುದ್ದಿ ಮತ್ತು ಬಾನುಲಿ ಮಂತ್ರಿಗಳಾದ ಶ್ರೀ ಆರ್. ಆರ್. ದಿವಾಕರರು ದಿಲ್ಲಿಯ ರೋಧಿವಸತಿಯಲ್ಲಿ ತಾ ೯ ರ ದಿವಸ ಸ್ವಾತಂತ್ರ್ಯ ಸಪ್ತಾಹದ ಉದ್ಘಾಟನೆಯನ್ನು ನೆರವೇರಿಸಿದರು.

ಹಿಂದುಸ್ತಾನ ಸರಕಾರವು ಭೂತಾನ ಸರಕಾರದೊಡನೆ ಶಾಶ್ವತ ಶಳದಿಯ ಸ್ನೇಹ ಸಂಧಾನವೊಂದನ್ನು ಮಾಡಿಕೊಂಡಿದೆ. ಡಾರ್ಜಿಲಿಂಗಿನಲ್ಲಿ ಭೂತಾನ ಸರಕಾರದ ಪರವಾಗಿ ಸಿಕ್ಕಿಂ ಮತ್ತು ಭೂತಾನ ಶಿಷ್ಟಮಂಡಲದ ರಾಜಕೀಯ ಅಧಿಕಾರಿಗಳು ಈ ಸಂಧಿಗೆ ಸಹಿ ಹಾಕಿದರು.

ಭಾರತಸಂಸ್ಥಾನ

ಕೊಲ್ಹಾಪುರ ಕರ್ನಾಟಕ ಏಕೀಕರಣ ಸಂಘದ ಕಾರ್ಯಕಾರೀ ಸಭೆಯು ಗೌ. ಶಾ. ಎಸ್. ಎಸ್. ವೈದ್ಯ ಬಿ. ಎ. ರಿಂದ ಕರೆಯಲ್ಪಟ್ಟು ತಾ. ೬-೮-೪೯ ರಲ್ಲಿ ಸೇರಿತು. "ಈ ಭಾಗದ ಕರ್ನಾಟಕ ಪ್ರಧಾನ ಪ್ರದೇಶಗಳಾದ ಗಡಹಿಂಗ್ಲಜ್, ಶಿರೋಳ್ ತಾಲೂಕಗಳು, ಇಚಲಕರಂಜಿ ಭಾಗಗಳನ್ನು ಕೊಲ್ಹಾಪುರ ಜಿಲ್ಲೆಗೆ ಸೇರಿಸಿ ಕೂಡಬಾರದ ಅನ್ಯಾಯಗಳನ್ನು ಕರ್ನಾಟಕಕ್ಕೆ ಮಾಡಿದ ಸರಕಾರದ ಅಳ್ಯಕ್ಕಾಗಿ ಖೇದ ವ್ಯಕ್ತಪಡಿಸುತ್ತದಲ್ಲದೆ, "ಡಾಂಗ" ಪ್ರದೇಶವನ್ನು ಕುರಿತು ಸಂಬಂಧಪಟ್ಟವರು ವಹಿಸಿದ ಅಸ್ತ್ರ-ಶಸ್ತ್ರಗಳನ್ನೇ ಕೊಲ್ಹಾಪುರ ಭಾಗವನ್ನು ಕುರಿತೂ ಕೂಡಲೇ ತೆಗೆದುಕೊಂಡು ನ್ಯಾಯಶಾಲಿಗಳಾಗಬೇಕೆಂದೂ ಸಂಬಂಧಪಟ್ಟವರೆಲ್ಲರಿಗೂ ಈ ಕುರಿತು ಬರೆಕೊಳ್ಳಬೇಕೆಂದೂ ಈ ಸಂಘವು ಅಭಿಪ್ರಾಯಪಡುತ್ತದೆ"

ದಿವಂಗತ ಶೋಬುಲ್ಲಾಖಾನರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ ಹೈದರಾಬಾದಿನ ರಾಷ್ಟ್ರೀಯ ದಿನಪತ್ರಿಕೆ "ಇಮ್ರೋಜ್" ಹೈದರಾಬಾದಿನಲ್ಲಿ ಪುನಃ ಹೊರಡುವುದೆಂದು ತಿಳಿದುಬರುತ್ತದೆ.

ಮುಂಬಯಿ ಪ್ರಾಂತದಲ್ಲಿ ಸೌರಾಷ್ಟ್ರವನ್ನು ವಿಲಯನಗೊಳಿಸುವ ಬಗ್ಗೆ ಸೌರಾಷ್ಟ್ರ ಸರಕಾರವು ಸಂಸ್ಥಾನ ಶಾಖೆಯ ಅಲ್ಪಿಯ ನಿರೀಕ್ಷಣೆಯಲ್ಲಿದೆಯೆಂದು ಸೌರಾಷ್ಟ್ರದ ಉಪಮುಖ್ಯ ಮಂತ್ರಿ ಶ್ರೀ ಬಳವಂತರಾಯ ಮೆಹ್ತಾ ಪತ್ರಿಕಾ ಪರಿಷತ್ತಿನಲ್ಲಿ ಹೊರಗೆಡಹಿದರು.

ಮೂಲೆಮೂಲೆಗಳಿಂದ

ಐರೋಪ್ಯ ಕೌನ್ಸಿಲ್ಲಿನ ಸ್ಟ್ರಾಸಬರ್ಗ ಸಭೆಗೆ ೧೨ ಪಶ್ಚಿಮ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಲನದಲ್ಲಿ ಐರೋಪ್ಯರ ಐಕ್ಯತೆಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚರ್ಚೆ ನಡೆಸಲು ಸಾಧ್ಯವಾಗಬಹುದಾದ ಚರ್ಚೆಗಳನ್ನು ಪ್ರಾರಂಭಿಸಿದೆ.

ಪೌರಸ್ತ್ಯ ಐರೋಪ್ಯರೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸಿಕೊಳ್ಳಲು ಇಸ್ರೇಲಿನ ವಿದೇಶ ಮಂತ್ರಿ ಶಾರೆಟು ಡಾ. ಶಾಮರ್ ಲ್ ಶೀಲಪು ಮಾಸ್ಕೋ ಮುಂತಾದ ಪೌರಸ್ತ್ಯ ನಗರಗಳಲ್ಲಿಯ ತಮ್ಮ ಪ್ರತಿನಿಧಿ ಮಂಡಳಗಳ ಪರಿಶೀಲನೆ ಮಾಡಲು ಹೊರಟಿದ್ದಾರೆಂದು ಸುದ್ದಿ.

ಚೀನಾದಿನ ರಾಜಧಾನಿಯಾದ ಕ್ಯಾಂಟನ್ನನ್ನು ವಶಪಡಿಸಿಕೊಂಡ ಚೀನೀ ಕಮ್ಯುನಿಸ್ಟರು ಅಲ್ಲಿಂದ ೩೦೦ ಮೈಲು ಉತ್ತರದಲ್ಲಿರುವ ರೈಲ್ವೆ ನಗರವಾದ ಹೆಂಗ್ಯಾಂಗನ್ನು ವಶಪಡಿಸಿಕೊಂಡಿದ್ದಾರೆ. ರಾಷ್ಟ್ರೀಯ ದಲಗಳು ತಡೆಯಲು ಅಸಮರ್ಥರಾಗಿದ್ದಾರೆ.

ಮಂಚೂರಿಯದ ಕಮ್ಯುನಿಸ್ಟ ಸರಕಾರದೊಡನೆ ಸೋವಿಯಟ್ ರಶಿಯಾ ಒಂದು ವರ್ಷದ ವ್ಯಾಪಾರ ಒಪ್ಪಂದ ಮಾಡಿಕೊಂಡದ್ದು ಸಂಧಿಭಂಗದ ಕೆಲಸವಾಯಿತೆಂದು ಚೀನೀ ರಾಷ್ಟ್ರೀಯ ಸರಕಾರದ ವಿದೇಶಮಂತ್ರಿ ಡಾ. ಜಾರ್ಜ ಯೇ ಅವರು ಪ್ರತಿಭಟನಾಪತ್ರವನ್ನು ಮಾಸ್ಕೋವಿಗೆ ಕಳಿಸಿದ್ದಾರೆ. ರಾಷ್ಟ್ರೀಯ ಸರಕಾರದ ದಫ್ತರಗಳನ್ನು ಕ್ಯಾಂಟನ್ನಿನಿಂದ ಚುಂಗಕಿಂಗಿಗೆ ಸಾಗಿಸುವುದನ್ನು ಕಂಡರೆ ಅವಕಾಶ ದೊರೆತರೆ ರಾಜಧಾನಿ ಕ್ಯಾಂಟನ್ನಿನಿಂದ ಚುಂಗಕಿಂಗಿಗೆ ಸ್ಥಾನಾಂತರ ಹೊಂದಬಹುದಾಗಿ ತೋರುತ್ತದೆ.

ಅಮೇರಿಕೆಯ ವಿದೇಶ ಮಂತ್ರಿ ಡೀನ್ ಆಚಿಸನ್ನರು ಚೀನೀ ಕಮ್ಯುನಿಸ್ಟರ ಬಲವೃದ್ಧಿಯನ್ನು ತಡೆಯಲು ೩ ಕಾರ್ಯಯೋಜನೆಗಳನ್ನು ಹಾಕಿದ್ದಾರೆ. (೧) ಬ್ರಿಟಿಷ, ಫ್ರೆಂಚ ಇಂಡೋಚೀನ ಮುಂತಾದ ಸುತ್ತುಮುತ್ತಲಿನ ದೇಶಗಳನ್ನು ಕಮ್ಯುನಿಸ್ಟರ ಬೆದರಿಕೆಯಿಂದ ರಕ್ಷಿಸುವುದು, (೨) ಆ ದೇಶಗಳ ರಾಜಕೀಯ ಪ್ರೋಗ್ರಾಮಗಳನ್ನು ಬಲಗೊಳಿಸಿ, ಜನರ ಸ್ಥಿತಿಗತಿಗಳನ್ನು ಸುಧಾರಿಸಿ, ತನ್ಮೂಲಕ ಕಮ್ಯುನಿಜಮ್ಮಿನ ಅಂತರಿಕ ಸ್ಥಾನವನ್ನು ದುರ್ಬಲಗೊಳಿಸುವುದು, (೩) ಕಮ್ಯುನಿಸ್ಟ ಚೀನದಲ್ಲಿ ವಿರೋಧಿ ಪಕ್ಷದವರಿಗೆ ಅದಕ್ಕೆ ಬೇಕಾದ ಎಲ್ಲ ನೆರವನ್ನು ಸಲ್ಲಿಸಿ ಸರಕಾರದ ಬಲವನ್ನು ಕುಂದಿಸುವುದು.

ಈಕ್ವೆಡರಿನಲ್ಲಿ ಸಂಭವಿಸಿದ ಭೂಕಂಪದಿಂದ ೬೦೦೦ ಜನರು ಸತ್ತರೆಂದೂ ೨ ಲಕ್ಷ ಜನರು ಮನೆಗಳನ್ನು ಕಳೆದುಕೊಂಡರೆಂದೂ ತಿಳಿಯುತ್ತದೆ. ಜ್ವಾಲಾಮುಖಿಯ ಉತ್ಪಾತ, ಗುಡ್ಡಬೆಟ್ಟಗಳ ಉರುಳಾಟ ಮುಂತಾದ ಅವಘಡಗಳಿಂದ ಕೈಟೋ, ಅಂಬಾಟೋ ಮುಂತಾದ ನಗರಗಳೂ ಅವುಗಳ ಸುತ್ತುಮುತ್ತಲಿನ ಹಳ್ಳಿಗಳೂ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿವೆಯೆಂದು ಸುದ್ದಿ.

ಚೀನೀ ಕಮ್ಯುನಿಸ್ಟರ ವರ್ಚಸ್ಸನ್ನು ತಡೆಯಲು ಪೂರ್ವಸಿದ್ಧತೆಯೆಂದು ಆಂಗ್ಲರು ಸಿಂಗಪುರಕ್ಕೆ ಹೆಚ್ಚಿನ ನೌಕಾಬಲವನ್ನು ಕಳಿಸಿದ್ದಾರೆ. ಅದರಲ್ಲಿ ೬೦೦೦ ಯೋಧರಿದ್ದಾರೆ. ೬೦೦೦ ಟನ್ನಿನ ಹಡಗು ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡು ಹೋಗಿದೆ. ಹಾಂಕಾಂಗಿಗೆ ೧೨೦೦೦ ಯೋಧರ ಬದಲು ಹೊಸ ಯೋಜನೆಯಂತೆ ೨೫೦೦೦ ನುರಿತ ಯೋಧರನ್ನು ಕಳಿಸಲು ನಿರ್ಧರಿಸಲಾಗಿದೆ.

ಅಮೇರಿಕದ ಕೃಷಿಶಾಖೆಯು ಕಳೆದ ವರುಷಕ್ಕಿಂತ ಈ ವರ್ಷ ಜಾಗತಿಕ ಭತ್ತದ ಬೆಳೆ ನೂರಕ್ಕೆ ನಾಲ್ಕರಷ್ಟು ಅಂದರೆ ಯುದ್ಧ ಪೂರ್ವದಲ್ಲಿದ್ದುದಕ್ಕಿಂತ ನೂರಕ್ಕೆ ೨ ರಷ್ಟು ಹೆಚ್ಚಾಗಿದೆ ಎಂದು ಸಾರಿದೆ.

ಮಾರ್ಶಲ್ ಯೋಜನೆಯ ವಿಫಲತೆಯನ್ನೂ ಅಮೇರಿಕದ ಆರ್ಥಿಕ ಬಿಕ್ಕಟ್ಟನ್ನೂ ಸೋವಿಯಟ್ ಒಕ್ಕೂಟ ಮತ್ತು ಇತರ ಜನತಾ ರಾಷ್ಟ್ರಗಳು ಅಂತರರಾಷ್ಟ್ರೀಯವಾಗಿ ತಿಳಿಸಿ ವಿಶ್ವದ ಅಲೋಚನೆಯಿಂದ ಮುಚ್ಚಲು ಅಧ್ಯಕ್ಷ ಟ್ರುಮನ್ನರು ಪ್ರಯತ್ನಿಸುತ್ತಿದ್ದಾರೆಂದು "ಪ್ರಾವ್ದಾ" ಪತ್ರಿಕೆ ಪ್ರಕಟಿಸಿದೆ.

ಅನೇಕ ಆರ್ಥಿಕ ದುರವಸ್ಥೆಗಳಿಗೆ ನೀರಾವರಿಯೇ ಮದ್ದು

ಹೇಳಬಹುದಂಥ ನೀರಾವರಿ ಪದ್ಧತಿಗಳುಳ್ಳ ಜಾಗತಿಕ ರಾಷ್ಟ್ರಗಳಲ್ಲಿ ಭಾರತ ಮೊದಲನೆಯದಾಗಿ ನಿಲ್ಲುತ್ತದೆ. ಇತ್ತೀಚಿನ ಲೆಕ್ಕದ ಪ್ರಕಾರ ಭಾರತದಲ್ಲಿ ನೀರಾವರಿಯಿಂದ ಸಾಗುವಳಿಯಾಗುತ್ತಿರುವ ಜಮೀನಿನ ಪರಿಮಾಣ ಕೃಷಿಯಲ್ಲಿ ಮುಂಬರಿದ ನಾಡುಗಳಾದ ಅಮೇರಿಕದ ಸಂಯುಕ್ತಸಂಸ್ಥಾನ, ರಶಿಯಾ, ಜಪಾನು, ಈಜಿಪ್ತ ಮತ್ತು ಇಟಲಿಗಳಲ್ಲಿಯ ಒಟ್ಟು ನೀರಾವರಿಯ ಕ್ಷೇತ್ರಕ್ಕಿಂತ ಹೆಚ್ಚಾಗುವದು. ಈ ಐದು ದೇಶಗಳ ಒಟ್ಟು ವಿಸ್ತಾರದ ಅಂದಾಜು ಭಾರತದ ಹತ್ತರಷ್ಟಾಗುವದು.

ಈ ಕಾರ್ಯ ಕ್ಷೇತ್ರದಲ್ಲಿ ನಮ್ಮ ದೇಶ ಮೇಲ್ಮಟ್ಟದಲ್ಲಿದ್ದರೂ ಪ್ರತಿಯೊಂದು ಎಕರೆಯಲ್ಲಿಯ ಹುಟ್ಟುವಳಿಯ ಪ್ರಮಾಣಮಾತ್ರ ಇಡಿ ಜಗತ್ತಿನಲ್ಲೇ ಕನಿಷ್ಠ ಎಂಬ ಅಂಶ ಭಾರತೀಯ ಅರ್ಥಶಾಸ್ತ್ರಜ್ಞರಿಗೆ ಆಶ್ಚರ್ಯವನ್ನುಂಟುಮಾಡಿದೆ. ಜಗತ್ತಿನಲ್ಲೆಲ್ಲ ಅತ್ಯುತ್ತಮವೂ ಅತಿ ವಿಸ್ತೃತವೂ ಆದ ನೀರಾವರಿಯ ಪದ್ಧತಿಯುಳ್ಳ ಈ ದೇಶ ಪ್ರತಿವರ್ಷವೂ ಆಹಾರ ಧಾನ್ಯಗಳ ಆಮದಿನ ಭಾರದಿಂದ ಕುಸಿದು ಹೋಗುತ್ತಿರುವದಕ್ಕೆ ವಿವರಣೆಯೇನು?

ನಿಸರ್ಗದ ಸ್ವಾಚ್ಛಂದ್ಯ

ವಿವರಣೆ ಬಹಳ ಸರಳವಾಗಿದೆ. ನೀರಾವರಿಯಿಂದ ನೀರುಣ್ಣುವ ಕೃಷಿಕ್ಷೇತ್ರಗಳಿಗಿಂತ ಮಳೆನೀರಿಗಾಗಿ ಬಾಯ್ದೆರೆದು ಕಾದು ಕುಳಿತಿರುವ ಹೊಲಗದ್ದೆಗಳ ಪರಿಮಾಣ ಹೆಚ್ಚಾಗಿದೆ. ಮಳೆ ಎಲ್ಲ ಕಡೆಗೂ ಒಂದೇ ಸಮನಾಗಿ ಬರುವುದಿಲ್ಲ. ಒಮ್ಮೆ ಮಳೆ ಬಹಳ ತಡವಾಗಿ ಬಂದರೆ ಮತ್ತೊಮ್ಮೆ ಅದು ಬಹಳ ಮೊದಲು ಬರಬಹುದು. ಮಳೆ ಸಕಾಲದಲ್ಲೇ ಒಮ್ಮೆ ಬಂದರೂ ಅದು ಸ್ವಲ್ಪ, ಸಾತ್ವಿಕ, ಅಥವಾ ಅತ್ಯಲ್ಪವಾಗಬಹುದು, ಇಲ್ಲವೆ ಮುಂಗಾರೇನಾದರೂ ಬಹಳ ಜಡಿದರೆ ಅತಿವೃಷ್ಟಿ ಸಂಭವಿಸೀತು, ಮಹಾಪೂರಗಳೆದ್ದಾವು. ಅನಾವೃಷ್ಟಿ, ಅತಿವೃಷ್ಟಿಗಳೆರಡರಿಂದಲೂ ಆಹಾರ ಧಾನ್ಯಗಳ ಬೆಳೆಗೆ ಕೇಡುಂಟಾಗುವುದು. ಆದುದರಿಂದ ಬೇಡಿಕೆಯನ್ನು ಪೂರಯಿಸಲು ತಲೆಭಾರವಾಗುವಷ್ಟು ಆಹಾರ ಧಾನ್ಯವನ್ನು ಹೊರಗಿಂದ ತರಿಸಿಕೊಳ್ಳಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಅತಿವೃಷ್ಟಿಯಿಂದ ಅಥವಾ ಅನಾವೃಷ್ಟಿಯಿಂದ ಬೆಳೆ ಒಂದೇ ಸಮನಾಗಿ ಹಾಳಾದದ್ದು ಗೊತ್ತಿದ್ದ ಸಂಗತಿ. ಹೀಗೆ ಕ್ಷಾಮ ಮತ್ತು ಪ್ರವಾಹಗಳಿಗೆ ತುತ್ತಾಗಿ ಬೆಳೆ ಹಾಳಾಗುವುದನ್ನು ನಾಡು ಹಾಗೇ ನೋಡುತ್ತ ಮೂಕವಾಗಿ ಕುಳಿತಿರಬೇಕೇ?

ಚಿರಸ್ಥಾಯಿಯಾದ ಪರಿಹಾರ

ದೇಶದ ಈ ತೊಂದರೆಗಳ ನಿವಾರಣೆಗೆ ಒಂದೇ ಒಂದು ಚಿರಕಾಲಿಕ ಪರಿಹಾರೋಪಾಯವೆಂದರೆ, ಕ್ರಮಶಃ ಮತ್ತು ಕಡೆಗೆ ರೈತನು ನೇರವಾಗಿ ಮಳೆಯನ್ನು ನಂಬಿ ಕಾದುಕುಳಿತಿರುವ ಸ್ಥಿತಿಯನ್ನು ನಿಃಶೇಷವಾಗಿ ಇಲ್ಲದಂತೆ ಮಾಡಿ, ಅದರ ಬದಲು ಸಾಧ್ಯವಾದರೆ ವರ್ಷಾವಧಿಯೂ ನೀರು ಖಾತ್ರಿಯಾಗಿ ಸಿಗುವಂತೆ ಜಲಯೋಜನೆಗಳನ್ನು ಕಟ್ಟುವುದೇ ಆಗಿದೆ. ಅಂದರೆ, ಈಗ ನೀರಾವರಿಯ ನೆರವಿಲ್ಲದ ಭಾಗಗಳಿಗೂ ನೀರಾವರಿಯ ಸಹಾಯ ಸಿಗುವಂತೆ ಮಾಡುವುದು. ಆಗ ಮಾತ್ರ ಭಾರತೀಯ ಒಕ್ಕಲಿಗನು ಹೆಚ್ಚು ಆಹಾರ ಬೆಳೆಯುವ ಚಳವಳಿಯಲ್ಲಿ ಪರಿಣಾಮಕಾರಕವಾಗಿ ಭಾಗ ವಹಿಸಬಲ್ಲವನಾದಾನು.

ಭಾರತದಲ್ಲಿ ಈಗ ೪೬ ನೀರಾವರಿಯ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿವೆ, ೫೩ ಆಗಲೇ ಅಮಲಿನಲ್ಲಿ ಬರಲಿವೆ; ಮಿಕ್ಕ ೬೧ ಯೋಜನೆಗಳು ಚರ್ಚಿಸಲ್ಪಡುತ್ತಿವೆ. ಈ ೧೬೦ ಯೋಜನೆಗಳಿಗೆ ಒಟ್ಟು ೧೨೪೦ ಕೋಟಿ ರೂಪಾಯಿಗಳು ಬೇಕಾಗುವುವು. ಈಯೆಲ್ಲ ಯೋಜನೆಗಳೂ ಪೂರ್ಣವಾಗಿ ಕೈಗೂಡಿದಾಗ ೩॥ ಕೋಟಿ ಎಕರೆ ಜಮೀನಿಗೆ ನೀರು ಸಿಕ್ಕುವಂತಾಗುತ್ತದೆ. ಅಂದರೆ ಸದ್ಯಃ ಅಮೇರಿಕದ ಸಂಯುಕ್ತಸಂಸ್ಥಾನದಲ್ಲಿ ನೀರಾವರಿಯ ಆಶ್ರಯಪಡೆದಿರುವಷ್ಟು ಹೆಚ್ಚಿಗೆ ಜಮೀನು ನಮ್ಮಲ್ಲಿ ನೀರಾವರಿಯ ಸವಲತ್ತನ್ನು ಪಡೆಯುವಂತಾಗುವುದು. ಇದರಿಂದ ಈಗಿರುವುದಕ್ಕಿಂತ ೫೦ ರಿಂದ ೬೦ ಲಕ್ಷ ಟನ್ ಆಹಾರ ಧಾನ್ಯಗಳೂ ೧ ಕೋಟಿ ಕಿಲೋವ್ಯಾಟ್ ವಿದ್ಯುಚ್ಛಕ್ತಿಯೂ ಹೆಚ್ಚು ದೊರೆಯುವಂತಾಗುವುದು; ವರ್ಷಕ್ಕೆ ೧೪೫ ಕೋಟಿ ರೂಪಾಯಿಗಳ ಆದಾಯ ಸರಕಾರಕ್ಕೆ ಲಭಿಸುವುದು.

ಕಾರ್ಯರೂಪಕ್ಕೆ ಬರುತ್ತಿರುವ ಯೋಜನೆಗಳು

ರಚಿಸಲಾಗುತ್ತಿರುವ ನೀರಾವರಿಯ ೪೬ ಯೋಜನೆಗಳಲ್ಲಿ ೧೬ ಕ್ಕೆ ೧ ಕೋಟಿಗಿಂತ ಕಡಿಮೆ ವೆಚ್ಚ ಬೀಳುವುದು, ೧೬ ಒಂದೊಂದಕ್ಕೆ ೧ ರಿಂದ ೫ ಕೋಟಿಯ ವರೆಗೆ ವೆಚ್ಚ ಬೀಳುವಂಥವಿವೆ. ೪ ಒಂದೊಂದಕ್ಕೆ ೫ ರಿಂದ ೧೦ ಕೋಟಿ ರೂಪಾಯಿಗಳ ಖರ್ಚು ಬೀಳುವಂಥವಿವೆ ಈ ೪೬ ರ ಸರಾಸರಿ ವೆಚ್ಚ ೮೩ ಕೋಟಿ ರೂಪಾಯಿಗಳಷ್ಟಾಗುವದು. ಉಳಿದ ೯ ದೊಡ್ಡ ಯೋಜನೆಗಳು. ಅವುಗಳಲ್ಲಿ ಒಂದೊಂದಕ್ಕೆ ೧೦ ರಿಂದ ೧೦೦ ಕೋಟಿ ರೂಪಾಯಿಗಳ ವೆಚ್ಚ ತಗಲುವಂಥವಿವೆ; ಪಶ್ಚಿಮಬಂಗಾಲ ಮತ್ತು ಬಿಹಾರಗಳ ದಾಮೋದರ ಯೋಜನೆ, ಓರಿಸದ ಹೀರಾಕುಡ ಯೋಜನೆ, ಸಂಯುಕ್ತಪ್ರಾಂತದ ರೀಹಂದ ಯೋಜನೆ, ಪೂರ್ವಪಂಜಾಬಿನ ಭಾಕ್ರಾ ಮತ್ತು ನಂಗಾಲ ಯೋಜನೆ ಇವು ಅವುಗಳಲ್ಲಿ ಪ್ರಮುಖವಾದವು. ಚಿಕ್ಕ ಯೋಜನೆಗಳು ಮುಗಿಯಲು ೨-೩ ವರ್ಷಗಳು ಬೇಕಾಗಬಹುದು. ಕೆಲ ದೊಡ್ಡ ಯೋಜನೆಗಳು ೭-೮ ವರ್ಷಗಳಲ್ಲಿ ಮುಗಿಯಬಹುದು-ಸಿಮೆಂಟು, ಉಕ್ಕು ಮುಂತಾದ ಸಾಮಗ್ರಿಗಳು ಮಾತ್ರ ಯೋಜನಾನುಸಾರವಾಗಿ ಒದಗುತ್ತಿರಬೇಕು. ಉಕ್ಕು ಸಿಮೆಂಟುಗಳು ಪ್ರತಿವರ್ಷವೂ ಏಳು ವರ್ಷಗಳ ವರೆಗೆ ೧ ಲಕ್ಷ ಮತ್ತು ೬ ಲಕ್ಷ ಟನ್ನುಗಳಷ್ಟು ಬೇಕಾಗಬಹುದು. ಅವುಗಳ ಬೆಲೆ ವರ್ಷಕ್ಕೆ ೫೦೦ ಕೋಟಿ ರೂಪಾಯಿಗಳಷ್ಟಾಗುವದು.

ಬರಬಹುದಾದ ಫಸಲು

ಮುಗಿದ ಯೋಜನೆಗಳಿಂದ ೧೯೫೦-೫೧ ರಲ್ಲಿ ೧೬೩೦೦೦ ಟನ್, ೧೯೫೫-೫೬ ರ ಹೊತ್ತಿಗೆ ೧೩,೮೦,೦೦೦ ಟನ್, ಅಂದರೆ ಎಂಟು ಪಟ್ಟು ಹೆಚ್ಚುಆಹಾರಧಾನ್ಯಗಳನ್ನು ಬೆಳೆಯಬಹುದು. ಒಟ್ಟು ನಲವತ್ತಾರೂ ಯೋಜನೆಗಳಿಂದ ೩೦ ಲಕ್ಷ ಟನ್ ಆಹಾರ ಧಾನ್ಯ ಪ್ರತಿವರ್ಷ ಬೆಳೆಯುವಂತಾಗಬಹುದು- ಇದು ೧೯೪೮-೪೯ ರಲ್ಲಿ ನಾವು ತರಿಸಿದ ಆಹಾರಧಾನ್ಯದ ಪರಿಮಾಣಕ್ಕಿಂತ ಸ್ವಲ್ಪ ಹೆಚ್ಚಾಗುವುದು. ಅಷ್ಟರಲ್ಲಿ ಹೊಸ ಯೋಜನೆಗಳಿಂದ ೧೭೩ ಲಕ್ಷ ಕಿಲೋವ್ಯಾಟನಷ್ಟು ವಿದ್ಯುಚ್ಛಕ್ತಿ ದೊರಕುವುದು. ಆದರಿಂದ ಇಡೀ ಭಾರತದಲ್ಲಿ ಈಗಿಗಿಂತ ಎರಡು ಪಟ್ಟು ವಿದ್ಯುಚ್ಛಕ್ತಿ ಲಭ್ಯವಾದಂತಾಗುವುದು.

೨೦,೮೦೦೦೦ ಟನ್ ಆಹಾರ ಧಾನ್ಯವನ್ನು೧೨೦ ಕೋಟಿ ರೂಪಾಯಿಗಳನ್ನು ತೆತ್ತು ಭಾರತ ಸರಕಾರ ೧೯೪೮-೪೯ ರಲ್ಲಿ ಹೊರಗಿನಿಂದ ತರಿಸಿದೆ; ೧೯೪೯-೫೦ ರಲ್ಲಿ ೪೦ ಲಕ್ಷ ಟನ್ನಿನಷ್ಟು ತರಿಸಬೇಕಾದೀತು; ಅದಕ್ಕೆ ೧೫೦ ಕೋಟಿ ರೂಪಾಯಿಗಳು ಬೇಕಾದಾವು. ಅದರೆ ಪ್ರತಿವರ್ಷವೂ ೧೫೦ ಕೋಟಿ ರೂಪಾಯಿಗಳನ್ನು ಹೊರನಾಡುಗಳಿಗೆ ತೆತ್ತು ಬಡವಾಗುವುದಕ್ಕಿಂತ ಈ ೪೬ ಯೋಜನೆಗಳಿಗಾಗಿಯೇ ೩೬೦ ಕೋಟಿ ರೂಪಾಯಿಗಳನ್ನು ಬಳಸುವುದು ಲಾಭಕರ. ಅದರಿಂದ ಧಾನ್ಯ, ವಿದ್ಯುಚ್ಛಕ್ತಿಗಳಲ್ಲದೆ ಮೀನುಗಾರಿಕೆ, ಮರಬೆಳೆ, ಭೂಸಾರ ರಕ್ಷಣೆ, ಅಂತರಿಕ ನೌಕಾಯಾನ, ಕುಡಿಯುವ ನೀರಿನ ಸೌಲಭ್ಯ, ವಿನೋದ ಸೌಕರ್ಯ ಮುಂತಾದ ಹಲವಾರು ಪ್ರಯೋಜನಗಳು ಸಿಕ್ಕುವುವು.

ಪಟಿಯಾಲಾ ಸಂಸ್ಥಾನದಲ್ಲಿ ಈಚೆಗೆ ಭಯಂಕರ ನೆರೆಹಾವಳಿಯು ಇಬ್ಬರು ಕೈದಿಗಳನ್ನು ಮರಣ ದಂಡನೆಯಿಂದ ಉಳಿಸಿತು. ಜುಲೈ ೧೫ ಕ್ಕೆ ಅಜಮೇರ ಸಿಂಗ ಮತ್ತು ಅಜೈಬ ಸಿಂಗರೆಂಬ ಇಬ್ಬರು ಯುವಕರನ್ನು ಸೆರೆಮನೆಯಲ್ಲಿ ಗಲ್ಲಿಗೇರಿಸಬೇಕಾಗಿತ್ತು. ಅದರೆ ಪಟಿಯಾಲವನ್ನು ಅಂದು ಆವರಿಸಿದ ಮಹಾಪೂರದ ನಿಮಿತ್ತ ಅವರ ವಧೆಯನ್ನು ಜುಲೈ ೨೯ ಕ್ಕೆ ಮುಂದೂಡಲಾಯಿತು. ಈ ನಡುವೆ ಸೆರೆಮನೆಗೆ ಭೆಟ್ಟಿಯಿತ್ತ ಒಕ್ಕೂಟ ಮುಖ್ಯಮಂತ್ರಿ ಸರದಾರ ಜ್ಞಾನಸಿಂಗರ ಮುಂದೆ ಅವರು ತಪ್ಪೊಪ್ಪಿ ಕ್ಷಮಾಯಾಚನೆ ಮಾಡಿದ್ದರಿಂದ ಸರಕಾರದವರು ಅವರ ಎಳೆವಯಸ್ಸನ್ನು ಅನುಲಕ್ಷಿಸಿ ಮರಣದಂಡನೆಯನ್ನು ರದ್ದುಗೊಳಿಸಿದರು.

-ಹಿಂದುಸ್ಥಾನ ಟೈಮ್ಸ

ಕಲಕತ್ತ ವಿಶ್ವವಿದ್ಯಾಲಯದ ಆವಾರದಲ್ಲಿ ಸೇರಿದ ಸಭೆಯಲ್ಲಿ ತಾ. ೯ ರ ಮಧ್ಯಾಹ್ನ ಸಂಭವಿಸಿದ ಸ್ಫೋಟದ ಪರಿಣಾಮವಾಗಿ ೪ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಚಲೀಣಾದ ದಿವಾಚರಣೆಯ ಬಗ್ಗೆ ಚರ್ಚೆ ನಡಸಲು ಸಭೆ ಸೇರಿತ್ತು.

ಮಧ್ಯವರ್ಗದ ಕುಟುಂಬಗಳು

ಸಂಸ್ಕೃತಿಯ ಇತಿಹಾಸವನ್ನು ಬಲ್ಲವರಿಗೆ ಜಗತ್ತಿನಲ್ಲಿ ಮಧ್ಯವರ್ಗದ ಪ್ರಜೆಗಳ ಪ್ರಾಮುಖ್ಯ ತಿಳಿದಿದೆ. ಮಧ್ಯಮ ವರ್ಗವೆಂಬುದು ಸಕಲ ಬೌದ್ಧಿಕ ಕ್ರಾಂತಿಗೂ ಬೀಜವೆನಿಸಿದೆ. ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಿವರ್ತನದ ಕಲ್ಪನೆಯನ್ನು ಕಾಣುವ, ಕಂಡು ಪಸರಿಸುವ, ಪಸರಿಸಿ ಸರ್ವೋದಯವನ್ನು ಸಾಧಿಸುವ ಕಾರ್ಯದಲ್ಲಿ ಅದು ಎಂದಿನಿಂದಲೂ ಅಗ್ರೇಸರ ಎನಿಸಿದೆ. ಸಾಮಾನ್ಯ ಜನರಿಗಾಗಲಿ ಶ್ರೀಮಂತ ಜನರಿಗಾಗಲಿ ಜೀವನದ ನಾನಾ ಕ್ಷೇತ್ರಗಳಲ್ಲಿ ಹೊಸ ಕಲ್ಪನೆಗಳನ್ನು ಕೊಟ್ಟು, ಸುಬದ್ಧದೃಷ್ಟಿಯಲ್ಲಿ ಬದಲಾವಣೆಯನ್ನುಂಟುಮಾಡಲು ಮಧ್ಯಮ ವರ್ಗದ ವಿದ್ಯಾವಂತರಷ್ಟು ಮತ್ತಾರೂ ಶ್ರಮಿಸಿಲ್ಲ. ಅವರೇ ನಿಜವಾಗಿ ನೋಡಿದರೆ ನಾಗರಿಕತೆಯ ಬೆನ್ನೆಲುಬು ಎನ್ನಬಹುದು.

ಬುದ್ಧಿಭೇದ

ಆದರೆ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ಸಂಘಶಕ್ತಿಗೆ ಮಾತ್ರ ಸರಕಾರ ಮತ್ತು ಸಾರ್ವಜನಿಕರ ಮನ್ನಣೆ ಸಿಗುವುದಲ್ಲದೆ ಅಸಂಘಟಿತರನ್ನು ಯಾರೂ ಕೇಳರು ಎಂಬುದು ತಿಳಿದುಬರುತ್ತದೆ. ವಿದ್ಯಾವಂತಿಕೆಯ ಪರಿಣಾಮವಾಗಿ ಮಧ್ಯಮ ವರ್ಗದವರಲ್ಲಿ ವೈಯಕ್ತಿಕತೆಯೇ (Individualism) ಹೆಚ್ಚಾಗಿ ಬೆಳೆದುಬಂದಿದೆ. ಇದರ ಪರಿಣಾಮವಾಗಿ ವಿವಿಧೋದ್ಯಮಗಳಲ್ಲಿ (ಉದ್ಯಮ ಎನ್ನುವುದಕ್ಕಿಂತ ಉದ್ಯೋಗವೆಂದರೇ ಹೆಚ್ಚು ಸರಿ) ತೊಡಗಿರುವ ಅವರಿಗೆ ವರ್ಗದೃಷ್ಟಿಯೆಂಬುದು ಸಾಕಷ್ಟು ಬೆಳೆದು ಬಂದಿಲ್ಲ; ಮಿಕ್ಕವರು ಅವರನ್ನು ಒಂದು ವರ್ಗಕ್ಕೆ ಸೇರಿದವರೆನ್ನಬೇಕಲ್ಲದೆ ಅವರೆಂದೂ ಹಾಗೆ ಭಾವಿಸರು. ಅವರಲ್ಲಿ Cosmopolitans ವಿಶ್ವಜನೀನವೃತ್ತಿಯವರು. Epicureans ಶ್ರೀಮಂತರನ್ನು ಹಿಂಬಾಲಿಸುವ ದಾಸೋಽಹಂ ಪಂಥದ ಭೌತವಾದಿಗಳು ("ಋಣಂಕೃತ್ವಾ ಘೃತಂಪಿಬೇತ್" ಎಂಬ ಚಾರ್ವಾಕರು), Neological manines (ಎಂಥದಾದರೂ ಇರಲಿ, ಹೊಸತಾದರೆ ಸರಿ ಎಂಬ) ಹೊಸತಿನ ಹುಚ್ಚು ಹಿಡಿದವರು, Sophists ಕುತರ್ಕಿಗಳು, stoics ಜಡಭರತ ಪಂಥದವರು (ಅಂದರೆ "ಸುಖದುಃಖೇಸಮೇಕೃತ್ವಾ" ಎಂಬ ಅನಾಸಕ್ತರು) ಮುಂತಾದ ಮನಃಸ್ಥಿತಿಯವರಿದ್ದಾರೆ. ಈ ಬಗೆಯ ಮನಃಸ್ಥಿತಿಗಳು ಒಕ್ಕಟ್ಟಿಗೆ, ವರ್ಗಭಾವನೆಗೆ, ವರ್ಗ ಹಿತಸಾಧನೆಗೆ ವಿಘಾತಕವಾದವುಗಳು.

ಮಧ್ಯ ವರ್ಗದಲ್ಲಿ ವ್ಯಾಪಾರಿಗಳು, ಕಸಬುದಾರರು ಮುಂತಾದವರು ಆದಾಯದ ಮಾನದಿಂದ, ವಿದ್ಯೆ ಸಂಸ್ಕೃತಿಗಳ ಮಾನದಿಂದ ಕೆಲ ಮಟ್ಟಿಗೆ ಸೇರುವರಾದರೂ ಸರಕಾರಿ ಅಥವಾ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳಲ್ಲಿ ನೌಕರಿ ಚಾಕರಿ ಮಾಡಿಕೊಂಡಿರುವವರೇ ಮುಖ್ಯರು. ಅವರಲ್ಲೂ ಕೆಳ ಮಧ್ಯವರ್ಗದವರು, ಮೇಲು ಮಧ್ಯವರ್ಗದವರು ಎಂದು ಇಬ್ಭಾಗ ಮಾಡುವುದುಂಟು.

ನೌಕರಿಯಲ್ಲಿರುವುದರಿಂದ ಒಂದು ಯಾಂತ್ರಿಕತೆ ಬುದ್ಧಿಗೆ ತಗುಲಿಕೊಳ್ಳುತ್ತದೆ. ಕೆಲಸ ಹೋಗಿ ಥಕ್ಕನೆ ಇದ್ದ ಸ್ಥಾನಮಾನದಿಂದ ಕೆಳಗುರುಳಬಹುದಾದ ಹೆದರಿಕೆ ಎಂಬುದು ಹೇಡಿತನ, ಕ್ಷುದ್ರತ್ವ, ದಂಭ, ದಾಸ್ಯಗಳನ್ನು ಕಲಿಸುತ್ತದೆ; ಅದು ಸ್ವಪರಘಾತಕವೂ ಸಂಕುಚಿತ ಮನೋಧರ್ಮವರ್ಧಕವೂ ಆಗುತ್ತದೆ. ಹೊಟ್ಟೆಗೆ ಹಿಟ್ಟಿಲ್ಲವಾದರೂ ಜುಟ್ಟಿಗೆ ಮಲ್ಲಿಗೆ ಹೂ ತಗುಲಿಸಿಕೊಂಡು ತಿರುಗುವ Vanity ಟೊಳ್ಳುಗಟ್ಟಿತನವು ಮಧ್ಯವರ್ಗದ ಸ್ತ್ರೀ ಪುರುಷರಲ್ಲಿ ತಲೆದೋರಿದ್ದೇ ಅವರ ಸಾಮಾಜಿಕ ಮತ್ತು ಆರ್ಥಿಕ ಅವನತಿಗೆ ಕಾರಣವಾಗಿದೆ.

ದಾಂಭಿಕ ವೆಚ್ಚ

ಮಧ್ಯವರ್ಗದ (ಅಂದರೆ ತಿಂಗಳಿಗೆ ೫೦೦ ರೂಪಾಯಿಗಿಂತ ಕಡಿಮೆ ಸಂಬಳಬರುವ) ಗೃಹಸ್ಥರ ಆದಾಯ ವೆಚ್ಚಗಳ ಸರಾಸರಿಯ ಒಂದು ಮಾದರಿಯನ್ನೀಗ ಕೇಂದ್ರ ಸರಕಾರದ ವಾಣಿಜ್ಯಮಂತ್ರಿ ಶಾಖೆ ಪ್ರಕಟಿಸಿದೆ. ೧೯೪೮ ಮಧ್ಯವರ್ಗದ ಕುಟುಂಬಗಳ ಖರ್ಚು ವೆಚ್ಚಗಳ ಪಟ್ಟಿಯನ್ನು ತರಿಸಿಕೊಂಡು ಅವುಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಯತ್ನಿಸಿದಾಗ ಅವುಗಳಲ್ಲಿ ನೂರಕ್ಕೆ ೩೭ ರಿಂದ ೬೫ ಕುಟುಂಬಗಳು ಸಾಲಮಾಡಿ ಕಾಲಹಾಕುತ್ತಿವೆ ಎಂದು ತಿಳಿದುಬಂದಿತು. ಈ ಗೃಹಸ್ಥರ ಮನೆಯಲ್ಲಿ ೩ ರಿಂದ ೮ ವ್ಯಕ್ತಿಗಳ ವರೆಗೆ ಇವರನ್ನು ಅನ್ನ ವಸ್ತ್ರಗಳಿಗಾಗಿ ಅವಲಂಬಿಸಿದವರಿರುತ್ತಾರೆ; ಸಂಬಳ ನೂರರಿಂದ ೫೦೦ ರ ವರೆಗೆ; ಸರಾಸರಿ ೧೬೦ ರೂಪಾಯಿಗಳು. ಮದುವೆ ಮುಂಜಿ, ಕಾರ್ಯಕಟ್ಟಲೆ, ಆಧುನಿಕ ನಾಗರಿಕ ವಿಲಾಸಸಾಧನ, ಬಾಡಿಗೆ, ಹಾಲು ಹೈನಗಳೇ ಇವರ ಮನೆಗಳಲ್ಲಿ ಹೆಚ್ಚು ಖರ್ಚಿಗೆ ಹಾದಿಗಳಾಗಿವೆ. ಸುಭಿಕ್ಷಕಾಲದಲ್ಲಿ ಮಾಡುತ್ತಿದ್ದ ಖರ್ಚು ವೆಚ್ಚದ ಮಟ್ಟವನ್ನು ಇಳಿಸಲು ಬರದೆ, ಈ ದುರ್ಭಿಕ್ಷ ಕಾಲದಲ್ಲೂ ಹಾಗೇ ಸಾಮಾಜಿಕ ಮತ್ತು ವೈಲಾಸಿಕ ವ್ಯವಹಾರವನ್ನು ನಡೆಸುವ ದಂಭ ದೌರ್ಬಲ್ಯಗಳೇ ಅವರ ಸಾಲಗಾರಿಕೆಗೆ ಹೆಚ್ಚು ಕಾರಣಗಳಾಗಿವೆ; ಜೊತೆಗೆ ಅದ್ದ ಸಂಪಾದನೆ ಅತಿಸ್ವಲ್ಪ; ಮನೆಯ ಮಂದಿಯ ದುಡಿತ ಅತ್ಯಲ್ಪ ಅಥವಾ ಶೂನ್ಯ. ಹೀಗಾಗಿ ಅವರೀಗ ಹೆಚ್ಚಾಗಿ ಕೇವಲ Tailors Dummies ಪುರುಷವೇಷದ ಬೊಂಬೆಗಳಾಗುತ್ತ ಬಂದಿದ್ದಾರೆ. ಅಸ್ಥಿರತೆ, ಅನಾಸ್ಥೆ, ನಿರುತ್ಸಾಹ, ಸ್ವಪರವಂಚನೆ ಮುಂತಾದ ಗುಣಗಳು ಅವರಲ್ಲಿ ತಲೆಹಾಕುತ್ತಿವೆ. ಆದುದರಿಂದ ಅವರ ಐತಿಹಾಸಿಕವಾದ ಕ್ರಾಂತಿಕಾರಕ ಉತ್ಸಾಹಕ್ಕೆ ಅವರ ಅತೃಪ್ತಿಗಳು ಎಡೆಗೊಡದೆ ನಿಷ್ಕ್ರಿಯತೆಗೆ ಅವಕಾಶ ಮಾಡಿಕೊಟ್ಟವೆ ಈ ಅಂಧಂತಮದಿಂದ ಅವರೀಗ ಎದ್ದೇಳಬೇಕು, ಸರ್ವೋದಯದ ಹಾದಿಯಲ್ಲಿ ಜನರನ್ನೊಯ್ಯುವ ಮುಂದಾಳುಗಳೆನಿಸುವ ಧೈರ್ಯ ಸಾಹಸಗಳನ್ನು ತಳೆಯಬೇಕು. 'ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಪಕರಣೇ' ಎಂಬುದನ್ನೂ 'ಸಾಹಸೇ ಶ್ರೀರ್ನಿವಸತಿ' ಎಂಬುದನ್ನೂ ಅನುಸರಿಸಬೇಕು. ಮಧ್ಯವರ್ಗದ ತಾಟಸ್ಥ್ಯವೆಂದರೆ ಅದಿ ಸಮಾಜದ ಪ್ರಗತಿಯ ಸ್ತಂಭನವೆನಿಸುತ್ತದಲ್ಲವೆ?

— ಸಮಾಜಭೀಷಜ

ಕನ್ನಡಿಗರಿಗೆ ಸಂಸ್ಕೃತ

(೫ ನೆಯ ಪುಟದಿಂದ)

ಸಾಂಸ್ಕೃತಿಕ ಬೆಲೆ

ಅಖಿಲ ಭಾರತದ ದೃಷ್ಟಿಯಿಂದಲೂ ಹಿಂದೂ ಸಂಸ್ಕೃತಿಯ ದೃಷ್ಟಿಯಿಂದಲೂ ನೋಡಿದರೆ ಸಂಸ್ಕೃತದ ಬೆಲೆ ಮತ್ತೂ ದೊಡ್ಡದಾಗಿ ಕಾಣುತ್ತದೆ. ಯಾವ ಒಂದು ಜೀವನ ದರ್ಶನಕ್ಕಾಗಿ, ಯಾವ ಕಲೆ ಸಂಸ್ಕೃತಿಗಳಿಗಾಗಿ, ಯಾವ ಅಧ್ಯಾತ್ಮ ವಿಜ್ಞಾನಕ್ಕಾಗಿ ಪ್ರಪಂಚವು ಇಂಡಿಯಾ ದೇಶವನ್ನು ಗೌರವಿಸುತ್ತಿದೆಯೋ ಆ ಜ್ಞಾನಸಾಹಿತ್ಯವಿರುವುದು ಸಂಸ್ಕೃತದಲ್ಲಿ. ಭರತಖಂಡದ ಪೂರ್ವಚರಿತ್ರೆಯನ್ನು ತಿಳಿಯಬೇಕೆನ್ನುವವನೂ ಹಿಂದೂ ಧರ್ಮದ ಸ್ವಾರಸ್ಯವನ್ನು ಕಂಡುಕೊಳ್ಳಬೇಕೆನ್ನುವವನೂ ಕೃತಕೃತ್ಯನಾಗಲು ಸಂಸ್ಕೃತವನ್ನು ಬಿಟ್ಟರೆ ದಾರಿಬಿಟ್ಟವನಾಗುತ್ತಾನೆ. ಹೀಗೆ ಕನ್ನಡಿಗರು ಸಂಸ್ಕೃತಕ್ಕೆ ಗಮನಕೊಡಬೇಕೆನ್ನಲು ಇತರ ಸ್ವತಂತ್ರ ಕಾರಣಗಳೂ ಇವೆ.

೩

ಆದರೆ ಸಂಸ್ಕೃತ ಕಷ್ಟ, ಅದರ ಹೊರೆಯನ್ನು ನಮ್ಮ ಜನಸಾಮಾನ್ಯ ವರ್ಗಗಳ ವಿದ್ಯಾರ್ಥಿಗಳು ಹೊರಲು ಶಕ್ತರೆ? ಆ ಭಾರವನ್ನು ಸಾಧಾರಣ ವಿದ್ಯಾರ್ಥಿಗಳ ಮೇಲೆ ಹೇರಿದರೆ ಅದಕ್ಕಾಗಿ ಅವರು ಪಡುವ ಪ್ರಯಾಸದಲ್ಲಿ ಇತರ ಪಾಠಗಳ ಕಡೆಗೆ ಅವರ ಗಮನ ಕಡಮೆಯಾಗಿ, ಅವರ ವಿದ್ಯಾಭ್ಯಾಸ ಕುಂಠಿತವಾಗುವುದಿಲ್ಲವೆ?–ಎಂದು ಜನ ಕೇಳಬಹುದು.

ಕಷ್ಟ ನಿಜ, ಆದರೆ ತೀರ ಕಷ್ಟವಲ್ಲ

ಸಂಸ್ಕೃತ ಕಷ್ಟವೆಂಬುದು ಕೊಂಚಮಟ್ಟಿಗೆ ನಿಜ. ಆದರೆ ಅದು ಬೇಡವೆನ್ನುವವರು ಸಂಸ್ಕೃತ ಎಷ್ಟು ಕಷ್ಟವೆಂಬಂತೆ ಮಾತನಾಡುತ್ತಾರೋ ಅಷ್ಟು ಕಷ್ಟವೇನೂ ಅಲ್ಲ ಆ ಭಾಷೆ. ಹಾಗೆ ನೋಡಿದರೆ ಇಂಗ್ಲಿಷೂ ಕಷ್ಟವೆ ಅಲ್ಲವೆ? ಇಂಗ್ಲಿಷಿಗಾಗಿ ನಾವು ಸಹಿಸುವಷ್ಟು ಕಷ್ಟವನ್ನು ಸಂಸ್ಕೃತಕ್ಕಾಗಿಯೂ ಸಹಿಸಲು ನಾವು ಸಿದ್ಧರಾಗಬೇಕು. ಅಲ್ಪಸ್ವಲ್ಪ ಕಷ್ಟಕ್ಕೆ ಸಿದ್ಧರಾಗಿರದವರಿಗೆ ಯಾವ ವಿದ್ಯೆಯೂ ವಶವಾಗಲಾರದು. ಯಾವ ಯಾವ ಜನವರ್ಗಗಳವರು ಸಂಸ್ಕೃತ ಕಷ್ಟವೆಂದು ಈಗ ತಿಳಿದುಕೊಂಡಿದ್ದಾರೋ ಅವರು ಮೊದಲು ಸಂಸ್ಕೃತ ತಮಗೆ ಅತ್ಯಂತಾವಶ್ಯವೆಂಬುದನ್ನು ಮನಸ್ಸಿಗೆ ತಂದುಕೊಂಡು, ತಾವು ಸಂಸ್ಕೃತವನ್ನು ಸಾಧಿಸಿಕೊಳ್ಳದೆ ಬಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿಕೊಳ್ಳಬೇಕು. ಅವರು ಹಾಗೆ ಮನಸ್ಸಿದ್ಧತೆಯನ್ನು ಮಾಡಿಕೊಂಡರೆ ಸಂಸ್ಕೃತ ಪಾಠಕ್ರಮವನ್ನು ಕೂಡಿದಷ್ಟು ಸುಲಭ ಮಾಡಿಕೊಡುವುದು ವಿದ್ಯಾಬೋಧಕರ ಕರ್ತವ್ಯವಾಗುತ್ತದೆ.

ಪ್ರಕೃತ ಲೇಖಕನ ಸಿದ್ಧಾಂತದ ಮಾತು ಇದು:—

(೧) ಕನ್ನಡಿಗರಿಗೆ ಸಂಸ್ಕೃತವು ಅತಿ ಕಷ್ಟವಲ್ಲ.

(೨) ಸಂಸ್ಕೃತವನ್ನು ಪಾಠಶಾಲೆಗಳ ಮೊದಮೊದಲನೆಯ ತರಗತಿಗಳಲ್ಲಿ ಅದೊಂದು ಪ್ರತ್ಯೇಕ ವಿಷಯವೆಂದು ಇಟ್ಟುಕೊಳ್ಳದೆ, ಅದನ್ನು ಕನ್ನಡ ಪಾಠದ ಒಂದು ಅಂತರ್ಭಾಗವೆಂದೇ ಎಣಿಸಬೇಕು.

(೩) ಮೊದಮೊದಲು– ಲೋಅರ್ ಸೆಕೆಂಡರಿಯ ವರೆಗೂ–ಸಂಸ್ಕೃತದ ವ್ಯಾಕರಣ ಭಾಗಕ್ಕೆ ಹೆಚ್ಚು ಗಮನ ಕೊಡಬೇಕಾದದ್ದಿಲ್ಲ. ಕನ್ನಡ ಗದ್ಯ ಪದ್ಯ ಗ್ರಂಥಗಳಲ್ಲಿ ಬರುವ ಸಂಸ್ಕೃತ ಪದಗಳ ರೂಪ ಅರ್ಥಗಳನ್ನು ವಿವರಿಸಿ ಬೋಧಿಸುವುದರ ಮೂಲಕವೇ ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಪರಿಚಯ ಮಾಡಿಸಬಹುದು.

(೪) ಹೈಸ್ಕೂಲು ತರಗತಿಗಳಲ್ಲಿ ಕನ್ನಡದ ಜೊತೆಗೆ ಒಂದು ಅತಿ ಸುಲಭವಾದ ಸಂಸ್ಕೃತ ಗದ್ಯ ಪದ್ಯ ಪುಸ್ತಕವನ್ನು ಪಾಠಕ್ಕಿರಿಸಿ, ಆ ಮೂಲಕ ವ್ಯಾಕರಣಾಂಶಗಳಲ್ಲಿ ಬಹು ಸಾಮಾನ್ಯವಾದ ಮತ್ತು ಸರಳವಾದ ಮೂಲಾಂಶಗಳನ್ನು ಹೇಳಿಕೊಡಬಹುದು. ಅದುವರೆಗೂ ಸಂಸ್ಕೃತ ವ್ಯಾಕರಣ ವಿಚಾರಗಳನ್ನು ಕನ್ನಡ ವ್ಯಾಕರಣದ ಮೂಲಕವೇ ತಿಳಿಯಪಡಿಸಬೇಕು.

ಈ ಮೇಲಿನ ಮಾತು ಸಂಸ್ಕೃತವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳದಿರುವ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸತಕ್ಕದ್ದು. ಯಾರು ಲೋಅರ್ ಸೆಕೆಂಡರಿಗೆ ಹಿಂದೆಯೇ ಸಂಸ್ಕೃತವನ್ನು ಪ್ರತ್ಯೇಕ ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಕನ್ನಡದ ಅಥವಾ ಇತರ ದೇಶಭಾಷೆಯ ಜೊತೆಗೆ ಸಂಸ್ಕೃತವನ್ನೂ ಇಂಗ್ಲಿಷಿನಂತೆ ಒಂದು ಪ್ರತ್ಯೇಕ ವಿಷಯವನ್ನಾಗಿ ಇರಿಸಿಕೊಂಡಿರುತ್ತಾರೆಯೋ ಅಂಥವರ ಸಂದರ್ಭಕ್ಕೆ ಈ ಮೇಲಣ ವಿನಾಯಿತಿಯ ಏರ್ಪಾಟು ಅನಾವಶ್ಯಕವಾಗುತ್ತದೆ. ಅಂಥವರ ಸಂಖ್ಯೆ ಹೆಚ್ಚಾದಷ್ಟೂ ಒಳ್ಳೆಯದೇ.

(ಬೆಂಗಳೂರಿನ "ಸಾರ್ವಜನಿಕ" ಮಾಸಿಕದಿಂದ)

ರೂಪರಂಗ

ಭಾರತದಲ್ಲಿ ವಾರ್ತಾಚಿತ್ರಗಳು

ಸುದ್ದಿಗಳನ್ನು ಸಿನೆಮಗಳಲ್ಲಿ ಪ್ರದರ್ಶಿಸುವುದು ಇಂದಿನ ಹೊಸ ಪದ್ಧತಿ. ಭಾರತ ಸರಕಾರವೂ ಈ ಕ್ರಮವನ್ನು ಬಳಕೆಗೆ ತರಲು ಯತ್ನಿಸುತ್ತಿದೆ. ಸಾಮಾನ್ಯ ಜನರಿಗೆ ವಿಶಿಷ್ಟ ಸಂಗತಿಗಳ ಮತ್ತು ಪರಿಸ್ಥಿತಿಗಳ ಅರಿವಾಗುವಂತೆ ಚಿತ್ರವನ್ನು ಮನದಟ್ಟು ಮಾಡಿಕೊಡುವುದೇ ಇವುಗಳ ಗುರಿ.

ಸಶಸ್ತ್ರ ಬಲಗಳ ಚಿತ್ರಗಳು

Vigil in the Snows– ಮಂಜಿನಲ್ಲಿ ಕಾವಲುಗಾರಿಕೆ ಎಂಬುದು ಮೇಲೆ ಹೇಳಿದಂಥ ಒಂದು ಚಿತ್ರ. ಇದು ಕಾಶ್ಮೀರದಲ್ಲಿ ಯುದ್ಧ ಮಾಡುತ್ತಿದ್ದ ನಮ್ಮ ಸೈನಿಕರ ಕಾರ್ಯಗಳನ್ನು, ನಿತ್ಯ ಜೀವನವನ್ನು ಪ್ರದರ್ಶಿಸುತ್ತದೆ. ಗುಂಡು ಹೊಡೆಯುವ ಮತ್ತು ಪರ್ವತಾರೋಹಣ ಮಾಡುವ ಅವರ ವಿವಿಧ ವ್ಯಾಯಾಮಗಳನ್ನು ಇದರಲ್ಲಿ ಕಾಣಬಹುದು. ಒಂದು ಶತ್ರುಸ್ಥಾನದ ಮೇಲೆ ದಾಳಿ ಮಾಡಿದ ಸಂಗತಿಯೂ ಬಂದಿದೆ. ಅದನ್ನು ಮಾತ್ರ ಚೆನ್ನಾಗಿ ತೋರಿಸಲಾಗುತ್ತದೆ. ಯೋಧರ ವಿನೋದ ರೀತಿಗಳು ಮುಂತಾದವನ್ನು ಮಾತ್ರ ಸ್ವಾರಸ್ಯವಾಗಿ ಚಿತ್ರಗ್ರಹಣ ಮಾಡಲಾಗಿದೆ. ಇದರಲ್ಲಿಯ ಸಂಗೀತವಂತೂ ಮಕ್ಕಳ ಕೂಟಕ್ಕೆ ಯೋಗ್ಯವಷ್ಟೇ ಅಲ್ಲದೆ ಶೂರರ ಪರಾಕ್ರಮಗತಿಗೆ ಎಳ್ಳಷ್ಟೂ ಯೋಗ್ಯವಾಗಿಲ್ಲವೆಂದು ಕೆಲವರ ಮತ.

'ನಾಳಿನ ನಾವಿಕರು' ಎಂಬುದು ಮತ್ತೊಂದು ವಾರ್ತಾಚಿತ್ರ. ಇದು ಸಾಧಾರಣ ಚೆನ್ನಾಗಿದೆ. ಇದರಲ್ಲಿಯ ಮುಖ್ಯ ದೋಷ ಒಂದೇ ಒಂದು: ನಾವಿಕ ಕಲಾಭ್ಯಾಸಿಗಳ ಉತ್ಸಾಹ ಸಾಹಸಾದಿಗಳನ್ನು ಚಿತ್ರಿಸುವುದರಲ್ಲಿ ಇದು ಹಿಂದೆ ಬಿದ್ದಿದೆಯೆಂದು ಕಾಣುವಂತಿದೆ. ಛಾಯಾಗ್ರಹಣ ತಂತ್ರದಲ್ಲಿ ಸಾಕಷ್ಟು ನೈಪುಣ್ಯವನ್ನು ಪ್ರದರ್ಶಿಸಿಲ್ಲವೆಂದು ಕೆಲವರೆನ್ನಬಹುದು. ಅದರಿಂದ ಕಲ್ಪನಾಹೀನವೂ ಅಸಮಗ್ರವೂ ಆದ ಹಡಗುಗಳ ಚಲನವಲನಗಳನ್ನು ಕಂಡು ಬೇಸರಕ್ಕೀಡಾಗುವಂತಾಗಿದೆ, ಸಂಗೀತ ಶೈಲಿ ಅಸಾಂದರ್ಭಿಕವೆಂದು ತೋರುತ್ತದೆ. ಆದರೆ ವಾರ್ತಾಕಥನ ಮಾತ್ರ ಬಹಳ ವಿವರಪೂರ್ಣವೂ ರಸವತ್ತಾದುದೂ ಎನಿಸಿದೆ.

ಗುರುದೇವನ ವಿದ್ಯಾಪೀಠ

"ಶಾಂತಿನಿಕೇತನ"ವನ್ನು ಕೇಳಿಬಲ್ಲವರಿಲ್ಲವೆ? ಆ ಮಹಾವಿದ್ಯಾಪೀಠದ ಚಟುವಟಿಕೆಯನ್ನು ಚಿತ್ರಿಸಲುಹೋಗಿ ಅಯಶಸ್ವಿಯಾಗಿರುವುದು ಶೋಚನೀಯವಾಗಿದೆ. ಇದರಲ್ಲಿ ವರ್ಗದಿಂದ ವರ್ಗಕ್ಕೆ ಮುಂದುವರಿಯುವ ಒಂದು ಭೇದದ ಬದಲಿಸುವ ದೃಶ್ಯದಲ್ಲಿ ಮತ್ತೇನೂ ಅಲ್ಲ. ಅಲ್ಲಿಯ ಅಪೂರ್ವ ಸುಂದರ ಮಾತುಕತೆಯ ನೋಟ ಸ್ವಲ್ಪ ಕಾಲ್ಪನಿಕ ತರವೆನಿಸುತ್ತದೆ. ಅದರ ಪಾಠ ಪ್ರವಚನ ಶಿಕ್ಷಣಕ್ರಮ ಮುಂತಾದವು ಅಸ್ಪಷ್ಟವಾಗಿವೆ. ಸ್ವತಃ ಕವಿವರ್ಯ ರವೀಂದ್ರರೇ "ಜನಗಣಮನ ಅಧಿನಾಯಕ ಜಯ ಹೇ" ಎಂಬ ಗೀತವನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿರುವುದು ನೋಡಲು ತುಂಬ ಚೆನ್ನಾಗಿದೆ. ಇದೊಂದೇ ಇಡಿ ಚಿತ್ರದಲ್ಲಿ ಚೆನ್ನಾದ ಭಾಗ. ಮಿಕ್ಕದ್ದೆಲ್ಲ ಅಷ್ಟಕ್ಕಷ್ಟೇ ಎನ್ನಬಹುದು.

ಪಾನಪ್ರತಿಬಂಧದ ಚರ್ವಿತ ಚರ್ವಣ ಪ್ರಚಾರ

ಮುಂಬಯಿಯ ಪಾನಪ್ರತಿಬಂಧ ಸಮಿತಿಯವರು "ಉದ್ಧಾರ" ಎಂಬ ಚಿತ್ರವನ್ನು ಮದ್ಯಪಾನ ನಿಷೇಧ ಪ್ರಚಾರಕ್ಕಾಗಿ ತಯಾರಿಸಿದ್ದಾರೆ. ಮದ್ಯಪಾನದಿಂದ ಉಂಟಾಗುವ ದುಷ್ಪರಿಣಾಮಗಳನ್ನು ಇದರಲ್ಲಿ ಕೊಡಲಾಗಿದೆ. ಒಂದು ಸಣ್ಣ ಕುಟುಂಬದಲ್ಲಿ, ಕುಡಿತದಿಂದ ಮನೆ ಯಜಮಾನ ಮನೆಗೆ ಕಷ್ಟನಷ್ಟಗಳನ್ನು ತಂದೊಡ್ಡಿದ್ದೇ ಕಥಾವಸ್ತು. ಕೆಲ ಅಪಘಾತ, ಕುಡಿಕರ ಕೂಟದ ಅಶ್ಲೀಲ ಇವುಗಳು ಜರುಗಿದ ಬಳಿಕ ಕಥೆ ಮಂಗಳಾಂತಕವಾಗಿ ಮುಗಿಯುವುದು. ಸಾಕ್ಷಾತ್ ಗಡಂಗು (ಪಡ್ಡಾಸೆ) ಗಳಲ್ಲಿ ಗ್ರಹಿಸಿದ ಛಾಯೆಗಳು ಚೆನ್ನಾಗಿ ಬಂದಿವೆ. ಸ್ಟುಡಿಯೋದಲ್ಲಿ ತೆಗೆದ ದೃಶ್ಯಗಳು ಅಷ್ಟೇನೂ ಚೆನ್ನಾಗಿಲ್ಲವೆನ್ನಲಾಗಿದೆ. ಪಾನಪ್ರತಿಬಂಧ ಪ್ರಚಾರದಲ್ಲಿ ಯಾವಾಗಲೂ ಮೇಲೆ ಹೇಳಿದಂತೆ ಯಜಮಾನನು ನೆಗೆಮಾರಿಯಾಗುವ ಅಂಶವನ್ನು ಸಾವಿರಸಲ ಹೇಳಿ ಚರ್ವಿತ ಚರ್ವಣದ ಮೇರೆಯನ್ನು ಮೀರಲಾಗಿದೆ. ವಿಶಿಷ್ಟ ಸನ್ನಿವೇಶಗಳ ಚಿತ್ರಣ, ಕುಡಿಕತನದ ಅನಿವಾರ್ಯ ಕಾರಣ, ವ್ಯಕ್ತಿನಿಷ್ಠ ಸಹಾನುಭೂತಿಪರ ವಿಮರ್ಶೆ, ದುಷ್ಪರಿಣಾಮಗಳ ಪ್ರತೀಕಾರೋಪಾಯ ಇತ್ಯಾದಿಗಳ ಕಲ್ಪನೆ ಎಲ್ಲೆಲ್ಲೂ ಸಿಗದು. ಸರಕಾರದ ಪಾನಪ್ರತಿಬಂಧದ ಚಿತ್ರವಲ್ಲಿರಲಿ, ಅದರ ಪ್ರಚಾರಕ್ಕೇ ಮೀಸಲಾದ "ಸಂಜೀವನ" ದಲ್ಲಂತೂ ಇತ್ತೀಚೆಗೆ ಅಪಬುದ್ಧ ಲೇಖಕರ ಕಲ್ಪನಾಶೂನ್ಯವಾದ, ಹೇಳಿದ ವಸ್ತುವನ್ನೇ ಹೇಳುವ, ಸ್ಥೂಲ ಭಾವಗರ್ಭಿತವಾದ, ಹಲವೆಡೆ ವ್ಯಾಕರಣಛಂದಗಳಿಗೆ ತಿಲಾಂಜಲಿಯಿತ್ತ, ನೀರಸ, ಮರ್ಮಜ್ಞತಾಹೀನ ಎನಿಸುವ, ವರ್ಗರಹಿತ ಗದ್ಯಪದ್ಯಗಳು ಹೊರಬೀಳುತ್ತಿರುವುದನ್ನು ಕಂಡರೆ ಮತ್ತಷ್ಟು ಜುಗುಪ್ಸೆ ಹುಟ್ಟುತ್ತದೆ. ಅದರ ಲೇಖನಗಳ ವೈವಿಧ್ಯವನ್ನು ಕಂಡರೆ ಅದರ ಉದ್ದೇಶ ಇಂಥದೆಂಬುದು ಸಂಶಯಾಸ್ಪದವಾಗುತ್ತದೆ.

"ಚಿಕ್ಕವಸ್ತುವೊಂದು ಮರಣಕ್ಕೆ ಕಾರಣವಾಗುತ್ತದೆ" ಎಂಬುದು ಹಳ್ಳಿಯಲ್ಲಿ ಮಲೇರಿಯದಿಂದ ಆಗುವ ಅನಾಹುತಗಳನ್ನು ಪ್ರತಿಬಿಂಬಿಸುತ್ತದೆ. ಇದು ಬಹಳ ಚೆನ್ನಾಗಿ ಬಂದಿದೆ. "ಹೊಟ್ಟೆಗಾಗಿ ಹೋರಾಟ" ಎಂಬ ಚಿತ್ರ ಅಮೇರಿಕದ ತಯಾರಿಕೆ. ಇದರಲ್ಲಿ ಸಂಯುಕ್ತ ರಾಷ್ಟ್ರಸಂಘದ ಆಹಾರ ಮತ್ತು ಕೃಷಿಸಮಿತಿಯವರು ಈ ವರೆಗೆ ಮಾಡಿದ ಕಾರ್ಯಗಳ ವಿವರಣೆಯಿದೆ. ಇದು ಬಹಳ ಉತ್ತಮ ದರ್ಜೆಗೆ ಸೇರಿದ್ದು. ಇಂಥ ಚಿತ್ರಗ್ರಹಣ ಮಟ್ಟವನ್ನು ನಮ್ಮ ವಾರ್ತಾಚಿತ್ರಕಾರರು ಮುಟ್ಟಬೇಕಾಗಿದೆ.

ವಾರ್ತಾಚಿತ್ರಗಳಲ್ಲಾಗಲಿ ಶೈಕ್ಷಣಿಕ ಚಿತ್ರಗಳಲ್ಲಾಗಲಿ, ಭಾರತವಿನ್ನೂ ಅಂಬೆಗಾಲಿಕ್ಕುತ್ತಿದೆ. ಪ್ರಚಾರಾತ್ಮಕ ಕಲೆ ಅಥವಾ ಸಾಹಿತ್ಯಕ್ಕೆ ವಿಶೇಷ ಪ್ರತಿಭಾವಂತರ ಕೈವಾಡ ಅವಶ್ಯಕ. ರಸ್ಯಮಾನತೆಯ ಕಾವ್ಯದೃಷ್ಟಿಯನ್ನೂ ವಿಮರ್ಶಾತ್ಮಕ ಬೌದ್ಧಿಕ ದುಟಿಕಟ್ಟನ್ನೂ ಮಿಶ್ರಗೊಳಿಸುವ ವಸ್ತುವಿನ್ಯಾಸ ರಸಾವಹವೂ ಆಗದು; ಅದು ಕಾಂತಾಸಮ್ಮಿತಿಯೂ ಅಲ್ಲ, ಮಿತ್ರ ಅಥವಾ ಪ್ರಭುಸಮ್ಮಿತಿಯೂ ಅಲ್ಲ. ಇಂಥ ತ್ರಿಶಂಕುವರ್ಗದ ವಾಙ್ಮಯವನ್ನು, ಕಥಾದಿಸನ್ನಿವೇಶ ಚಿತ್ರಣವನ್ನು ಯಾವ ಮಾಧ್ಯಮದಲ್ಲಿ ಮಂಡಿಸಿದರೂ ಅದರಿಂದ ಫಲವಿಲ್ಲ. ಸರ್ವಾಂಗದಲ್ಲಿ ಚರ್ವಿತಚರ್ವಣ ಉಳಿಯುವುದು ವಿದ್ವದುದ್ವೇಗಕ್ಕೆ ಕಾರಣವಾಗದಿರದು. ಇಂದಿನ ಪ್ರಚಾರ ಕಲೆಯ ಕೃತಿಗಳು ಯುರೋಪಿಯನ್ನರನ್ನು ಕಂಡು ಅವರಿಗೆ ಗಂಧಾಕ್ಷತೆ ಹಚ್ಚಿ ಕಚ್ಚೆ ಪಂಜೆ ಉಡಿಸಿ ಶಾಲು ಹೊದ್ದಿಸಿ ನಿಲ್ಲಿಸಿದಂತೆ ತೋರುವುದು ಸರ್ವಸಾಧಾರಣವಾಗಿದೆ.

–ಕಲಾಭೀಷಜ

ಕರ್ನಾಟಕದಲ್ಲಿ

ಧಾರವಾಡ

ಭಾರತಮಿಲ್ ಮಜೂರರ ಬೋನಸ್ಸಿನ ಬೇಡಿಕೆ ಮತ್ತು ಕಾರಕೂನರನ್ನು ರೀಲರನ್ನು ಕಡಿಮೆ ಮಾಡಬೇಕೆಂಬ ವ್ಯವಸ್ಥಾಪಕರ ಬೇಡಿಕೆ ಇವುಗಳ ಬಗ್ಗೆ ಪಂಚಾಯತಿ ನಡೆಸಲು ಶ್ರೀ. ಅಭ್ಯಂಕರರು ಅನುನಯಕಾರರಾಗಿ ೫ ನೆಯ ತಾರೀಕಿನಲ್ಲಿ ಹುಬ್ಬಳ್ಳಿಗೆ ಬಂದರು. ಕಾರಕೂನರನ್ನು ಕಡಿಮೆ ಮಾಡುವ ವಿಷಯವನ್ನು ಕೋರ್ಟಿಗೊಯ್ಯಬೇಕು, ರೀಲರನ್ನು ಕಡಿಮೆ ಮಾಡಬಹುದು ಎಂದು ಎಂದು ಸಂಧಿಯಾಯಿತು. ಆದರೆ ಬೋನಸ್ಸಿನ ವಿಷಯ ಮಾತ್ರ ಇತ್ಯರ್ಥವಾಗಲಿಲ್ಲ.

ಜನೆಯತಾರೀಕಿನಲ್ಲಿ ವಿದ್ಯಾಖಾತೆಯ ನಿರ್ದೇಶಕರಾದ ಶ್ರೀ ಡಿ. ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ ಧಾರವಾಡದ ಭಾರತೀಯ ನೃತ್ಯಕಲಾ ಕೇಂದ್ರದ ಕಾರ್ಯಕ್ರಮವು ಟ್ರೇನಿಂಗ್ ಕಾಲೇಜಿನ ಸಭಾಂಗಣದಲ್ಲಿ ಜರುಗಿತು. ಕಲಾಭ್ಯಾಸಿಗಳ ಕೆಲ ನೃತ್ಯ ನಡೆದ ಬಳಿಕ ಶ್ರೀ ದ. ಬಾ. ಕುಲಕರ್ಣಿಯವರು ಸಾರ್ವಜನಿಕರ ಸಹಾಯವನ್ನು ಸಂಸ್ಥೆಗಾಗಿ ಬೇಡಿದರು. ಈ ಕಾರ್ಯಕ್ರಮ ಎ. ಡಿ. ಈ. ಐ ಟ್ರೇನಿಂಗ್ ಕೇಂದ್ರದ ವತಿಯಿಂದ ನಡೆದದ್ದು.

ಹರಿಜನರ ದೇವಾಲಯ ಪ್ರವೇಶದ ಮಸೂದೆಯ ಪುನರ್ವಿಮರ್ಶೆಗಾಗಿ ಹುಬ್ಬಳ್ಳಿಯ ಜೈನ ಸಮಾಜದವರು ತಾ. ೪ ರಲ್ಲಿ ಹರತಾಳವನ್ನಾಚರಿಸಿ, ಕಂಚುಗಾರ ಓಣಿಯಲ್ಲಿರುವ ಮಹಾಜನವಾಡಿಯಲ್ಲಿ ಸಭೆ ಸೇರಿ ಅದು ಹಿಂದುಗಳಲ್ಲದ ತಮಗೆ ಅನ್ವಯಿಸುವದಿಲ್ಲೆಂದು ಠರಾವು ಪಾಸು ಮಾಡಿ ಹಿಂದುಸ್ತಾನ ಸರಕಾರಕ್ಕೂ ಘಟನಾಸಮಿತಿಯ ಅಧ್ಯಕ್ಷರಿಗೂ ಮುಖ್ಯ ಮಂತ್ರಿಗಳಿಗೂ ಕಳಿಸಿದರು.

ಧಾರವಾಡದ ರಡ್ಡಿ ಸಹಕಾರಿ ಬ್ಯಾಂಕಿನ ಡಾಯರೆಕ್ಟರರ ಬೋರ್ಡಿನಲ್ಲಿ ೪ ಸ್ಥಳಗಳನ್ನು ಅವಿರೋಧವಾಗಿ ಆರಿಸಿ ಬಂದ ನಾಲ್ವರು ತುಂಬಿದರು ಎಂದು ಬ್ಯಾಂಕಿನ ಡೈರೆಕ್ಟರರಾದ ಶ್ರೀ ಡಿ. ಎಲ್. ಪಾಟೀಲರು ಪ್ರಕಟಿಸುತ್ತಾರೆ.

ಫಕೀರಪ್ಪ ಛಬ್ಬಿಯವರ ಮತ್ತು ಅಯ್ಯಪ್ಪ ಇವರು ಹಾಲಿನಲ್ಲಿ ನೀರು ಬೆರಸಿ ಮಾರಿದ್ದಕ್ಕೆ ಅವರಿಗೆ ಅನುಕ್ರಮವಾಗಿ ರೂ ೩೦ ಹಾಗೂ ರೂ ೧೦ ದಂಡವನ್ನು ಹುಬ್ಬಳ್ಳಿಯ ರೆಸಿಡೆಂಟ್ ಮ್ಯಾಜಿಸ್ಟ್ರೇಟರು ವಿಧಿಸಿದ್ದಾರೆ.

ವಿಜಾಪುರ

ವಿಜಾಪುರ ಜಿಲ್ಲಾ ಲೋಕಲ್ ಬೋರ್ಡಿನ ಸರ್ವ ಸದಸ್ಯರ ವಿಶೇಷ ಸಭೆ ೬ ನೆಯ ತಾರೀಕಿನಲ್ಲಿ ವಿಜಾಪುರದಲ್ಲಿ ಸೇರಿ, ಶ್ರೀ ಸೋಮನಗೌಡರ ಅಧ್ಯಕ್ಷತೆಯಲ್ಲಿ ಶ್ರೀ ದೇಶಪಾಂಡೆಯವರನ್ನು ಉಪಾಧ್ಯಕ್ಷ ಸ್ಥಳಕ್ಕೆ ಆರಿಸಿ, ಕರಡಿ ಗ್ರಾಮದ ಲಾಳಪ್ಪ ಕರಡಿಯವರು ತಂದೆಯ ಹೆಸರಿನಲ್ಲಿ ಹರಿಗೆ ಆಸ್ಪತ್ರೆಯನ್ನೂ ದವಾಖಾನೆಯನ್ನೂ ಕಟ್ಟಿಸಿಕೊಡಲು ಮುಂದೆ ಬಂದುದಕ್ಕಾಗಿ ಅವರನ್ನು ಅಭಿನಂದಿಸಿ, ಆಸ್ಪತ್ರೆಯ ಬಗ್ಗೆ ಸಿವಿಲ್ ಸರ್ಜನ್ನರ ಹತ್ತಿರ ವಿಚಾರನಡೆಸಬೇಕೆಂದು ನಿರ್ಧರಿಸಿತು.

ಪುಣೆಯ ಗೀರ್ವಾಣವಾಗ್ವಿಲಾಸಿನೀ ಸಭೆಯ ವಾರ್ಷಿಕೋತ್ಸವಕ್ಕೆ ಅಧ್ಯಕ್ಷರಾಗಿ ಹೋಗಿ ಅಲ್ಲಿಯ ಸಂಸ್ಕೃತ ಪಂಡಿತರಿಂದ ಸತ್ಕರಿಸಲ್ಪಟ್ಟು ಬಾಗಿಲುಕೋಟೆಗೆ ಹಿಂದಿರುಗಿದ ಪಂಡಿತ ಗಲಗಲಿ ರಾಮಾಚಾರ್ಯರು ಡಾ. ಸಂದಿಮುಕರ್ಜಿಯವರ ಈ ಸಲ ಬಾಗಿಲುಕೋಟೆಯಲ್ಲಿ ದಕ್ಷಿಣ ಭಾರತೀಯ ಸಂಸ್ಕೃತ ಸಾಹಿತ್ಯ ಸಮ್ಮೇಲನವನ್ನು ಕರೆಯುವ ಸೂಚನೆಮಾಡಿ, ಜಾಣ್ಮರರ ಅಭಿಪ್ರಾಯಕ್ಕಾಗಿ ಕಾಯುತ್ತಿದ್ದಾರೆ.

ದಕ್ಷಿಣ ಕನ್ನಡ

ಜಿಲ್ಲಾ ರಾಜಕೀಯ ಸಂತ್ರಸ್ತರ ಅರ್ಜಿ ಪರಿಶೀಲನಾ ಸಮಿತಿಯು ದಿನಾಂಕ ೧ ರಂದು ಮಂಗಳೂರಿನಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರುಗಿ ಜಲವತಿಗೆ ಭೂದಾನ ಮಾಡಲಾಯಿತು. ನಾಟ-ಪಹಿಕಳೃಷಿ ಮಾಡಲು ಒಂದೆಡೆಯಲ್ಲೇ ೧೧೦ ಎಕ್ರೆಗಳಿಗೂ ಮೇಲ್ಪಟ್ಟ ಭೂಮಿಯನ್ನು ಕೇಳಿದ ಶ್ರೀಗಳ ದ ಕಮಲಾದೇವಿ ಯು. ಶ್ರೀನಿವಾಸ ಮಲ್ಯ, ಎಚ್. ನಾರಾಯಣ ರಾವ್, ಹಿ. ರಾಮರಾಯ ಮಲ್ಯ ಮುಂತಾದ ೨೦ ಕುಂದಿಗೆ ಒಂದೇ ಕಡೆಯಲ್ಲಿ ೯೯ ಎಕ್ರೆ ಕೊಡಲಾಯಿತು.

ದಿನಾಂಕ ೨ ರಂದು ಬೆಳಿಗ್ಗೆ ಮಂಗಳೂರಿನ ನೇತ್ರಾವತಿ ಹೊಳೆಯಲ್ಲಿ ಸುಮಾರು ೨೮ ಜನರಿರುವ ಒಂದು ಕಡುವಿನ ದೋಣಿಯು ಮುಗುಚಿ ಬಿದ್ದು ದೋಣಿಯಲ್ಲಿದ್ದವರೆಲ್ಲ ನೀರು ಪಾಲಾದರು. ಕೂಡಲೇ ಇದನ್ನು ಕಂಡ ಕೆಲವರು ಅವರನ್ನು ಬದುಕಿಸಲು ಯತ್ನಿಸಿದರು. ಈ ಪ್ರಯತ್ನದಲ್ಲಿ ೯ ಮಂದಿಯನ್ನು ಬದುಕಿಸಲಾಗಿದೆ. ನೀರು ಪಾಲಾದವರಲ್ಲಿ ೧೪ ಮಂದಿಯ ದೇಹಗಳೂ ಅವಶೇಷಗಳೂ ಸಿಕ್ಕಿವೆ ಮಂಗಳೂರಿನಲ್ಲಿ ಇದೀಗ ಎರಡನೆಯ ದುರಂತ.

ಮಂಗಳೂರು ತಾಲೂಕಿನ ಮಂಜಿ ಗ್ರಾಮಕ್ಕೆ ಜಿಲ್ಲಾ ಬೋರ್ಡಿನವರು ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿರುವರು: ಆಸ್ಪತ್ರೆಯ ಉದ್ಘಾಟನೆ ದಿನಾಂಕ ೩೧ ರಂದು ಆದಾಗ ಮಂಗಳೂರಿನ ವಕೀಲರು ಶ್ರೀ॥ ಕೆ. ಆರ್. ಆಚಾರ್ ರವರು ಅಧ್ಯಕ್ಷರಾಗಿದ್ದರು. ಈ ಆಸ್ಪತ್ರೆಯ ಕಟ್ಟಡವನ್ನು ಗ್ರಾಮಸ್ಥರಾದ ಶ್ರೀ. ಎಂ. ಎಸ್. ಆಚಾರ್ ಅವರು ಉಚಿತವಾಗಿ ಒದಗಿಸಿ ಕೊಟ್ಟಿರುತ್ತಾರೆ.

ಉತ್ತರ ಕನ್ನಡ

ಉ. ಕ. ಜಿಲ್ಹೆಯಲ್ಲಿ ಸರ್ವೋದಯ ಕಾರ್ಯಕ್ಕಾಗಿ ಅಂಕೋಲೆ ತಾಲೂಕಿನ ೪೦ ಹಳ್ಳಿಗಳ ಗುಂಪು ಆರಿಸಲ್ಪಟ್ಟಿದೆ. ಈ ಹಳ್ಳಿಗಳಲ್ಲಿ ಸರ್ವೋದಯ ಸಾಧಿಸಲು ಸ್ವಯಂಸೇವಕರನ್ನು ತರಬೇತು ಮಾಡಲು ಉ. ಕ. ಗ್ರಾಮ ಸೇವಾ ಸಮಿತಿಯ ಕೇಂದ್ರದಲ್ಲಿ ಸಪ್ಟಂಬರ ೩ ನೆಯ ವಾರ ಸರ್ವೋದಯ ಗ್ರಾಮಸೇವಕ ವಿದ್ಯಾಲಯವು ತೆರೆಯಲ್ಪಡುವುದು. ವಿದ್ಯಾಲಯದಲ್ಲಿ ಒಟ್ಟು ೩೦ ಜನರನ್ನು ಶಿಕ್ಷಣಕ್ಕಾಗಿ ಆರಿಸಲಾಗುವುದು.

ಕಾರವಾರದಲ್ಲಿ ಬಾನ ಪ್ರತಿಬಂಧಕ ಗೃಹ ರಕ್ಷಕರ ಸ್ಥಾಯೀ ಪಡೆಯನ್ನು ನಿರ್ಮಿಸಲು ಪ್ರಚಾರ ಸಾಗಿಸಲು ಅಧಿಕಾರಿಗಳನ್ನು ನಿಯಮಿಸಬೇಕೆಂಬುವಾಗಿ ಸರಕಾರಕ್ಕೆ ಕೇಳಿಕೊಳ್ಳಲಾಯಿತು.

ಕನ್ನಡ ಸಂಸ್ಥಾನ

ಮೈಸೂರನ್ನೊಳಗೊಂಡ ಕರ್ನಾಟಕ ಏಕೀಕರಣದ ಮಹತ್ವ ಮತ್ತು ಅವಶ್ಯಕತೆಗಳನ್ನು ಮೈಸೂರು ಘಟನಾಸಮಿತಿಗೆ ಅರುಹಲು ದಾವಣಗೆರೆಯಲ್ಲಾದ ಕರ್ನಾಟಕ ಯುವಕ ಪರಿಷತ್ತಿನ ಶಿಷ್ಟಮಂಡಲವೊಂದು ಶ್ರೀ ಕೆ. ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ ಮೈಸೂರಿಗೆ ಪ್ರಯಾಣ ಬೆಳೆಸಿತು.

ಅರಸೀಕೆರೆಯ ಕಸ್ತೂರಿಬಾ ಗಾಂಧಿಸ್ಮಾರಕ ಸಂಸ್ಥೆಯ ಪರವಾಗಿ ಗ್ರಾಮಸೇವಿಕೆಯರ ಶಾಲ್ಯನೆಯ ತಂಡದ ಶಿಕ್ಷಣವು ಇಂದಿನಿಂದ ಮೂರು ತಿಂಗಳ ಅವಧಿಯಲ್ಲಿ ಪ್ರಾರಂಭವಾಗುವದು. ಶಿಕ್ಷಣಪಡೆಯಬಯಸುವವರು ಕನಿಷ್ಠಪಕ್ಷ ಮಾಧ್ಯಮಿಕಶಾಲಾಪರೀಕ್ಷೆಯಲ್ಲಾದರೂ ಉತ್ತೀರ್ಣರಾಗಿರಬೇಕು.

ಮೈಸೂರು ಸಂಸ್ಥಾನದಲ್ಲಿ ದಿವಾನ ಹುದ್ದೆಯನ್ನು ರದ್ದುಗೊಳಿಸಿ ಮುಖ್ಯ ಮಂತ್ರಿಗಳ ಕೈಯಲ್ಲಿ ಅಧಿಕಾರಗಳನ್ನು ಒಪ್ಪಿಸುವ ಘೋಷಣೆಯನ್ನು ಮಹಾರಾಜರು ಹೊರಡಿಸಿದ್ದಾರೆ. ಇದರೊಡನೆ ಸರ್ ಅರ್ಕಾಟ ರಾಮಸ್ವಾಮಿ ಮುದಲಿಯಾರರು ನಿವೃತ್ತರಾದರು.



ಆಂಗ್ಲ ಅಕ್ಷರ ಮಾಲೆಯ ಎಲ್ಲ ಅಕ್ಷರಗಳನ್ನೂ ಈ ಮುದ್ರೆಯಲ್ಲಿ ಕಾಣಬಹುದು.

ಭಾರತದ ಸಶಸ್ತ್ರ ಬಲಗಳು

(೯ ನೆಯ ಪುಟದಿಂದ)

ವಾಗಿದ್ದ ಭಾರತದ ನೌಕಾಬಲ ವಿಭಜನೆಯಿಂದ ಇನ್ನಷ್ಟು ಬಲಗುಂದಿತು. ಅದನ್ನು ಸಮರ್ಥ ಸಮರಬಲವಾಗಿ ಮಾಡುವ ಸಲುವಾಗಿ ಹತ್ತು ವರ್ಷದ ಯೋಜನೆಯೊಂದು ಸಿದ್ಧವಾಗಿದೆ.

ಕರಾಚಿಯಲ್ಲಿದ್ದ ನೌಕಾ ವಿದ್ಯಾಲಯ ನಮ್ಮ ಕೈಬಿಟ್ಟದ್ದರಿಂದ ವಿಶಾಖ ಪಟ್ಟಣದಲ್ಲಿ ಒಂದು ಶಾಲೆ ತೆರೆಯಲಾಯಿತು. ಅದು ಪೂರ್ಣ ರೂಪದ ನೌಕಾ ಕಾಲೇಜಾಗಿ ವಿಸ್ತರಿಸಲ್ಪಡಲಿದೆ. ಲೋಣಾವಳದ ಯಾಂತ್ರಿಕ ತರಬೇತಿ ಸಂಸ್ಥೆಯೂ ವಿಸ್ತೃತವಾಗುವದು. ಆ ಮೇಲೆ ನಮ್ಮ ನಾವಿಕರನ್ನು ತರಬೇತಿಗಾಗಿ ಬ್ರಿಟನ್ನಿಗೆ ಕಳಿಸುವದು ತಪ್ಪೀತು. ಕೊಚ್ಚಿಯಲ್ಲಿಯೂ ಅನೇಕ ನೌಕಾಶಾಲೆಗಳನ್ನು ಸ್ಥಾಪಿಸಿದ್ದು ಜಾಮನಗರ, ಮೈಸೂರುಗಳಲ್ಲಿಯೂ ಅಂಥವನ್ನು ತೆರೆಯುವ ವಿಚಾರವಿದೆ. ನೌಕಾವಿಮಾನವಿದ್ಯೆಯ ಮಹತ್ವವನ್ನರಿತು ಅದರಲ್ಲಿ ಶಿಕ್ಷಣ ಹೊಂದಲು ೧೦ ಜನ ನಾವಿಕರನ್ನು ಇಂಗ್ಲಂಡಿಗೆ ಕಳಿಸಲಾಗಿದೆ.

"ತೀರ" ಎಂಬ ತರಬೇತಿನೌಕೆಯಲ್ಲದೆ ವಿವಿಧ ಮಾದರಿಯ ಯುದ್ಧ ಹಡಗಗಳನ್ನು ಕೊಂಡು ಭಾರತೀಯ ನೌಕಾಪಡೆಗೆ ಸೇರಿಸಲಾಗಿದೆ. ಇವುಗಳಲ್ಲಿ "ದಿಲ್ಲಿ", "ರಜಪೂತ" "ರಣಜಿತ", "ರಾಣಾ" ಮೊದಲಾದವು ಉಲ್ಲೇಖಾರ್ಹವಾಗಿವೆ.

ತರಬೇತಿ ಹೊಂದಿದ ಜನರ ಕೊರತೆಯಿಂದಾಗಿ ನೌಕಾಪಡೆಯ ಹಿಂದೀಕರಣ ಅಷ್ಟು ರಭಸದಿಂದ ನಡೆಯುತ್ತಿಲ್ಲ. ಬ್ರಿಟಿಶ ಅಧಿಕಾರಿಗಳ ಸಹಾಯವಿಲ್ಲದೆ ಸಾಗಬೇಕಾದರೆ ಇನ್ನೂ ಕೆಲಕಾಲ ಬೇಕು.

ವಿಮಾನ ಬಲ

ಹಿಂದೀ ಸಶಸ್ತ್ರ ಬಲಗಳಲ್ಲಿ ಅತಿ ಎಳೆಯದಾದ ವಿಮಾನ ಪಡೆಯಲ್ಲಿ ಭಾರತದ ಪಾಲಿಗೆ ಬಂದುದು ೬ ಹೋರಾಟದ ವಿಮಾನದಲಗಳು ಮತ್ತು ಒಂದು ಸಾರಿಗೆದಲ. ಆದರಿಂದೀಚೆಗೆ ಬ್ರಿಟನ್ನಿನಿಂದ ಹೊಸ ಜೆಟ್ ವ್ಯಾಂಪಾಯರ ಹೋರಾಟ ವಿಮಾನಗಳನ್ನೊಳಗೊಂಡು ಅನೇಕ ಹೊಸ ಯುದ್ಧ ವಿಮಾನಗಳನ್ನು ಕೊಳ್ಳಲಾಗಿದೆ. ವೈಮಾನಿಕರನ್ನು ಭರ್ತಿ ಮಾಡಿಕೊಳ್ಳಲು ಒಂದು ಪ್ರತ್ಯೇಕ ಸಂಸ್ಥೆಯನ್ನೇ ತೆರೆಯಲಾಗಿದೆ. ಮೊದಲಿದ್ದ ಕೊಯಮುತ್ತೂರು, ಜೋಧಪುರ, ಅಂಬಾಲಾ ವೈಮಾನಿಕ ಶಾಲೆಗಳನ್ನು ವಿಸ್ತರಿಸಲಾಯಿತು. ಜೋಧಪುರ, ಅಂಬಾಲಗಳ ಸಂಸ್ಥೆಗಳನ್ನು ವಿದ್ಯಾಲಯಗಳಾಗಿ ಮಾರ್ಪಡಿಸಿ ಒಂದು ಕಾಲೇಜು ಸ್ಥಾಪಿಸುವ ಸಂಕಲ್ಪವಿದೆ. ಕೊಡೆ ವೈಮಾನಿಕರ ತರಬೇತಿಗೆ ಆಗ್ರಾದಲ್ಲೊಂದು ಶಾಲೆ ತೆರೆದಿದೆ.

ವಿಮಾನ ಪಡೆಯ ಅಧಿಕಾರಿಗಳ ತರಬೇತಿ ನೀಲಗಿರಿಯ ವೈಮಾನಿಕ ಕಾಲೇಜಿನಲ್ಲಾಗುತ್ತಿದೆ. ಬೆಂಗಳೂರಿನ ಬಳಿ ಜಾಲಹಳ್ಳಿಯಲ್ಲಿ ವೈಮಾನಿಕ ಶಾಲೆ-ಕಾಲೇಜುಗಳನ್ನು ತೆರೆಯಲಾಗಿದೆ. ವಿಶೇಷ ತರಬೇತಿಗಾಗಿ ಆಗಾಗ್ಗೆ ಆಯ್ದ ವಿದ್ಯಾರ್ಥಿಗಳನ್ನು ಇಂಗ್ಲಂಡಿಗೆ ಕಳಿಸಲಾಗುತ್ತಿದೆ.

ವಿಮಾನ ಪಡೆಯ ಮುಖ್ಯಾಧಿಪತಿ ಮತ್ತು ಸಿಬಂದಿಯ ಮುಖ್ಯಸ್ಥರನ್ನು ಬಿಟ್ಟು ಉಳಿದ ಮುಖ್ಯ ಅಧಿಕಾರಿ ಸ್ಥಾನಗಳೆಲ್ಲ ಹಿಂದೀಕೃತವಾಗಿವೆ. ಉತ್ತಮವರ್ಗದ ಇಬ್ಬರು ತಂತ್ರಜ್ಞರನ್ನೊಳಗೊಂಡು ನಮ್ಮ ನೌಕಾಪಡೆಯಲ್ಲಿ ಇಂದು ಬರಿ ಹತ್ತು ಬ್ರಿಟಿಶ ಅಧಿಕಾರಿಗಳಿದ್ದಾರೆ.

ಕಾಶ್ಮೀರದ ಸಾಹಸ

ಕಾಶ್ಮೀರದ ಯುದ್ಧದಲ್ಲಿ ಹಿಂದೀ ನೆಲ ಪಡೆಯಂತೆ ವಿಮಾನಪಡೆಯೂ ಅಪ್ರತಿಮ ಸಾಹಸವನ್ನು ತೋರಿಸಿತು. ಅತ್ಯಂತ ಇಕ್ಕಟ್ಟಿನ ಸ್ಥಿತಿಗತಿಗಳಲ್ಲಿ ಭಾರತೀಯ ಸೇನಾಪಡೆ ವಿಶಾಲವಾದ ಪ್ರದೇಶದಲ್ಲಿ ಯುದ್ಧಮಾಡಿ ಶತ್ರುಗಳನ್ನು ಹಿಂಡಟ್ಟಿದ್ದಲ್ಲದೆ ಸಾವಿರಗಟ್ಟಲೆ ಮುಸ್ಲಿಂ ನಿರಾಶ್ರಿತರನ್ನು ಯೋಗ್ಯರೀತಿಯಲ್ಲಿ ಪುನರ್ನಿವೇಶನಗೊಳಿಸಿತು. ಇದಕ್ಕಾಗಿ ಅದು ಕಾಶ್ಮೀರಿಗಳ ಕೃತಜ್ಞತೆಗೆ ಪಾತ್ರವಾಗಿದೆ. ೧೨೦೦೦ ಅಡಿ ಎತ್ತರದ ಪ್ರದೇಶದಲ್ಲಿ ಸಶಸ್ತ್ರವಾಹನಗಳನ್ನು ಉಪಯೋಗಿಸಿ ಶತ್ರುಗಳನ್ನು ಓಡಿಸಿದ ಕೀರ್ತಿಗೆ ಅದು ಭಾಗಿಯಾಗಿದೆ. ೨೦೦೦೦ ಅಡಿಗಿಂತಲೂ ಹೆಚ್ಚು ಎತ್ತರದ ಪರ್ವತಶ್ರೇಣಿಗಳ ಸಂದಿನಿಂದ ಲೇಹಕ್ಕೆ ಪೂರೈಕೆಗಳನ್ನೊಯ್ದುದು, ಪೂಂಚ ನಗರದಿಂದ ೩೦೦೦೦ ಉಪವಾಸಿ ನಿರಾಶ್ರಿತರನ್ನು ಪಾರುಗೊಳಿಸಿದುದು, ೧೨,೦೦೦ ಅಡಿ ಎತ್ತರದ ಪರ್ವತದ ಅಂಚುಗಳಲ್ಲಿ ವಿಮಾನ ಇಳಿಸಿ ಲಾಡಖವನ್ನು ರಕ್ಷಿಸಿದ್ದು, ವಿಮಾನಪಡೆಯ ಶೌರ್ಯಕ್ಕೆ ಸಾಕ್ಷಿಯಾಗಿವೆ.

ಈಚೆಗೆ ಜ. ಕಲಾವಂತ ಸಿಂಗ, ಏರವೈಸ್ ಮಾರ್ಶಲ್ ಮುಕರ್ಜಿ ಮೊದಲಾದವರಿಂದೊಡಗೂಡಿದ ಶಿಷ್ಟಾಯಿಯೊಂದು ಬ್ರಿಟನ್, ಕೆನಡಾ, ಅಮೇರಿಕ, ಸ್ವಿಝರ್ಲಂಡುಗಳಿಗೆ ಭೆಟ್ಟಿಕೊಟ್ಟು ಅಲ್ಲಿನ ವಿಮಾನ ಶಿಕ್ಷಣ ಪದ್ಧತಿಗಳನ್ನು ಅಭ್ಯಸಿಸಿ ಬಂದುದಲ್ಲದೆ ಭಾರತದಲ್ಲಿ ಯುದ್ಧಸಾಮುಗ್ರಿ ಕಾರಖಾನೆಗಳಿಗೆ ಬೇಕಾದ ಯಂತ್ರೋಪಕರಣಗಳ ಕಾರಖಾನೆಯೊಂದನ್ನು ಸ್ಥಾಪಿಸಲು ಒಂದು ಸ್ವಿಸ್ ಕಂಪನಿಯೊಡನೆ ಒಪ್ಪಂದಮಾಡಿಕೊಂಡು ಬಂದುದು ನಮ್ಮ ಸಂರಕ್ಷಣದ ಪ್ರಗತಿಗೆ ಸಹಾಯವಾಗದಿರದು.

ಹಿಂದುಸ್ಥಾನದಲ್ಲಿ ಇತರ ಕಡೆಗಳಲ್ಲಿ ಜಾರಿಯಲ್ಲಿರುವ ಕೂಲಿಕಾರ ಕಾಯದೆಯನ್ನು ರಾಜಸ್ಥಾನದಲ್ಲೂ ಜಾರಿಗೆ ತರಲಾಗುವುದೆಂದು ಅಲ್ಲಿಯ ಕೂಲಿಕಾರ ಮಂತ್ರಿ ಶ್ರೀ ನರಸಿಂಗ ರಡವಾಕರು ಹೇಳಿದರು.

ಸ್ವಾತಂತ್ರ್ಯದ ಬಗ್ಗೆ ಗಾಂಧಿಯವರ ವಿಚಾರಗಳು

(೧) ಉತ್ಸವ ದಿನಾಚರಣೆ

೧೫-೮-೪೭ ರ ದಿನ ದೇಶಿಯಾ ಘಾಟದಲ್ಲಿ ಮರುದಿನವೇ ವಿದೇಶೀಯರ ದಾಸ್ಯಶೃಂಖಲೆಯಿಂದ ಮುಕ್ತಿಹೊಂದುವ ದಿನವೆಂದು ನಿರ್ಧರಿಸಲಾಗಿದೆ ಎಂದರು ಗಾಂಧೀಜಿ. ಆದುದರಿಂದ ಅದೊಂದು ಮಹಾಸುದಿನ. ಅದನ್ನು ನಾವು ಆಚರಿಸಲೇಬೇಕು. ಗಾಂಧಿಯವರ ಅಭಿಪ್ರಾಯದಲ್ಲಿ ಅದು ಎರಡೂ ಅಧಿರಾಜ್ಯಗಳು ದೊಡ್ಡದೊಂದು ಹೊಣೆಯನ್ನು ಹೊರಬೇಕಾದ ದಿನ. ದಿನವಿಡೀ ಉಪವಾಸ ಮಾಡಬೇಕು, ಅಖಂಡ ಭಾರತದ ಯೋಗಕ್ಷೇಮಕ್ಕಾಗಿ ಪ್ರಾರ್ಥನೆ ಜರುಗಿಸಬೇಕು, ಸಾಧ್ಯವಾದಷ್ಟು ಮಟ್ಟಿಗೆ ಅಂದಿನ ವೇಳೆಯನ್ನು ನೂಲುವುದರಲ್ಲಿ ಕಳೆಯಬೇಕು ಎಂಬುದು ಅವರು ಪ್ರತಿವ್ಯಕ್ತಿಗೂ ಬಿನ್ನವಿಸಿಕೊಂಡರು. ಏಕೆಂದರೆ, ಜನತಬಲ್ಲವರನ್ನು ಒಂದುಗೂಡಿಸಿದ್ದೂ ಅಗಣಿತ ನಿರುದ್ಯೋಗಿ ಸ್ತ್ರೀಪುರುಷರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟದ್ದೂ ಕೈಯಿಂದ ನೂಲುವ ಹತ್ತಿಯೇ ("ಹರಿಜನ", ೨೪-೮-೪೭)

(೨) ಸ್ವಾತಂತ್ರ್ಯ ಬಂದ ಈ ಕಾಲದಲ್ಲಿ

"ನನ್ನ ಅಭಿಪ್ರಾಯಗಳು ಎಂದಿನಂತೆಯೇ ಇವೆ. ಸ್ವತಂತ್ರ ಭಾರತದ ಪುನಾರಚನೆಯ ಯೋಜನೆಯಲ್ಲಿ ಹಿಗಿರುವಂತೆ ಅವರ ಹಳ್ಳಿಗಳು ನಗರಗಳನ್ನು ಅವಲಂಬಿಸಿರಬಾರದು; ಆದರೆ ನಗರಗಳು ಹಳ್ಳಿಗಳ ಪರವಾಗಿಯೇ, ಅವುಗಳ ಹಿತಸಾಧನೆಗಾಗಿಯೇ ಇರಬೇಕು. ಆದುದರಿಂದ ನೂಲುವ ಚರಕವು ಹೆಮ್ಮೆಯ ಕೇಂದ್ರಸ್ಥಾನವನ್ನು ಅಲಂಕರಿಸಬೇಕು; ಅದರ ಸುತ್ತ ಚೈತನ್ಯದಾಯಕವಾದ ಗ್ರಾಮೋದ್ಯಮಗಳು ಸುತ್ತುತ್ತಿರಬೇಕು." ("ಹರಿಜನ", ೩೧-೮-೪೬)

(೩) ಉಗ್ರ ಎಚ್ಚರಿಕೆ

"ಇವರಿಗೆ (ಘಟನಾ ಸಮಿತಿಯ ಸದಸ್ಯರಿಗೆ) ಸರ್ವಸಾಧಾರಣವಾದ ಒಂದು ಧ್ಯೇಯವಿಲ್ಲ. ಸ್ವಾತಂತ್ರ್ಯದ ಅರ್ಥದ ಬಗ್ಗೆ ಕೂಡ ಕಾಂಗ್ರೆಸ್ಸಿಗರಲ್ಲೇ ಒಮ್ಮತವಿಲ್ಲ. ಅಹಿಂಸೆ, ಅಥವಾ ಚರಕವನ್ನು ಹಿಡಿದು ಎಷ್ಟು ಜನರು ಅದೆ ಮಾಡಿಯಾರು, ವಿಕೇಂದ್ರೀಕರಣದಲ್ಲಿ ಶ್ರದ್ಧೆಯುಳ್ಳ ಎಷ್ಟು ಜನರು ಹಳ್ಳಿಯನ್ನು ಜೀವನದ ಕೇಂದ್ರವೆಂದು ಎಣಿಸಿಯಾರು— ಎಂದು ನಾನರಿಯೆ. ತದ್ವಿರುದ್ಧವಾಗಿ, ಭಾರತವೊಂದು ಮೊದಲ ದರ್ಜೆಯ ಸೈನಿಕ ಪ್ರಭುತ್ವವಾಗಬೇಕೆಂದು ಬಹಳ ಜನರ ಮನಸ್ಸಿನಲ್ಲಿದೆ; ಬಲಿಷ್ಠ ಕೇಂದ್ರ ಸರಕಾರವನ್ನು ರಚಿಸಿಕೊಂಡು ಅದು ವಿಂಕ್ಕೆಲ್ಲವನ್ನೂ ತನ್ನ ಸುತ್ತ ತಿರುಗಿಸಬೇಕೆಂದು ಹಲವರು ಬಯಸುವರು. ಎಂದು ನನಗೆ ಗೊತ್ತು. ಈ ಮತಘರ್ಷಣಗಳಲ್ಲಿ ಭಾರತವೇನಾದರೂ ಶುದ್ಧ ವಿಚಾರವನ್ನು ಆಧರಿಸಿ ಶುದ್ಧ ಕಾರ್ಯವೆಸಗುವುದರಲ್ಲಿ ನೇತೃವಾಗಬೇಕಾಗಿದ್ದರೆ, ದೇವರು ಬಂದು ಈ ದೊಡ್ಡ ಮನುಷ್ಯರ ಜಾಣತನವನ್ನು ಕದಡಿ ರಾಡಿಮಾಡಿ, ಹಳ್ಳಿಗರಿಗೆ ಅವರ ಕರ್ತವ್ಯ ಎನಿಸಿರುವಂತೆ ಸ್ವಾಭಿಪ್ರಾಯವನ್ನು ಪ್ರಕಾಶಿಸುವ ಸಾಮರ್ಥ್ಯವನ್ನು ದಯಪಾಲಿಸುವನೆಂಬುದು ನನಗೆ ಗೊತ್ತು." ("ಹರಿಜನ" ೨೮-೭-೪೬)

(೪) ಪ್ರಯೋಜನವಾದ ಮತ್ತು ಸರ್ವೋದಯ ದೃಷ್ಟಿಗಳು

"ಅತಿ ಹೆಚ್ಚು ಸಂಖ್ಯೆಯ ಜನರ ಅತಿ ಹೆಚ್ಚು ಹಿತ ಮತ್ತು ಸಮರ್ಥ ಮಾಡಿದ್ದು ಸಮರ್ಥನೀಯ. ಎಂಬ ನಿಯಮಗಳನ್ನು ನಾನು ನಂಬುವದಿಲ್ಲ. ಪ್ರತಿಯೊಂದು ವ್ಯಕ್ತಿಯ ಯೋಗಕ್ಷೇಮ, ಅಂದರೆ "ಸರ್ವೋದಯ" ಮತ್ತು "ದುರ್ಬಲರಿಗೆ ಮೊದಲು" ಎಂಬವೇ ಮಾನವನಿಗೆ ಯುಕ್ತವಾದ ನಿಯಮಗಳು. ನಾವು ನಮ್ಮನ್ನು ದ್ವಿಪಾದರೆಂದೂ ಮಾನವರೆಂದೂ ಕರೆದುಕೊಳ್ಳುತ್ತೇವೆ, ಆದರೆ ಇನ್ನೂ ಚತುಷ್ಪಾದ ಜಂತುಗಳ ಮತ್ತು ಪಶುಗಳ ಸ್ವಭಾವವನ್ನು ಬಿಡಲು ನಮಗೆ ಶಕ್ಯವಾಗಿಲ್ಲ. ಇದನ್ನು ಬಿಡುವದರಲ್ಲೇ "ಧರ್ಮ"ವಿದೆ." (ಮಹಾದೇವಭಾಯಿಯ ದಿನಚರಿಯಲ್ಲಿಯ ಉದ್ಧೃತ ಪತ್ರವೊಂದರಿಂದ ಸಂಪುಟ ೧,೧೦-೭-೩೨).

ಸ ಮ ರ್ಪ ಣೆ

ಆಗಸ್ಟನ ಪ್ರಥಮ ದಿನವು ಲೋಕಮಾನ್ಯ ತಿಲಕರನ್ನು ನೆನಪಿಗೆ ತಂದುಕೊಡುವಂತೆ ಆದರ್ಶಹದಿನೈದನೆಯ ದಿನಾಂಕವು ಮಹಾದೇವ ದೇಸಾಯಿಯನ್ನು ನನ್ನ ಸ್ಮೃತಿಪಥಕ್ಕೆ ತಂದುಕೊಡುತ್ತಿದೆ. ಇಬ್ಬರದೂ ರಾಷ್ಟ್ರಸೇವಾರ್ಪಿತ ಜೀವನ. ಒಂದು ತಲೆಮಾರಿಗಿಂತ ಹೆಚ್ಚು ಕಾಲ ಲೋಕಮಾನ್ಯರು ಎಡೆಬಿಡದೆ ಜನರಿಗೆ ತಿಳಿಯಹೇಳಲು ಹೆಣಗಿದ ಜನ್ಮಸಿದ್ಧ ಹಕ್ಕೆನಿಸುವ ಸ್ವಾತಂತ್ರ್ಯವನ್ನು ಸಾಧಿಸಲು ಸಾರ್ವಜನಿಕರ ಕಾರ್ಯರೂಪದ ಪ್ರಯತ್ನದಿಂದ ಸಾಗಿದ ಅಸಹಕಾರ ಚಳವಳಿಯ ಹುಟ್ಟೂ ಅವರ ಸಾವೂ ಒಟ್ಟಿಗೆ ಕೂಡಿದವು. ಆ ಚಳವಳಿ ದಿನೇ ದಿನೇ ಬೆಳೆದು ೧೯೪೨ ರ "ಭಾರತದಿಂದ ತೊಲಗಿರಿ" ಎಂಬ ಚಳವಳಿಯ ಮಟ್ಟವನ್ನು ಕೊನೆಯಲ್ಲಿ ಮುಟ್ಟಿತು; ಅದು ಮಹಾದೇವಭಾಯಿಯನ್ನು ಮೊದಲನೆಯ ಆಹುತಿಯನ್ನಾಗಿ ತೆಗೆದುಕೊಂಡಿತು. ಭಾರತೀಯ ಸ್ವಾತಂತ್ರ್ಯದ ತಾರೀಕೂ ಅವನ ಸಾವಿನ ತಾರೀಕೂ ಒಂದಾದವು.

೧೯೧೭ ರಲ್ಲಿ ಮಹಾದೇವಭಾಯಿ ಗಾಂಧಿಯವರನ್ನು ಕೂಡಿಕೊಂಡನು. ಆ ವರ್ಷ ಅವನಂತೆಯೇ ನಮ್ಮಲ್ಲಿ ಹಲವರು ಗಾಂಧಿಯವರ ಶಿಬಿರಕ್ಕೆ ಸೇರಿದ್ದರು; ಆದರೆ ಅವನಲ್ಲಿದ್ದಂಥ ಭಾವನೆ ಮತ್ತು ಅಂತಃಸ್ಫೂರ್ತಿಗಳ ಒತ್ತಾಯಕ್ಕೊಳಗಾಗಿ ಹಾಗೆ ಮಾಡಿದ್ದನ್ನು ನಾನು ಕಾಣೆ. ನಮ್ಮಲ್ಲಿ ಎಲ್ಲರಿಗೂ ದೇಶಸೇವೆಯ ಬಗ್ಗೆ ಅನೇಕ ಪೂರ್ವಸಿದ್ಧವಾದ ಕಲ್ಪನೆಗಳಿದ್ದವು. ಅವು ಸ್ಪಷ್ಟವಿದ್ದರೂ ಇದ್ದಿರಬಹುದು, ಅಸ್ಪಷ್ಟವಿದ್ದರೂ ಇದ್ದಿದ್ದಾವು. ಆದರೆ ಆ ಕಲ್ಪನೆಗಳಿಗೆ ಏನಾದರೊಂದು ಆಕಾರವಿತ್ತು.

ಒಮ್ಮೆ ನಾನು ಗಾಂಧಿಯವರೊಡನೆ ತಳಕು ಹಾಕಿಕೊಂಡದ್ದೇಕೆಂದು ಕುರಿತು ಮಹಾದೇವಭಾಯಿಯನ್ನು ಕೇಳಿದೆ. ಅದು ಸ್ವರಾಜ್ಯ ಸಾಧನೆಗಾಗಿಯೋ, ರಾಷ್ಟ್ರೀಯ ಶಿಕ್ಷಣಕ್ಕಾಗಿಯೋ, ಸ್ವದೇಶೀಯ ಸಹಕಾರಿ ಸಂಘಗಳ ಚಳವಳಿಗಾಗಿಯೋ, ಧರ್ಮಕ್ಕಾಗಿಯೋ ? ಅವನು ಹಿಂಜರಿಯದೆ ಉತ್ತರ ಕೊಟ್ಟ: **ಅದೆಂದರೆ ಸ್ವತಃ ಗಾಂಧಿಯವರೇ.** ಅವನು ಗಾಂಧಿಯವರ ಸನಿಹಕ್ಕೆ ಬಂದನು; ಅವರೇ ತನ್ನ ಗುರುವೆಂದೂ ಅವರಿಗಾಗಿಯೇ ತನ್ನ ಬಾಳು ಮೀಸಲೆಂದೂ ತಿಳಿದನು. ಬಾಪುವಿನ ಸೇವೆಯಲ್ಲೇ ಬದುಕನ್ನು ಕೊನೆಗೊಳಿಸಬೇಕೆಂಬುದರ ಹೊರತು ಬೇರೆಯ ಮಹತ್ವಾಕಾಂಕ್ಷೆಯೇ ಅವನಿಗಿರಲಿಲ್ಲ. ಒಂದು ವ್ಯಕ್ತಿಯ ದೇಹವು ಅದರ ಆತ್ಮಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುವಂತೆ ತನ್ನನ್ನೇ ತಾನು ಹಿಂಜರಿಯದೆ ಸಂಪೂರ್ಣವಾಗಿ ಯಾರಿಗಾದರೂ ಸಮರ್ಪಿಸಿಕೊಳ್ಳಬೇಕೆಂದು ಅವನ ಹೃದಯ ಬಹಳವಾಗಿ ಬಯಸಿತು.

ಜೀವವೇ ತಾನಾಗಿ ಹೋಗುವತನಕ ಅವನು ಎಷ್ಟು ನಿಷ್ಠೆಯಿಂದಲೂ ವಿಧೇಯತೆಯಿಂದಲೂ ಬಾಪುವಿಗೆ ಸೇವೆ ಸಲ್ಲಿಸಿದನೆಂಬುದು ನಮಗೆ ತಿಳಿದಿದೆ. ಅವನ ಅಂತ್ಯಕ್ರಿಯೆಯನ್ನು ಮಾಡಲು ಬಾಪುವನ್ನು ಒತ್ತಾಯಿಸಿದ ಸನ್ನಿವೇಶವು ಹಿಂದುಧರ್ಮದತಂದೆ ತನ್ನ ಮಗನಿಂದ ಪಡೆಯಲು ಆಶಿಸುವ ಸಂದರ್ಭಕ್ಕೆ ಉಚಿತವಾದುದಾಗಿತ್ತು. ಬಾಪುವಿನ ಶೌಚಭಾಂಡ. ಅಥವಾ ಬಟ್ಟೆಗಳನ್ನು ತೊಳೆಯುವದು, ಅವರ ಪತ್ರಗಳ ನಕಲು ತೆಗೆಯುವದು, ಅವರ ಸಾಮಾನನ್ನು ಹೊತ್ತುಕೊಂಡು ಹೋಗುವದು, ಅವರ ಸಂದೇಶವನ್ನು (ಬಾಪುವಿನ ರೋಗಿಗಾಗಲಿ, ವೈಸರಾಯರಿಗಾಗಲಿ) ಒಯ್ದು ಮುಟ್ಟಿಸುವುದು, ಅವರ ಪತ್ರಿಕೆಗಳನ್ನು ಸಂಪಾದಿಸಿ ಕೊಡುವುದು, ಅವರ ಬರಹಗಳನ್ನು ಅನುವಾದಿಸುವುದು, ಅವರ ಭಾವಗಳಿಗೆ ಅರ್ಥ ಹೇಳುವುದು ಮತ್ತು ಅದನ್ನು ತಿಳಿದಿ ಮಾಡುವುದು, ಸೂಕ್ಷ್ಮವಾದ ರಾಜಕೀಯ ವ್ಯವಹಾರದಲ್ಲಿ ಅವರ ಪರವಾಗಿ ಸಂಧಾನ ನಡೆಸುವುದು ಅಥವಾ ಇನ್ನಾವ ಕ್ಷುದ್ರ ಅಥವಾ ಮುಖ್ಯ ಕೆಲಸವನ್ನೇ ಆಗಲಿ ಬಾಪು ಮಾಡಹೇಳಿದಾಗ, ಮಹಾದೇವನೆಂದೂ ತನಗೆ ಅವರು ಅಂಥ ಕೆಲಸವನ್ನು ಮಾಡಲು ಜೀತದಾರನಾಗಿ ತಂದು ಭಾವಿಸಿದವನಲ್ಲ. ಗಾಂಧಿಯವರೇ ಸ್ವತಃ ೧೫-೮-೪೩ ರ "ಹರಿಜನ"ದಲ್ಲಿ "ಅವನ್ನು ಬಿಡ್ಡಾಗಲೆಲ್ಲ ತನ್ನನ್ನು ಶೂನ್ಯಸ್ಥಾನಕ್ಕೆ ಇಳಿಸಿಕೊಂಬ ಸಾಮರ್ಥ್ಯವಿರುವುದು ಮಹಾದೇವನ ಅತಿ ಮಹತ್ವದ ಲಕ್ಷಣವೆಂದು ನನಗನಿಸುತ್ತದೆ" ಎಂದು ಬರೆದಿದ್ದರು.

ಬಾಪು ಅವನಿಗೆ ಎಂಥೆಂಥ ಕೆಲಸ ಕೊಡುತ್ತಿದ್ದರು ಗೊತ್ತೇ? ಬಾಪು ಹೇಳಿದ ಪ್ರಕಾರ ಅವನು ಅಲಹಾಬಾದಿನಲ್ಲಿ ಪಂಡಿತ ಮೋತೀಲಾಲ ನೆಹರುಗಳ ಪತ್ರಿಕೆಯನ್ನು ಸಂಪಾದಿಸಿ, ಅದಕ್ಕಾಗಿ ಜೇಲಿಗೆ ಹೋದನು; ಬಾರ್ಡೋಲಿ ಬೋರ್ಸದುಗಳಲ್ಲಿ ಸರದಾರ ಪಟೇಲರಿಗೆ ಕಾರ್ಯದರ್ಶಿಯಾಗಿ ದುಡಿದನು; ದೇವಲಾಲಿಯಲ್ಲಿ ಆರೋಗ್ಯ ಸುಧಾರಣೆಗಾಗಿ ಇದ್ದ ಶ್ರೀ ಮಥುರಾದಾಸ ತ್ರಿಕಮಜಿಗೆ ಸಹವಾಸ ಸೌಖ್ಯವನ್ನೊದಗಿಸಿಕೊಟ್ಟನು, ಚಿಕ್ಕವರಿಗೂ ದೊಡ್ಡವರಿಗೂ ಬಾಲಪಾಠ ಹೇಳಿದನು; ಕಲ್ಪನೆಗೆ ಸಿಕ್ಕುವ ಎಲ್ಲ ವಿಷಯಗಳ ಮೇಲೂ ಗಾಂಧಿಯವರ ಪತ್ರವ್ಯವಹಾರವನ್ನು ಸಾಗಿಸಿದನು, ಸಂದರ್ಶನಕ್ಕಾಗಿ ಬಂದವರೊಡನೆ ಗಾಂಧಿಯವರಾಡಿದ ಮಾತುಗಳನ್ನು ಟಿಪ್ಪಣಿ ಮಾಡಿಕೊಂಡನು; ಅಲ್ಲದೆ, ಅವರು ಅತಿಥಿಗಳಾಗಿ ಬಂದಿದ್ದರೆ ಅವರಿಗೆ ಅನುಕೂಲ ಕಲ್ಪಿಸಿಕೊಡಲು ಸೊಂಟಕಟ್ಟಿ ನಿಲ್ಲುತ್ತಿದ್ದನು; ಆ ಅತಿಥಿಗಳನ್ನು ರೇಲ್ವೆ ನಿಲ್ದಾಣದಿಂದ ಕರೆದುಕೊಂಡು ಬರುವದು, ಅಲ್ಲಿಗೆ ಕಳಿಸಿಕೊಡುವುದು, ಮುಂತಾದ ಕೆಲಸಕ್ಕಾಗಿ ವರ್ಧಾದಿಂದ ಸೇವಾಗ್ರಾಮಕ್ಕೆ ಅತ್ತಿಂದಿತ್ತ ತಿಂಗಳುಗಟ್ಟಲೆ ತನಕ ಕಾಲು ನಡೆಯಿಂದಲೇ ಹೋಗಿ ಬರುತ್ತಿದ್ದನು. ಗಾಂಧಿಯವರ ಸಂದರ್ಶನವನ್ನು ಒದಗಿಸಿಕೊಡದುದಕ್ಕಾಗಿ ಅಥವಾ ಅವರಿಗೆ ಬರೆದ ಕಾಗದಕ್ಕೆ ಉತ್ತರ ಕಳಿಸದುದಕ್ಕಾಗಿ ದೂರಿಕೊಂಡ ಪತ್ರಕರ್ತನಿಗೂ ಅವರಿಗೂ ನಡುವೆ ವಿಘ್ನರೂಪಿಯಾಗಿ ನಿಂತ ತಾನು ಗರ್ವಿಷ್ಠನಾಗಿ ಆಚರಿಸಿದನೆಂದು ತನ್ನ ಮೇಲೆಯೇ ಅವನು ಗಾಂಧಿಯವರೆದುರು ದೂರು ತಂದಿದುತ್ತಿದ್ದನು! ಗಾಂಧಿಯವರು ಸ್ವತಃ ಸುಲಭಾರಾಧ್ಯರಾದ ಒಡೆಯರಾಗಿರಲಿಲ್ಲ. ತಮ್ಮ ಹತ್ತಿರವೇ ಉಳಿಯಲು ಬಯಸಿ ಬಂದವರ ಮೇಲೆ ಅವರ ಕಾಠಿನ್ಯ ಮತ್ತಷ್ಟು ಉಗ್ರತರವಾಗಿರುತ್ತಿತ್ತು. ಅವರು ನಿಕಟ ವರ್ತಿಗಳನ್ನು ಚೆನ್ನಾಗಿ ಅಳಿಸಲೂ ಬಲ್ಲವರಿದ್ದರು, ನಗಿಸಲೂ ಬಲ್ಲವರಾಗಿದ್ದರು. ಈ ನಿಯಮಕ್ಕೆ ಮಹಾದೇವಭಾಯಿ ಕೂಡ ಹೊರತಾಗಿರಲಿಲ್ಲ.

ಆದರೆ ಮನುಷ್ಯನಿಗೆ ತನ್ನ ದೇಹದ ದಾರ್ಢ್ಯದೊಡನೆ ಸಂತೋಷವೂ ಅದರ ಯಾತನೆಗಳೊಡನೆ ದುಃಖವೂ ಆಗುತ್ತಿದ್ದರೆ ಆ ದೇಹದಿಂದ ಅವನೇನು ಮಾಡಬಲ್ಲನು? ಗಾಂಧೀಜಿ ಮಹಾದೇವ ಭಾಯಿಗೆ ಅದೇ ಪ್ರಕಾರವಾಗಿದ್ದರು. ಶರೀರದಲ್ಲಿ ಮಹಾದೇವಭಾಯಿ ಬಾಪುವಿನ ಕೈಕಾಲಾಗಿದ್ದನು, ಕಣ್ಣು ಕಿವಿಗಳಾಗಿದ್ದನು; ಅವನು ಬಾಪುವಿನ ತರ್ಕಸರಣಿಗಳನ್ನೂ ಪ್ರತಿಬಿಂಬಿಸುತ್ತಿದ್ದನು. ಆದರೆ ಅವರಿಬ್ಬರ ಆಧ್ಯಾತ್ಮಿಕ ಸಂಬಂಧ ಮಾತ್ರ ಬೇರೆಯ ಬಗೆಯಾಗಿತ್ತು. ಬಾಪುವೇ ಅವನಿಗೆ ಸರ್ವಸ್ವವಾಗಿದ್ದರು. ಅವನು ಅವರನ್ನು ಬಿಟ್ಟಿರಲಾರದಾಗಿದ್ದನು. ನಿರಾಶೆಯ ಭರದಲ್ಲೊ, ಅಭಿಮಾನಭಂಗದ ಆವೇಶದಲ್ಲೊ, ತಾನು ಬಾಪುವಿನ ಸೇವಕನಾಗಿರಲು ಅಯೋಗ್ಯನೆಂದು ಬಗೆದು ಅವನು ಒಂದೆರಡು ಬಾರಿ ಹೊರಟುಹೋಗುವ ಕ್ಷಣಿಕ ನಿರ್ಧಾರವನ್ನು ಮಾಡಿದ್ದೂ ಇತ್ತು. ಆದರೆ ಆ ಪ್ರಯತ್ನಗಳು ಸಫಲವಾಗಲಿಲ್ಲ. ಅವನಿಗೆ ಗಾಂಧೀಜಿಯನ್ನು ಅಗಲುವುದು ಸಂಪೂರ್ಣ ಪ್ರಜ್ಞಾವಸ್ಥೆಯಲ್ಲಿ ತನ್ನ ಮೈದೊಗಲನ್ನು ಸುಲಿಸಿಕೊಳ್ಳುವುದರಷ್ಟೆ ಅಸಹನೀಯವಾಗಿತ್ತು. ಗಾಂಧೀಜಿಯಲ್ಲಾದರೂ ತಮ್ಮ ಜೀವಕ್ಕೋ ಆರೋಗ್ಯಕ್ಕೋ ಅಪಾಯಕರವಾದ ಕೆಲಸದಲ್ಲಿ ಪ್ರವೃತ್ತಿಯನ್ನು ತೋರಿದರೆ ಅವನು ಕಂಗಾಲಾಗಿ ಹೋಗುತ್ತಿದ್ದನು. ಬಾಪುವಿನ ಪ್ರಾಣ-ಆರೋಗ್ಯಗಳಿಗೆ ಕುತ್ತು ಬಂದಾಗ ತರ್ಕಬದ್ಧವಾದ ವಿಚಾರ ಅವನಿಗೆ ಅಶಕ್ಯಪ್ರಾಯವೇ ಆಗಿತ್ತು. ೧೯೪೦ ರಲ್ಲಿ ಯುದ್ಧದ ವಿರುದ್ಧ ವೈಯಕ್ತಿಕ ಸತ್ಯಾಗ್ರಹದ ಬದಲು ನೇರವಾಗಿ ಉಪವಾಸ ಹೂಡುವ ಗಾಂಧೀಜಿಯ ಸಂಕಲ್ಪವನ್ನು ಮಾರ್ಪಡಿಸುವಲ್ಲಿ ಯಶಸ್ವಿಯಾದುದು ಮಹಾದೇವ ದೇಸಾಯಿಯ ಪ್ರೇಮೋದ್ವೇಗಗಳೇ. ... ೯೪೨ ರ ಮುಂಬಯಿಯ ಅಧಿವೇಶನ ... ಪಕ್ಕಿಗೆ, ಆ ಪ್ರಸಂಗದಲ್ಲಿ ಗಾಂಧೀಜಿ ... ಉಪವಾಸ ಮಾಡುವರೋ ಎಂಬ ಭಯ ... ಮಹಾದೇವಭಾಯಿ ಎಂಥ ವಿಹ್ವಲತೆಯ ... ಪಗೆದಿರುವುಗಳನ್ನು ಹೊರತಿದ್ದ ... ಜೊತೆಗೆ ಇದ್ದವರೇ ಬಲ್ಲರು. ಗಾಂಧೀ... ತಾವು ಆ ವಿಚಾರವನ್ನು ತಳ್ಳಿ ... ಕೊಟ್ಟಿರುವುದಾಗಿ ಅವನಿಗೂ ಅವನ ... ರಿಗೂ ಮಾತುಕೊಟ್ಟಿದ್ದರೂ ದಿ... ಮಾನಸಿಕ ಪ್ರಭಾವಶೀಲದಿಂದ ... ಅವನು ಸಂಪೂರ್ಣವಾಗಿ ಬಳಲಿ... ಒಂದೇ ವಾರದೊಳಗೆ ಮರಣ ... ಅವನ ಮೃತ್ಯು ಎಷ್ಟು ಅಕಸ್ಮಾತ್ತಾಗಿತ್ತೆಂ... ಪಕ್ಕದ ಕೋಣೆಯಲ್ಲೇ ಇದ್ದರೂ ಗಾಂಧಿ... ಕೊನೆಯ ಗಳಿಗೆಯಲ್ಲಿ ಅವನ ... ಲಾರದೆ ಹೋದರು.

ಗುರುವಿನಲ್ಲಿ ಇಂಥ ಏಕಾಂತ ಭಕ್ತಿಯು... ವರು ಜಗತ್ತಿನಲ್ಲಿ ತೀರ ದುರ್ಲಭ. ಗುರುಗಳ... ಅದೂ ಭಾರತದೇಶದಲ್ಲಿ, ಏನೂ ಕೊರತೆ... ಆದರೆ ಮಹಾದೇವನಂಥ ಶಿಷ್ಯರು ... ತೀರ ದುರ್ಲಭರಾಗಿದ್ದರು, ಇಂದಿಗೂ ... ಭರೇ. ಅವನನ್ನು ಕಳೆದುಕೊಂಡಾಗ ಗಾಂಧಿ... ಗಾದ ಹಾನಿ ಎಂದೆಂದೂ ತುಂಬ... ತ್ತೆಂಬ ಮಾತು ಅವರನ್ನು ... ನಂತರ ಕಂಡವರೆಲ್ಲರಿಗೂ ಎಷ್ಟು ... ತ್ತಿತ್ತು. ಮಹಾದೇವದೇಸಾಯಿಯ ಮ... ನಾಲ್ಕು ವರ್ಷಗಳ ಬಳಿಕ ಶ್ರೀ ರಾಜಗೋ... ಲಾಚಾರಿಯವರು ಬರೆದಂತೆ,

"..... ಈ ದುಃಖವನ್ನು ... ಯನ್ನು ನಾವು ... ರಾಗಿದ್ದೇವೆ. ನಮ್ಮ ಜೀವನದಲ್ಲಿ... ಗಾಂಧೀಜಿಯೊಡನೆ ಅವನ ವ್ಯಕ್ತಿ... ದ್ವಾರೆ ಅವರ ಮುಖ್ಯಾಂಗವೊಂ... ಭಗ್ನವಾದಂತೆ ನಮಗೆನಿಸುತ್ತದೆ. ... ದೇವನು ನಮ್ಮ ನಡುವೆ ಇಲ್ಲದುದ... ತೀಕ್ಷ್ಣವಾಗಿ ನೆನಪಿಗೆ ತರುವ ಯಾವು... ರೊಂದು ಸಂಗತಿ ಜರಗದ ದಿನವೇ ... ಅವನ ಸ್ಥಾನದಲ್ಲಿ ನಿಂತು ಕೆಲಸಮಾಡ... ನೆಂಬ ಬಲ್ಲಿದ ಇನ್ನೊಬ್ಬನಿಲ್ಲ. ಎಷ್ಟು... ವೇಳೆ, ಉಳಿದವರು ಮಾಡುವ ಕಾರ್ಯ... ಮುಗ್ಧರಾದ ನಾವು ಸತ್ತವರನ್ನು ಮರೆ... ತ್ತೇವೆ. ಆದರೆ ಮಹಾದೇವನ ಮಾ... ಬೇರೆ. ಅವನು ಗಾಂಧೀಜಿಯ ಪ್ರ... ಯುಕ್ತ ಸೇವೆಯ ರೂಪದಲ್ಲಿ ನೆರವೇ... ಜನಸೇವೆಯ ರೀತಿ ಅತ್ಯಂತ ಮಹತ್ವ... ಗಿತ್ತು. ಅದನ್ನು ಯಾವ ಬಗೆಯಿಂದ... ತುಂಬಿಕೊಳ್ಳಲಾಗಲಿಲ್ಲ."

ಮಹಾದೇವನು ಗಾಂಧೀಜಿಯಲ್ಲಿ ತಾ... ತ್ಮ್ಯ ಹೊಂದಿದಂತೆಯೆ ಅವರು ಇನ್ನೊಂದ... ತಾದಾತ್ಮ್ಯ ಹೊಂದಿದ್ದುದರಿಂದಲೇ ಅವ... ಆ ವಿಯೋಗವನ್ನು ತಾಳಿಕೊಳ್ಳುವದು ... ವಾಯಿತು. ಆ ಇನ್ನೊಂದೆಂದರೆ ಭಾರ... ಜನತೆ, ಮತ್ತು ಭಾರತದ ಮೂಲಕ ಮಾನ... ಕುಲ ಮತ್ತು ಆ ಮೂಲಕ ಸಕಲ ಭೂ... ತ್ಮಕ ಪ್ರಪಂಚ. ಭಾರತದ ಆನಂದ... ಗಾಂಧೀಜಿ ನಗುತ್ತಿದ್ದರು, ಭಾರತದ ದು... ಗಳಲ್ಲಿ ಅವರು ಅಳುತ್ತಿದ್ದರು. ಅವರಿಗೆ ಹಿಂದು... ಮುಸ್ಲಿಮ, ಕ್ರಿಶ್ಚನ್-ಶೀಖ, ಬ್ರಾಹ್ಮ... ಭಂಗಿಯೆಂಬ ಭೇದವಿದ್ದಿಲ್ಲ. ಅವರ ... ನವೇ ಸ್ವರಾಜ್ಯಕ್ಕೆ ಮುಡಿಪಾಗಿತ್ತು. ... ಅವರ ಸ್ವರಾಜ್ಯ ಸರ್ವರ ಸ್ವಾತಂತ್ರ್ಯವಾಗಿತ... ಈ ಸಮರ್ಪಣ ಬುದ್ಧಿಯೇ ಅವರಿಂದ ಭಾ... ತದ ವಿಮೋಚನೆಯ ಕಾರ್ಯವನ್ನು ಈ... ವರೆಗೂ ಮಾಡಿಸಿತು, ಅದರಿಂದ ಕೊ... ಭಾರತಕ್ಕಾಗಿ ಪ್ರಾಣಾಹುತಿ ಕೊಡಿಸಿದು... ಅದೇ.

ಇಂಥ ಸಮರ್ಪಣ ಬುದ್ಧಿಯೇ ನಮ... ಸ್ವಾತಂತ್ರ್ಯವನ್ನು ಸಾಧಿಸಿಕೊಟ್ಟವು; ಅದನ್ನು ಉಳಿಸಬಲ್ಲವುಗಳೂ ಅಂಥವುಗಳೇ.

ವರ್ಧಾ ಕಿ. ಘ. ಮಶ್ರುವಾಲಾ

೧-೮-೪೭

ಭಾರತದ ಸಂಸ್ಕೃತಿ ... ಅಥವಾ ... ಬಾದಿನಲ್ಲೂ ಆ ಶ್ರೀ ಅರವಿಂದ ... ೧೯೫೦ನೇ ವರುಷದ ... ಪಾರಿತೋಷಕವನ್ನು ... ರ್ ಪಾರಿತೋಷಕ ... ಗ್ರಾಹ್ಯವಾಗಿ ... ಸೂಚನೆಗೆ ... ಹಿಂದೀಯರ ... ನವ ಪಾಂಡ್ಯ ... ಸಾಗಿದೆ.

ಗ್ರಹಗಳ ಮುನ್ನೋಟ

[ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಖಿಡೆ, ಬೆಳಗಾಂವಿ

ಅಗಸ್ಟ್ ೧೫ ರಿಂದ ೨೧ ರ ವರೆಗೆ

ಮೇಷ

ನಿಮ್ಮ ಆರೋಗ್ಯ ಸರಿಯಾಗಿರುತ್ತದೆ. ಆದರೆ ಹೆಂಡತಿ ಮಕ್ಕಳ ಪ್ರಕೃತಿಯ ಬಗ್ಗೆ ವಿಶೇಷ ಎಚ್ಚರಿಕೆಯಾಗಿರಬೇಕೆಂದು ಹೇಳದಿರಲಾರೆವು. ಪ್ರಾಪಂಚಿಕ ವ್ಯವಹಾರದಲ್ಲಿ ನಿಮ್ಮ ಮನಸ್ಸಿನ ಶಾಂತತೆಯನ್ನು ಪರೀಕ್ಷೆಗೀಡುಮಾಡುವಂತೆ ಪ್ರತಿಯೊಂದು ಮಾತಿನಲ್ಲಿಯೂ ಸಿಟ್ಟು ಸಿಡುಕುಗಳು ನಿಮಗೆ ಎದುರಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಗೆ ಅಷ್ಟೊಂದು ಒಳ್ಳೆಯ ಸಮಯವಲ್ಲದಿದ್ದರೂ ಲಾಭ ತುಂಬ ಚನ್ನಾಗಿರುವದು. ವ್ಯಾಜ್ಯ ಸ್ಪರ್ಧೆ ಮೊದಲಾದ ಸಂಗತಿಗಳಲ್ಲಿ ನಿಮಗೆ ಹಿಂದೇಟು ಬೀಳುವ ಸಂಭವವಿದ್ದರೂ ಶತ್ರುವೂ ತುಂಬ ಗಾಬರಿಗೊಳ್ಳುತ್ತಾನೆ. ಭೆಟ್ಟಿ ಫಲಕಾರಿಯಾಗದು. ಪ್ರವಾಸ,ಪತ್ರವ್ಯವಹಾರ ಉತ್ತಮ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲ ೨ ಚರಣಗಳು ವಿಶೇಷ ಪ್ರಯತ್ನಶೀಲರಾಗಬೇಕು. ತಾ. ೧೫, ೧೬, ೨೦, ೨೧ ಅನುಕೂಲ.

ವೃಷಭ

ನಿಮ್ಮ ಪ್ರಕೃತಿ ಸಮಾಧಾನಕರವಾಗಿದ್ದರೂ ಹೆಂಡತಿ ಮಕ್ಕಳದು ಅಷ್ಟು ಸಮಾಧಾನಕರವಿರುವದೆಂದು ಹೇಳಲಾಗಲ್ಲ. ಉಳಿದ ವಿಷಯದಲ್ಲಿ ಪ್ರಾಪಂಚಿಕ ಸುಖ ಉತ್ತಮವೆ. ಉದ್ಯೋಗದಲ್ಲಿ ದೊಡ್ಡ ಗಡಿಬಿಡಿಯಾಗಿ ತುಂಬ ಲಾಭ ದೊರಕುವುದಲ್ಲದೆ ಪ್ರತಿಷ್ಠೆಯೂ ಹಿಂದೆಂದೂ ಇಲ್ಲದ ಮಟ್ಟಕ್ಕೇರುವದು. ದಾಯಾದ್ಯರು ಮನನೋಯುವ ಮಾತಾಡಬಹುದು. ವ್ಯಾಜ್ಯ ವ್ಯವಹಾರಗಳಲ್ಲಿ ನೀವೇ ಸೋಲು ತಿನ್ನುವ ಪ್ರಸಂಗ ಬರುವ ಭಯವುಂಟು. ಭೆಟ್ಟಿಗೂ ಪತ್ರವ್ಯವಹಾರಕ್ಕೂ ಅಡ್ಡಿಯಿಲ್ಲ. ಆದರೆ ಪ್ರವಾಸ ಮಾಡದಿರುವದೇ ಲೇಸು ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲ ೨ ಚರಣಗಳಿಗೆ ಸ್ವಲ್ಪ ಹೆಚ್ಚು ತೊಂದರೆಯುಂಟು. ತಾ. ೧೭, ೧೮, ೧೯, ೨೦ ಅನುಕೂಲ.

ಮಿಥುನ

ಹೆಂಡತಿಯ ಪ್ರಕೃತಿ ಸ್ವಲ್ಪ ಕೆಡುವ ಸಂಭವವುಂಟು. ಅಲ್ಲದೆ ನಿಮ್ಮಿಬ್ಬರಲ್ಲಿರುವ ಮತಭೇದವನ್ನು ಆಗಿಂದಾಗ್ಗೆ ನೀವು ಬಗೆಹರಿಸಿಕೊಳ್ಳದಿದ್ದಲ್ಲಿ ಅವು ಮುಂದೆ ಬೆಳೆದು ತುಂಬ ತ್ರಾಸದಾಯಕವಾಗಬಹುದು. ಉಳಿದ ಬಾಬಿನಲ್ಲಿ ಪ್ರಾಪಂಚಿಕ ಸುಖ ಒಳಿತು. ಉದ್ಯೋಗದಲ್ಲಿ ಹಣಕ್ಕೇನೂ ಕೊರತೆ ಬಾರದು. ಆದರೆ ಪ್ರತಿಷ್ಠೆಯ ಕಡೆ ನಿಮ್ಮ ಲಕ್ಷ್ಯವಿರಲಿ. ಸ್ಥಿರಾಸ್ತಿಯಲ್ಲಿ ಕೆಲ ಸುಧಾರಣೆಯಾಗಬಹುದು. ವ್ಯಾಜ್ಯ ವ್ಯವಹಾರಾದಿಗಳಲ್ಲಿ ಎರಡೂ ಪಕ್ಷಗಳು ಇದ್ದಲ್ಲೇ ಇರುವವು. ಭೆಟ್ಟಿಯಾಗಿ ಫಲವಿಲ್ಲ, ಪತ್ರವ್ಯವಹಾರವೇ ಲೇಸು. ಪ್ರವಾಸ ಸುಖಕರ. ಆರ್ದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲ ೨ ಚರಣಗಳಿಗೆ ಕೆಟ್ಟ ಫಲಗಳ ಬಾಧೆ ಕಡಿಮೆ. ತಾ. ೧೫, ೧೬, ೨೧, ೨೨ ಅನುಕೂಲ.

ಕರ್ಕ

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಹೆಂಡತಿ ಮಕ್ಕಳ ಅನಾರೋಗ್ಯದಿಂದ ತುಸು ಬಾಧೆ ಪಡುವಿರಿ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆ ಅಷ್ಟು ಚನ್ನಾಗಿರದು. ಮಿತ್ರಸುಖ ಉತ್ತಮ. ವ್ಯಾಜ್ಯ ಮೊದಲಾದ ವ್ಯವಹಾರಗಳಲ್ಲಿ ವಿಶೇಷವಾಗಿ ಹೇಳತಕ್ಕದ್ದೇನೂ ಅಲ್ಲ. ಸ್ಥಿರಾಸ್ತಿಯಲ್ಲಿ ಏನಾದರೂ ಹೊಸ ತೊಡಕುಗಳೇಳುವ ಸಂಭವವಿದೆ. ಪ್ರವಾಸ ಅನುಕೂಲ. ಪತ್ರವ್ಯವಹಾರವೂ ನೆಟ್ಟಗೆ. ಆದರೆ ಭೆಟ್ಟಿಗೆ ಮಾತ್ರ ಅಷ್ಟು ಫಲ ದೊರೆಯದು. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷೆಯ ಮೊದಲ ೨ ಚರಣಗಳು ವಿಶೇಷ ಚಿಂತಿಸಬೇಕಾಗಿಲ್ಲ. ತಾ. ೧೫, ೧೬, ೧೭, ೧೮ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿಯನ್ನು ಜೋಪಾನದಲ್ಲಿಟ್ಟುಕೊಳ್ಳಿರಿ. ನಿಮ್ಮ ಹೆಂಡತಿಯ ಪ್ರಕೃತಿಯೇನೋ ಸರಿಯಾಗಿರುವದಾದರೂ ನಿಮ್ಮೊಳಗಿನ ಮತಭೇದಗಳು ಸಾಂಸಾರಿಕ ಸುಖಕ್ಕೆ ಮುಳ್ಳಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಿರಿ. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಯಥೇಷ್ಟವಾಗಿದ್ದರೂ ಮನಸ್ಸಿಲ್ಲದ ಕಾರ್ಯಗಳಲ್ಲಿ ಹಣ ವೆಚ್ಚ ಮಾಡಬೇಕಾಗಿ ಬಂದೀತು. ಪ್ರವಾಸಾದಿ ಕಾರ್ಯಗಳು ಹಿತಾವಹ. ಮಘೆಯ ಕೊನೆಯ ೨ ಮತ್ತು ಪೂರ್ವದ ೨ ಚರಣಗಳು ಇಷ್ಟ ಸಾಧನೆಗೆ ಪುರುಷ ಪ್ರಯತ್ನವನ್ನೇ ಅವಲಂಬಿಸಬೇಕು. ತಾ. ೧೫, ೧೬, ೨೦, ೨೧ ಅನುಕೂಲ.

ಕನ್ಯಾ

ನಿಮ್ಮ ಪ್ರಕೃತಿಯಲ್ಲಿ ನಾನಾತರದ ಹುಳುಕುಗಳೇಳಬಹುದಾದ್ದರಿಂದ ಅದರ ಕಡೆ ವಿಶೇಷ ಗಮನವೀಯಿರಿ. ಹೆಂಡತಿ ಮಕ್ಕಳ ಆರೋಗ್ಯ ಚನ್ನಾಗಿರುವದು. ಇತರ ಪ್ರಾಪಂಚಿಕ ಸುಖಗಳಿಗೆ ಅಡ್ಡಿಯಿಲ್ಲ. ಉದ್ಯೋಗದಲ್ಲಿ ಪ್ರತಿಷ್ಠೆ ಕುಗ್ಗದಂತೆ ನೋಡಿಕೊಳ್ಳಿರಿ. ಲಾಭದ ವಿಷಯದಲ್ಲಿ ನೀವೇನೂ ಚಿಂತಿಸುವ ಕಾರಣವಿಲ್ಲ. ಮೇಲಾಗಿ ಅಕಸ್ಮಾತ್ ಲಾಭಗಳು ನಿಮಗಾಗಬಹುದು ಕೂಡ. ಆದರೆ ವೆಚ್ಚದ ಕೈಯನ್ನು ಬಿಗಿಹಿಡಿಯದೆ ಹೋದರೆ ಉಪಾಯವೇ ಇಲ್ಲ. ವ್ಯಾಜ್ಯಾದಿ ವ್ಯವಹಾರಗಳಲ್ಲಿ ಎರಡೂ ಪಕ್ಷಗಳು ಯಥಾಸ್ಥಿತಿಯಲ್ಲೆ ಉಳಿಯುವವು. ಪ್ರವಾಸ ಹಿತಕರ. ಭೆಟ್ಟಿಯಾಗಲಿ ಪತ್ರವ್ಯವಹಾರವಾಗಲಿ ಅಷ್ಟೊಂದು ಸಫಲವಾಗುವಂತಿಲ್ಲ. ಉತ್ತರೆಯ ಕೊನೆಯ ೨ ಮತ್ತು ಹಸ್ತದ ಮೊದಲ ೨ ಚರಣಗಳಿಗೆ ತೊಂದರೆಪಟ್ಟುಕೊಳ್ಳದೆ ಇಷ್ಟಾರ್ಥಸಾಧನೆ ಮಾಡಿಕೊಳ್ಳುವ ಆಶೆಯಿಲ್ಲ. ತಾ. ೧೭, ೧೮, ೨೦, ೨೧ ಅನುಕೂಲ.

ತುಲಾ

ಚಿಕ್ಕಪುಟ್ಟ ಕ್ಲೇಶಗಳಿಂದ ದಿನದಿನವೂ ಪೀಡಿತರಾಗುತ್ತಿರುವ ನಿಮಗೆ ಮಿತ ಆಹಾರ ವಿಹಾರದ ಉಪದೇಶ ಕೊಟ್ಟರೆ ತಪ್ಪಾಗದು. ಹೆಂಡತಿ ಮಕ್ಕಳ ಆರೋಗ್ಯ ಸರಿಯಾಗಿರುವದು. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಬಯಸಿದಷ್ಟು ಸಿಕ್ಕಿದರೂ ಅನೇಕಾನೇಕ ವೆಚ್ಚದ ಪ್ರಸಂಗಗಳೂ ಕೈತೊಳೆದುಕೊಂಡು ಬೆನ್ನುಹತ್ತಿರುತ್ತವೆ. ವ್ಯಾಜ್ಯ ಮೊದಲಾದ ಸಂಗತಿಗಳಲ್ಲಿ ನಿಮ್ಮ ಪಕ್ಷದ ಸತ್ಯಸಂಧತೆಯ ಬಗ್ಗೆ ತುಂಬ ಸಂದೇಹವಿದ್ದರೂ ನಿಮ್ಮ ಪುರಾವೆಗಳು ಬಲಿಷ್ಠವಾಗಿರುವುದರಿಂದ ಜಯ ನಿಮಗೇ ನಿಶ್ಚಯ. ಪರಸ್ತ್ರೀ ವಿಷಯದಲ್ಲಿ ಪಾಪ ಭಾವನೆಗೆ ನಿಮಗೆಷ್ಟೋ ಆಮಿಷ ಬರಬಹುದು. ಇಲ್ಲಿ ನಿಮ್ಮ ನಿಜವಾದ ಸಜ್ಜನಿಕೆಯ ಪರೀಕ್ಷೆಯೆಂದೆಣಿಸಿ ನೀವು ಸದಾಚಾರಪಥವನ್ನು ಗಟ್ಟಿಯಾಗಿ ನಂಬಿರಿ. ಪ್ರವಾಸಾದಿ ಕಾರ್ಯಗಳು ಸಫಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖೆಯ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೫, ೧೬, ೧೯, ೨೦ ಅನುಕೂಲ.

ವೃಶ್ಚಿಕ

ದಂಪತಿಗಳಿಬ್ಬರ ಪ್ರಕೃತಿಗೂ ಕಿರುಕುಳಗಳು ಬಂದೇಬಂದರೂ ನಿಮಗಿಂತ ಹೆಂಡತಿಯ ಆರೋಗ್ಯವೇ ವಾಸಿಯೆನ್ನುವಂತಿದೆ. ಆದರೆ ಇದರಿಂದ ನಿಮ್ಮ ಪ್ರಾಪಂಚಿಕ ಸೌಖ್ಯಕ್ಕೆ ವಿಶೇಷ ಧಕ್ಕೆಯಿಲ್ಲ. ಉದ್ಯೋಗದಲ್ಲಿ ಲಾಭವೂ ಇದೆ. ಪ್ರತಿಷ್ಠೆಯೂ ಇದೆ. ವ್ಯಾಜ್ಯಾದಿ ವ್ಯವಹಾರಗಳಲ್ಲಿ ನಿಮಗೆ ಸಾಧಾರಣ ಅನುಕೂಲತೆಯಿದೆ. ಆದರೆ ನಿಮ್ಮ ವಿರೋಧಿ ನಿಮ್ಮನ್ನು ಬೆದರಿಸಲು ಹವಣಿಸಿದರೆ ಬೆಪ್ಪಾಗಬೇಡಿರಿ. ಮಿತ್ರರಲ್ಲಿ ವಿರೋಧ ಕಟ್ಟಿಕೊಳ್ಳುವ ಪ್ರಸಂಗ ಬರುವಂತಿದೆ. ಪ್ರವಾಸ ಬೇಡ. ಭೆಟ್ಟಿ ಪತ್ರವ್ಯವಹಾರಗಳಿಗೆ ಅನುಕೂಲ ಅನುರಾಧೆಯ ಕೊನೆಯ ೨ ಮತ್ತು ಜೇಷ್ಠೆಯ ಮೊದಲ ೨ ಚರಣಗಳಿಗೆ ಅನಿಷ್ಟ ಫಲಗಳ ಕಾಟ ಕಡಿಮೆ ತಾ. ೧೭, ೧೮, ೨೧ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಮಕ್ಕಳ ಪ್ರಕೃತಿ ಸೌಖ್ಯ. ಆದರೆ ತಂದೆ ತಾಯಿಗಳೇ ಮೊದಲಾದ ಹಿರಿಯರಿಗೆ ಅನಾರೋಗ್ಯವಾದೀತು. ಹೆಂಡತಿ ಮಕ್ಕಳಿಗೂ ನಿಮಗೂ ಅನೇಕ ವಿಷಯಗಳಲ್ಲಿ ಮತಭೇದ. ಸಾಲದ್ದಕ್ಕೆ ಅಪ್ತೇಷ್ಟರಿಂದಲೇ ಅನೇಕ ಕಾಟಗಳು ಬಂದು ಮನ ಬೇಸತ್ತು ಹೋಗಬಹುದಾಗಿದೆ. ಉದ್ಯೋಗದಲ್ಲಿ ಲಾಭವಾಗಲಿ ಪ್ರತಿಷ್ಠೆಯಾಗಲಿ ಅಷ್ಟಕ್ಕಷ್ಟೆ. ಆದರೆ ವ್ಯಾಜ್ಯ ಮೊದಲಾದ ವ್ಯವಹಾರಗಳಲ್ಲಿ ನಿಮಗೇ ಜಯ. ಪ್ರವಾಸದ ಗೊಡವೆಗೆ ಹೋಗಬೇಡಿರಿ. ಭೆಟ್ಟಿ ಪತ್ರವ್ಯವಹಾರಗಳಿಗೆ ಅಡ್ಡಿಯಿಲ್ಲ. ಮೂಲದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲ ೨ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೫, ೧೬, ೨೦ ಅನುಕೂಲ.

ಮಕರ

ನಿಮ್ಮ ಸ್ವಂತದ ಪ್ರಕೃತಿಗೆ ಒಂದಲ್ಲೊಂದು ಕಿರುಕುಳ ತಪ್ಪಿದ್ದಲ್ಲ. ಆದರೆ ಹೆಂಡತಿ ಮಕ್ಕಳದು ಚನ್ನಾಗಿರುವದು. ಅನೇಕ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮವಾಗಿರುವದು. ಸ್ಥಿರಾಸ್ತಿಯಲ್ಲಿ ಹೊಸ ಹೊಸ ತೊಡಕುಗಳು ಏಳುವಂತಿವೆ. ಮಿತ್ರರ ಮೇಲೆ ನೀವು ಶತ್ರುಗಳಿಗಿಂತ ಹೆಚ್ಚು ಕಣ್ಣಿಡಬೇಕು. ಏಕೆಂದರೆ ಶತ್ರುಗಳು ಈ ಬಾರಿ ನಿಮ್ಮ ಕೈಯಲ್ಲಿ, ಸೋಲುವರು. ಮಿತ್ರರು ವಿಶ್ವಾಸಘಾತ ಮಾಡಬಹುದು. ಉದ್ಯೋಗದಲ್ಲಿ ನಿಮ್ಮ ಪ್ರತಿಷ್ಠೆ ಸುಧಾರಿಸುತ್ತಿದೆಯಾದರೂ ಲಾಭಕ್ಕೆ ಹೊಸ ಹೊಸ ಅಡ್ಡಿಗಳು ಬರುವಂತೆ ಕಾಣುತ್ತದೆ. ಭೆಟ್ಟಿ ಉತ್ತಮ. ಪ್ರವಾಸ ಪತ್ರವ್ಯವಹಾರ ಪ್ರಯೋಜನವಿಲ್ಲ. ಉತ್ತರಾಷಾಢದ ಕೊನೆಯ ೨ ಮತ್ತು ಶ್ರವಣದ ಮೊದಲ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೭, ೧೮, ೨೧ ಅನುಕೂಲ.

ಕುಂಭ

ನಿಮ್ಮ ಪ್ರಕೃತಿಯುಷ್ಟು ನಿಮ್ಮ ಹೆಂಡತಿಯದು ಸ್ವಸ್ಥವಾಗಿರಲಿಕ್ಕಿಲ್ಲ. ಸ್ಥಾವರಾಸ್ತಿಯಲ್ಲಿ ಬೇರೆ ಹಕ್ಕುದಾರರು ಆತಂಕ ತಂದು ಕೆಲಸ ಕೆಡಿಸಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಸರಿಯಾಗಿರುವದು. ಆದರೆ ಲಾಭ ತುಂಬ ಕಡಿಮೆ. ವ್ಯಾಜ್ಯ ವ್ಯವಹಾರಗಳಲ್ಲಿ ಹಿಂದೇಟು ಬೀಳಬಹುದು. ಪ್ರವಾಸ ತೊಂದರೆಯದು. ಭೆಟ್ಟಿ ಪತ್ರವ್ಯವಹಾರ ಅನುಕೂಲ. ಶತತಾರೆಯ ಕೊನೆಯ ೨ ಮತ್ತು ಪೂರ್ವಾಭಾದ್ರದ ಮೊದಲ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೫, ೧೬, ೨೦, ೨೧ ಅನುಕೂಲ.

ಮೀನ

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಹೆಂಡತಿಯ ಆರೋಗ್ಯವನ್ನು ಗಮನಿಸಬೇಕಾಗುತ್ತದೆ. ಉಳಿದ ವಿಚಾರಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಅಷ್ಟಕ್ಕಷ್ಟೇ. ವ್ಯಾಜ್ಯಾದಿ ವ್ಯವಹಾರಗಳಲ್ಲಿ ನಿಮ್ಮ ತಪ್ಪಿನಿಂದಲೇ ಶತ್ರುವಿಗೆ ಲಾಭವಾಗುವದು. ಮಿತ್ರರಲ್ಲಿ ವಿರೋಧ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಲೇಸು. ಉತ್ತರಾಭಾದ್ರದ ಕೊನೆಯ ೨ ಮತ್ತು ರೇವತಿಯ ಮೊದಲ ೨ ಚರಣಗಳಿಗೆ ದೈವಾನುಗ್ರಹವಿರುವ ಕಾರಣ ಅವುಗಳಿಗೆ ಅಷ್ಟು ತೊಂದರೆಯಿಲ್ಲ. ತಾ. ೧೫, ೧೬, ೧೭, ೧೮ ಅನುಕೂಲ.

ನನ್ನ ಸ್ವಾತಂತ್ರ್ಯ ಮತ್ತು ನಿಮ್ಮ ಸ್ವಾತಂತ್ರ್ಯ

ಬರೆದವರು: ಶ್ರೀ ಎನ್. ಎಸ್. ಭಟ್ಟ

[ಎ. ಜಿ. ಗಾರ್ಡಿನರರ ಕ್ಷಮೆ ಬೇಡಿ ಬರೆದುದು]

ಮದರಾಸಿನಲ್ಲಿರುವ ನನ್ನ ಗೆಳೆಯ ಸುಬ್ರಾಯರು ಮೊನ್ನೆ ಮಾತಾಡುತ್ತಾ ಒಂದು ವಿನೋದದ ವಿಷಯವನ್ನೆತ್ತಿದರು. ಒಬ್ಬ ಯುವಕನು ಅಮೇರಿಕನ್ ಕ್ರಾಪು, ಕುಡಿ ಮೀಸೆ, ಇಡೀ ಕೈಗಳಿಗೆ "ಪ್ಯಾರಾಚೂಟ್" ಸಿಲ್ಕಿನ ಶರಟು ಹಾಗೆಯೇ ಕಾಲುಗಳಿಗೂ ಉದ್ದದ ಪಾಯಿಜಾಮೂಗಳನ್ನು ನಾಜೂಕಾಗಿ ಧರಿಸಿಕೊಂಡು, ಊರುಗೋಲೊಂದನ್ನು ಹೆಗಲ ಮೇಲಿರಿಸಿ, ಎರಡೂ ತೋಳುಗಳ ಭಾರವನ್ನು ಅದರ ಮೇಲೆ ಹಾಕಿ ಗಂಭೀರ ಗತಿಯಿಂದ ನಡೆಯುತ್ತಿದ್ದನಂತೆ "ಮೌಂಟ ರೋಡಿ"ನ ನಡುರಸ್ತೆಯಲ್ಲಿ. ವಾಹನಗಳ ಸಂಚಾರ ಬಲು ಜೋರಾಗಿದ್ದು, ಅವುಗಳೆಲ್ಲ ದೊಡ್ಡ ಗಲಿಬಿಲಿಯಲ್ಲಿ ಬೀಳುವಂತಾದುವು. ಈತನಿಗೂ ಏನು ಕಡಿಮೆಯ ಅಪಾಯ ಸಂಭವಿಸುವಂತಿರಲಿಲ್ಲ. ಕಡೆಗೆ ಯಾರೋ ಸೂಚಿಸಿದ ರಂತೆ ಈ ಮಹಾನುಭಾವನಿಗೆ— "ಮಹಾರಾಯಾ, ಕಾಲ್ನಡಿಗೆಯವರು ಹೋಗಬೇಕಾದ್ದು ಕಾಲ್ದಾರಿಯಲ್ಲಿ" ಎಂದು. ಅದಕ್ಕೆ ಅತನ ಉತ್ತರ ಮಾತ್ರ ವಿಚಿತ್ರವಾಗಿತ್ತು: "ನನಗೆ ಇಷ್ಟ ಬಂದಂತೆ ನಾ ಹೋದೇನು. ನಮಗೀಗ ಸ್ವಾತಂತ್ರ್ಯ ಬಂದಿದೆ" ಎಂದನಂತೆ. ಯಾವ ಸ್ವಾತಂತ್ರ್ಯವು ಕಾಲ್ನಡಿಗೆಯವನನ್ನು ನಡುರಸ್ತೆಯಲ್ಲಿ ಹೋಗಗೊಡುವುದೋ ಅದೇ ಸ್ವಾತಂತ್ರ್ಯವು ಗಾಡಿ ಹೊಡೆಯುವವನನ್ನೂ ಕಾಲ್ದಾರಿಯಲ್ಲಿ ಗಾಡಿ ಹೊಡೆಯಬಿಡುವುದಿಲ್ಲವೆ? ಇಂತಹ ಸ್ವಾತಂತ್ರ್ಯ ಎಲ್ಲೆಡೆಯಲ್ಲೂ ಗೊಂದಲವುಂಟು ಮಾಡುವುದರಲ್ಲೇ ಕೊನೆಗಾಣಬಹುದು ಎಂಬುದು ಆ ಪುಣ್ಯಾತ್ಮನಿಗೆ ಹೊಳೆಯಲೇ ಇಲ್ಲ. ಯಾರೇ ಆದರೂ ಬೇರೊಬ್ಬರ ದಾರಿಯಲ್ಲಿ ತಾನು ನಡೆಯತೊಡಗಿದರೆ ಯಾರೂ ಎಲ್ಲಿಗೂ ಮುಟ್ಟಲಾರರು. ವೈಯಕ್ತಿಕ ಸ್ವಾತಂತ್ರ್ಯವು ಸಮಾಜದಲ್ಲಿ ಅನಾಯಕತ್ವವನ್ನು ತಂದುಬಿಟ್ಟೀತು.

ಈಗೀಗ ಇಂತಹ ಕುಡಿಮೀಸೆಯ ಸ್ವಾತಂತ್ರ್ಯಮತ್ತ ನವತರುಣರಿಂದ ಬಹಳ ಅಪಾಯದ ನಿರೀಕ್ಷಣೆಯಿದೆ. ಅದ್ದರಿಂದ ನಮ್ಮ ಮಟ್ಟಿಗಾದರೂ "ದಾರಿಯ ಕಟ್ಟಳೆ" ಎಂದರೇನು? ಎಂದು ವಿಚಾರಿಸುವುದು ನ್ಯಾಯ್ಯವೂ ಹಿತವೂ ಆದೀತು. ಎಲ್ಲರಿಗೂ ಅವರವರ ಸ್ವಾತಂತ್ರ್ಯ ಅವರವರಿಗೆ ಸಿಗುವಂತೆ ಮಾಡಲು ಪ್ರತಿಯೊಬ್ಬನೂ ತನ್ನ ಸ್ವಾತಂತ್ರ್ಯಕ್ಕೆ ಒಂದು ಮೇರೆಯಿಡಬೇಕು ಎಂಬುದೇ ಅದರ ಅರ್ಥ. ಒಬ್ಬ ಪೋಲೀಸು — ಉದಾಹರಣೆಗೆ ಗಾಂಧೀ ಚೌಕದವ, ಮಧ್ಯಮಾರ್ಗದಲ್ಲಿ ನಿಂತು ಕೈಯೆತ್ತಿದನೆಂದರೆ ಅದು ಬಲಾತ್ಕಾರದ ಗುರುತಲ್ಲ; ಸ್ವಾತಂತ್ರ್ಯದ ಗುರುತು. ನೀವು ಹಾಗೆ ಭಾವಿಸದಿರಬಹುದು. ನೀವು—ನಿಮ್ಮ ತ್ವರೆಯಲ್ಲಿ—ನಿಮ್ಮ ಕಾರನ್ನು ನಿಲ್ಲಿಸಿದ ಈ ಸೊಕ್ಕಿನ ಅಧಿಕಾರಿಯು ನಿಮ್ಮ ಸ್ವಾತಂತ್ರ್ಯವನ್ನು ಅತಿಕ್ರಮಿಸಿದನೆಂದು ತಿಳಿಯಲೂಬಹುದು. ಆದರೆ ಈ ಬಡ ವ್ಯಕ್ತಿಯು ಹತ್ತು ಜನರು ಹೋಗಿ ಬರುವ ಮಾರ್ಗವನ್ನು ಉಪಯೋಗಿಸುತ್ತಿರುವ ನಿಮ್ಮ ಸ್ವಾತಂತ್ರ್ಯಕ್ಕೆ ಅಡ್ಡ ಬರಲು ಹೇಗೆ ಧೈರ್ಯಪಟ್ಟಾನು? ನೀವು ನ್ಯಾಯಸ್ಥ ಮನುಷ್ಯರಾದರೆ ಹಾಗೆ ಭಾವಿಸಲಿಕ್ಕೇ ಇಲ್ಲ. ಅಲ್ಲದೆ ಆ ವ್ಯಕ್ತಿಯು ಎಲ್ಲಾದರೂ ಅಪ್ಪಿತಪ್ಪಿ ನಿಮ್ಮ ಕಾರನ್ನು ನಿಲ್ಲಿಸದಿದ್ದರೆ, ಹಾಗೆಯೇ ಯಾರ ಕಾರನ್ನೂ ಅತ ನಿಲ್ಲಿಸಲಿಕ್ಕಿಲ್ಲ. ಅದರಿಂದ ಗಾಂಧೀ ಚೌಕವು ದೊಡ್ಡ ಸುಂಟರಗಾಳಿಯಂತಾಗಿ ಯಾರಿಗೂ ಹೋಗಲಾರದಂತಾದೀತು ಎಂದು ನೀವು ದೂರಿಯೇ ತೀರುವಿರಿ ಮತ್ತು ನೀವು ಹತ್ತು ಜನರ ಹಿತಕ್ಕಾಗಿ ನಿಮ್ಮ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಒಂದು ಗಡಿ ಹಾಕುವಿರಿ. ಇದರಿಂದ ನಿಮ್ಮ ಸ್ವಾತಂತ್ರ್ಯಕ್ಕೆ ಒಂದು ನಿಜರೂಪ ಬಂದೀತು.

ಸ್ವಾತಂತ್ರ್ಯವು ಕೇವಲ ವೈಯಕ್ತಿಕ ಸಾಧನವಲ್ಲ. ಅದೊಂದು ಸಾಮಾಜಿಕ ಒಪ್ಪಂದ. ಅದು ಸರ್ವರಿಗೂ ಸಲ್ಲತಕ್ಕ ಹಕ್ಕುಗಳನ್ನು ಕೊಟ್ಟು-ಕೊಳ್ಳುವ ಪವಿತ್ರ ಸ್ಥಾನ. ಕೆಲವಿಷಯಗಳಲ್ಲಿ— ಬೇರೊಬ್ಬನ ಯಾವ ವಿಧದ ಸ್ಪರ್ಶವೂ ಬೇಕಾಗದಂತಹವುಗಳಲ್ಲಿ- ನಾನು ನನಗೆ ಬೇಕಾದಷ್ಟು ಸ್ವತಂತ್ರನಾಗಿರಬಹುದು. ಬೇಕಾದರೆ, ಚಿಕ್ಕಪೇಟೆಯಲ್ಲಿ ಬರಿ ಪಂಜೆಯುಟ್ಟು, ಉದ್ದ ಕೂದಲು ಬಿಟ್ಟುಕೊಂಡು ಬರಿಗಾಲಿನಿಂದ ನಾನು ಹೋಗತೊಡಗಿದರೆ ಯಾರು ಹೇಳುತ್ತಾರೆ ಬೇಡವೆಂದು? ನಿಮಗೆ ನನ್ನೆಡೆ ನೋಡಿ ಗೇಲಿ ಮಾಡುವ ಸ್ವಾತಂತ್ರ್ಯವಿರಬಹುದು. ಆದರೆ ಅದನ್ನು ಲೆಕ್ಕಿಸದಿರುವ ಸ್ವಾತಂತ್ರ್ಯ ನನಗಿದೆ. ನಾನು ಬೇಕಾದರೆ ನನ್ನನಿಡಗೂದಲುಗಳಿಗೆ ಬಣ್ಣ ಕೊಡಿಸುತ್ತೇನೆ. ಅಥವಾ ನನ್ನ ಮೀಸೆಗಳಿಗೆ ಮೇಣ ಸವರುತ್ತೇನೆ- (ಇದನ್ನು ಶಾಸ್ತ್ರ ನಿಷೇಧಿಸಿದೆ), ಇಲ್ಲವೆ ಒಂದು ಉದ್ದದ ಟೋಪಿಯನ್ನು ಕವಚಿಕೊಳ್ಳುವೆ. ಅಥವಾ ದೊಡ್ಡ ನಿಲುವಂಗಿಯನ್ನು ಧರಿಸುವೆ. ಅಥವಾ ಗಂಧವನ್ನು ಚೆನ್ನಾಗಿ ಬಳಿದ-ಕೊಳ್ಳುವೆ. ಅಲ್ಲದಿದ್ದರೆ ರಾತ್ರಿ ತಡಮಾಡಿ ಮಲಗಿ ಬೇಗನೆ ಏಳುವೆ. ನನ್ನಿಚ್ಛೆಯಂತೆ ಮಾಡಬಲ್ಲೆ. ಯಾರ ಒಪ್ಪಿಗೆಯನ್ನೂ ನಾನು ಕೇಳಬೇಕಾಗಿಲ್ಲ. ನಾನು ಪಲ್ಯದೊಂದಿಗೆ ಊಟ ಮಾಡಬೇಕೊ ಇಲ್ಲವೆ ಹುಳಿಯನ್ನವನ್ನು ಕಬಳಿಸಲೋ ಎಂಬುದನ್ನು ನಿಮ್ಮೊಡನೆ ವಿಚಾರಿಸಬೇಕಾಗಿಲ್ಲ ಮತ್ತು ನೀವೂ ಕೂಡ ನಾನು ವೈಷ್ಣವನೋ ಶೈವನೋ, ಕರಿ ಕುಡಿಗೆಯನ್ನು ಮದುವೆಯಾಗುವೆನೋ ಬಿಳಿಯಳನ್ನೋ, ನನ್ನ ಮೆಚ್ಚುಗೆಯ ಕವಿ ಲಕ್ಷ್ಮೀಶನೋ ಕುಮಾರವ್ಯಾಸನೋ, ಇಲ್ಲವೆ ಬೀಡಿ ಸೇದುವೆನೋ ಸಿಗರೇಟೊ ಎಂದು ಕೇಳಲಾರಿರಿ. ಇಂತಹ ಇನ್ನು ಸಾವಿರಾರು ವಿಷಯಗಳಲ್ಲಿ ನಾನೂ ನೀವೂ ನಮ್ಮಿಷ್ಟದಂತೆ ನಡೆಕೊಳ್ಳಬಹುದು ಯಾರೊಬ್ಬರ ಅನುಮತಿಯನ್ನೂ ಕೇಳಬೇಕಾಗಿಲ್ಲ. ನಾವೊಬ್ಬರೇ ಆಳಬಹುದಾದ ಬಲು ದೊಡ್ಡ ರಾಜ್ಯ ನಮಗಿದೆ. ಅಲ್ಲಿ ನಾವು ಬೇಕಾದ್ದನ್ನು ಮಾಡಬಹುದು. ಬುದ್ಧರೊ ಪೆದ್ದರೋ ಆಗಬಹುದು, ದುಷ್ಟ ಅಥವಾ ಶಿಷ್ಟರಾಗಿರಬಹುದು. ಸಾಂಪ್ರದಾಯಿಕರಾಗಲಿ ಕ್ರಾಂತಿಕಾರರಾಗಲಿ ಆಗಬಹುದು. ಆದರೆ ಆ ರಾಜ್ಯದಿಂದ ಸರಿಯಾಗಿ ಒಂದು ಹೆಜ್ಜೆ ಹೊರಗಿಟ್ಟರೆ ತೀರಿತು. ನಮ್ಮ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಒಂದು ಮೇರೆಯು ಬೇರೆಯವರ ಸ್ವಾತಂತ್ರ್ಯದಿಂದ ರಚಿತವಾಗಿಯೇ ತೀರುವುದು. ನಾನು ಬೇಕಾದರೆ ರಾತ್ರಿ ಹನ್ನೆರಡು ಗಂಟೆಯಿಂದ ಬೆಳಿಗ್ಗೆ ಆರು ಗಂಟೆ ವರೆಗೆ ಕೊಂಬು ವಾದ್ಯವನ್ನು ಕಲಿಯುತ್ತಿರಬಹುದು. ಆದರೆ ಮಾತ್ರ ನಾನು ನಂದೀ ಬೆಟ್ಟದ ತುದಿಗೆ ದಯಮಾಡಬೇಕೇ ಹೊರತು ನನ್ನ ಮಲಗುವ ಕೋಣೆಯಲ್ಲಿ ಬಾರಿಸತೊಡಗಿದರೆ ನನ್ನ ಹೆಂಡತಿ ಅಡ್ಡವಿಸಿಯಾಳು. ಬೀದಿಯಲ್ಲಿ ಊದತೊಡಗಿದರೆ ನನ್ನ ನೆರೆಯವರು ನನಗೆ, ನನ್ನ ವಾದ್ಯವಾದನ ಸ್ವಾತಂತ್ರ್ಯ ಅವರ ಶಾಂತಸುಖ ನಿದ್ರೆಗೆ ತೊಂದರೆಯೊಡ್ಡಬಾರದು ಎಂದು ಎಚ್ಚರವಿತ್ತಾರು. ಪ್ರಪಂಚವು ಜನರಿಂದ ತುಂಬಿಹೋಗಿದೆ. ಅವರ ಸ್ವಾತಂತ್ರ್ಯಕ್ಕಾಗಿ ನನ್ನ ಸ್ವಾತಂತ್ರ್ಯದಲ್ಲಿ ನಾನು ಎಡೆ ಮಾಡಲೇಬೇಕು. ಆದರೆ ಇದನ್ನೆಲ್ಲ ಮರೆತುಬಿಡುವುದರಲ್ಲಿ ನಾವು ಬಲು ಜಾಣರು ಮತ್ತು ದೌರ್ಭಾಗ್ಯದಿಂದ ನಮ್ಮ ನ್ಯೂನತೆಗಳಿಗಿಂತಲೂ ಇನ್ನೊಬ್ಬರ ನ್ಯೂನತೆಗಳನ್ನು ಕಂಡುಹಿಡಿಯುವುದರಲ್ಲಿ ನಾವು ಹೆಚ್ಚು ನಿಪುಣರು.

ಮೊನ್ನೆ ಮುಂಜಾನೆ ನಾನು ಒಂದು ಹಳ್ಳಿಯ ಸ್ಟೇಶನದಿಂದ ರೈಲು ಡಬ್ಬದೊಳಗೆ ಕಾಲಿಟ್ಟೆ. ಒಂದು ಬದಿಗೆ ಕುಳಿತುಕೊಂಡು ಗಜೇಟನ್ನು ಓದುತ್ತಾ ಒದ್ದಾಡುತ್ತಿದ್ದೆ. ಅನಂದಕ್ಕಾಗಿ ನಾನದನ್ನು ಓದುತ್ತಿರಲಿಲ್ಲ. ನಿಜ ಹೇಳುವುದಿದ್ದರೆ ನಾನೆಂದೂ ಗಜೇಟನ್ನು ಅನಂದಕ್ಕಾಗಿ ಓದುವುದೇ ಇಲ್ಲ. ಅದನ್ನು ಓದುವದೆಂದರೆ ಒಬ್ಬ ವಕೀಲನು ವ್ಯಾಜ್ಯದ ರಿಕಾರ್ಡುಗಳನ್ನು ಓದುವಂತೆ ಬರೇ ಮರ್‍ಯಾದೆಯ ನಾಲ್ಕು ಕಾಸುಗಳನ್ನು ತಿರುಗಿಸುವ ಉದ್ದೇಶಕ್ಕಾಗಿಯೇ. ಈಗ ನೀವು ಅನಂದಕ್ಕಾಗಿ ಓದುತಿದ್ದರೆ ನಿಮ್ಮ ಸುತ್ತ ಏನೇ ನಡೆಯುತಿದ್ದರೂ ಅದೊಂದು ದೊಡ್ಡ ಪ್ರಮಾದವಾಗಲಾರದು. "ಸಂಧ್ಯಾರಾಗ"ವನ್ನಾಗಲಿ "ಮುಗಿದ ಯುದ್ಧ"ವನ್ನಾಗಲಿ ಭೂಕಂಪದ ನಡುವೆಯಾದರೂ ಓದಿ ಅನಂದ ಹೊಂದುವೆನು ಎಂದು ನನ್ನ ಭರವಸೆ.

ಆದರೆ ಒಂದು ವಿಷಯವನ್ನು ಒಂದು ಉದ್ದೇಶದಿಂದ ನೀವು ಓದುವುದಾದರೆ ಸರಿಯಾದ ಶಾಂತತೆಯು ನಿಮಗೆ ಬೇಕೇಬೇಕು. ಅದೇ ನನಗೆ ಒಕ್ಕದುದು ಆ ರೈಲು ಡಬ್ಬದಲ್ಲಿ. ಏಕೆಂದರೆ ನಾ ಹತ್ತಿದ ಎರಡನೇ ಸ್ಟೇಶನದಿಂದ ಇಬ್ಬರು ಮಹಾನುಭಾವರು ನಾ ಕುಳಿತ ಡಬ್ಬಕ್ಕೆ ಬಂದರು. ಅವರಲ್ಲೊಬ್ಬ ತನ್ನ ಉಳಿದ ಯಾತ್ರೆ ಮುಗಿವ ವರೆಗೂ ಅತನ ಗೆಳೆಯನೊಂದಿಗೆ ಬಲು ದೊಡ್ಡ ಅಟ್ಟಹಾಸದ ಸ್ವರದಲ್ಲಿ ಮಾತಾಡುತ್ತಿದ್ದ. ಈತನನ್ನು ನೋಡಿ ನನಗೆ ನನ್ನ ಸಹೋದ್ಯೋಗಿ ಅಚ್ಯುತನ ನೆನಪಾಯಿತು. ಅತನು ಇವನಂತಹ ಯಾರನ್ನಾದರೂ ಬಾಯ್ಬಡಕನನ್ನು ನೋಡಿದರೆ ಒಡನೆ ಅವನ ಬಳಿಗೆ ಹೋಗಿ "ಕ್ಷಮಿಸಿರಿ" ನೀವು ಯಾರಾದರೂ ಒಬ್ಬ ದೊಡ್ಡ ಮನುಷ್ಯರೇನು? ಎಂದು ಕೇಳಿಯೇಬಿಡುತ್ತಿದ್ದ. ಈ ಮಹಾನುಭಾವನೂ ಅಂತಹ ದೊಡ್ಡ ಮನುಷ್ಯರಲ್ಲೊಬ್ಬನೆನ್ನಬಹುದು. ನಾನು ನನ್ನ ಗಜೇಟಿನ ವಾಕ್ಯಗಳೊಂದಿಗೂ ಪುಟಗಳೊಂದಿಗೂ ಕುಸ್ತಿ ಮಾಡುತಿದ್ದಂತೆಯೇ ಈತನ ಸ್ವರವು ದೊಡ್ಡ ಬಿರುಗಾಳಿಯ ಮಟ್ಟಕ್ಕೇರಿತು. ಅವನ ಸಂಸಾರದ ಚರಿತ್ರೆ, ಅವನ ಮಕ್ಕಳ ಸತ್ಯಾಗ್ರಹ ಚಳವಳ, ಮಂತ್ರಿಗಳು ಹಾಗೂ ರಾಜಕೀಯ ಮುಂದಾಳುಗಳನ್ನು ಕುರಿತು ಅವನ ಟೀಕೆಗಳು ಇವೆಲ್ಲಾ ನನ್ನ ಬಡ ಪ್ರಯತ್ನಗಳ ಮುಂದೋಟವನ್ನು ಮುಳುಗಿಸಿಬಿಟ್ಟವು. ನಾನು ಗಜೇಟನ್ನು ಮಡಚಿ ಮೂಲೆಗಸೆದೆ. ಕಿಟಿಕಿಯಿಂದ ಮುಖ ಹೊರಹಾಕಿ ಬಳಲಿದವನಾಗಿ ಈ ಮಹಾನುಭಾವನ ಕ್ಷುಲ್ಲಕ ಸಿಡಿಲ ದನಿಯನ್ನು ಅಲಿಸತೊಡಗಿದೆ "ಈಗ ಮಂತ್ರಿ ಸ್ಥಾನ ಏನು ಮಾಡಬೇಕೆಂದರೆ" "ಜೇನವು ಮಾಡಿದ ದೊಡ್ಡ ತಪ್ಪೆಂದರೆ" "ನೆಹರೂವರಿಗೆ ಒಂದು ಬೆಂಬಲವಿದ್ದಿದ್ದರೆ" ನಿಮಗೆ ತಿಳಿದಿದೆ— ಇಂತಹ ತಿಂಡಿಯ ರುಚಿ. ಹೋ! ನಾನಿದನ್ನೆಲ್ಲ ಮೊದಲೇ ಬೇಕಾದಷ್ಟು ಸಲ ಕೇಳಿದ್ದೇನೆ. ಇದೆಲ್ಲ ಬಹಳ ಹಳೆಗಾಲದ ವಿಕಸ್ವರದ ನಳಿಗೆ ವಾದ್ಯದಲ್ಲಿ ಗೊತ್ತಿಲ್ಲದವ ಒಂದು ಹರಟೆ ಪದವನ್ನು ಬಾರಿಸಿದಂತಿತ್ತು.

ನಾನಾತನೊಡನೆ, ಸ್ವಲ್ಪ ಮೆಲ್ಲಗೆ ಮಾತಾಡಿದರೆ ಉಪಕಾರ ಎಂದು ಹೇಳಬಹುದಾಗಿತ್ತು. ಆದರೆ ಅತ ನನ್ನನ್ನು ಬರೇ ಒರಟನೆಂದು ತಿಳಕೊಂಡಾನೆಂಬುದರಲ್ಲಿ ಸಂದೇಹವೇ ಇದ್ದಿಲ್ಲ. ಬೇರೆಯವರಿಗೆ ಅತನ ಮಾತುಗಳನ್ನು ಕೇಳುವುದಕ್ಕಿಂತಲೂ ಬೇರೆ ಉತ್ತಮ ಕೆಲಸವಿರಬಹುದು ಎಂಬುದು ಆ ಪುಣ್ಯಾತ್ಮನಿಗೆ ತೋಚಲೇ ಇಲ್ಲ. ಇಷ್ಟು ಮಾತ್ರವಲ್ಲದೆ ಗಾಡಿಯಲ್ಲಿನ ಪ್ರಯಾಣವನ್ನು ಬಹಳ ಅನಂದದಾಯಕವಾಗಿ ಮಾಡಿದ್ದಕ್ಕಾಗಿಯೂ ತನ್ನ ವಿಶ್ವಾನುಭವವನ್ನು ಉಳಿದವರಿಗೆ ತಿಳಿಸಿದ್ದಕ್ಕಾಗಿಯೂ ಎಲ್ಲರೂ ತನಗೆ ಕೃತಜ್ಞರಾಗಿರಬೇಕು ಎಂದು ಖಾತ್ರಿಯಿಂದ ನಂಬಿಕೊಂಡೇ ಅತ [illegible]

[illegible]

ಬೇರೊಬ್ಬರ ಸುಖದುಃಖಗಳನ್ನು ಸರಿಯಾಗಿ ವಿಚಾರಿಸುವುದೇ ಸಾಮಾಜಿಕ ನಡತೆಯ ನೆಲೆಗಟ್ಟು. ಈ ದೃಷ್ಟಿಯಿಂದ ಸ್ತ್ರೀಯರು ಅಥವಾ ಪುರುಷರು ... ಪುರುಷರಿಗಿಂತ ಕಡಿಮೆ. ನಾಗರಿಕರು ಎಂಬ ಸಾಮಾನ್ಯ ದೂರನ್ನು ನಾನೂ ಒಪ್ಪಬೇಕಾಗಿದೆ. ಟಿಕೆಟ್ ಅಫೀಸಿನ ಮುಂದುಗಡೆ ಸಾಲಿನಲ್ಲಿ ಕಾಯುತ್ತಲೇ ಇದ್ದರೂ ನಿಮ್ಮ ಮುಂದೆ ಅವಳು ಮುನ್ನುಗ್ಗಿ ಮುಂದಾಗುವಳು ಎಂಬುದು ನನ್ನ ಸ್ವಂತ ಅನುಭವದ ಮಾತು. ಪುರುಷನು ಇದನ್ನು ಸಹಿಸಲಾರ. ಏಕೆಂದರೆ ಒಂದನೇ ಇಂತಹ ಸಂಭವಗಳನ್ನು ಅತ ಸಹಿಸಲಿಕ್ಕಿಲ್ಲ ಎಂಬುದು ಅತನಿಗೆ ಮನವರಿಕೆಯಾಗಿದೆ; ಎರಡನೇ ಇಂತಹ ಚಿಕ್ಕಪುಟ್ಟ "ಕೊಂಡು ಕೊಳ್ಳು"ಗಳ ಸಾಮಾಜಿಕ ಸಂಬಂಧಗಳಲ್ಲಿ ಅತನು ಹೆಚ್ಚಾಗಿ ಪಳಗಿದವನಿರುವುದರಿಂದ ನಾವು ಕಲಿತುಕೊಳ್ಳಬೇಕಾದ ಸಾಮಾಜಿಕ ಗುಣ, ನಡತೆಗಳನ್ನು ಅತನು ಪ್ರಪಂಚದ ಬಲು ದೊಡ್ಡ ಪ್ರವಾಹಕ್ಕೆ ಸಿಕ್ಕಿ ಕಷ್ಟಪಟ್ಟು ತಿಳಕೊಂಡಿರುತ್ತಾನೆ ಮತ್ತು ವಿದ್ಯಾರ್ಥಿ ಜೀವನ, ಸ್ವಾತಂತ್ರ್ಯಜೀವನ, ಆಟಪಾಟಗಳ ಸಮ್ಮೇಳನ ಇವೆಲ್ಲಾ ಈ ದೃಷ್ಟಿಯಿಂದ ಅತನನ್ನು ಹೆಚ್ಚು ಪಳಗಿಸಿವೆಯೆನ್ನಬಹುದು. ಆದರೆ ಸ್ತ್ರೀಯು ಅವುಗಳನ್ನೆಲ್ಲ ಈಗೀಗ ಹೊಂದುತ್ತಿದ್ದಾಳಷ್ಟೆ.

ದುರ್ಬಲರ ಹಾಗೂ ಸಾಧುಗಳ ಅಧಿಕಾರವನ್ನು ರಕ್ಷಿಸುವುದೆಂಬುದು ಅಲ್ಪಸಂಖ್ಯಾತರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವಷ್ಟೇ ಮುಖ್ಯವಾದುವೆಂದು ನನ್ನ ನಂಬಿಗೆ. ಕೆಲವು ಮೋಟರಿಸ್ಟರು ಬೇಕು-ಬೇಕೆಂತಲೇ ಹತ್ತಿರದವರು ಬೆದರಿ, ಬೆಚ್ಚಿ ಬೀಳುವಂತೆ ತಮ್ಮ ಮೋಟರಿನ ಹಾರ್ನನ್ನು ಉಪಯೋಗಿಸುತ್ತಾರಲ್ಲ! ಅದನ್ನು ಕೇಳಿದರೆ. ನನಗೆ- ನಿಮ್ಮಾತ ಸುಳ್ಳಲ್ಲ— ದೆಹಾತಿಯವರು ಹೈದರಾಬಾದು ಪ್ರಜೆಗಳನ್ನು ಕಾಲು ಕೆರೆದು ಜಗಳವಾಡಿ ಕುಳಿಯುತ್ತಿರುವಾಗ ಆದಂತೆ ಏನೋ ಒಂದು ರೀತಿಯಿಂದ ರಕ್ತವು ಕುದಿಯತೊಡಗುವದು. ಸ್ವಾಮಿ, ಮಹಾಶಯರೆ, ನಮ್ಮ ಹೆದ್ದಾರಿಯೊಡ್ಡಕನ್ನು ನಿಮ್ಮ ಆ ಹಾಳು, ಒರಟು ಅಬ್ಬರವನ್ನು ಸಿಕ್ಕಿಸಿಕ್ಕಿದವರ ಕಿವಿ ಕಿವುಡಾಗುವಂತೆ ಮಾಡುತ್ತಾ ಹೋಗಲು ನಿಮಗೆ ಯಾರು ಅಧಿಕಾರವಿತ್ತರು? ನಿಮ್ಮ ಹಾಜರಿಯನ್ನು ಒಬ್ಬ ಸಜ್ಜನನು ಪ್ರಕಟಿಸುವಂತೆ ಪ್ರಕಟಿಸಲು ನಿಮಗೆ ಬರುವುದಿಲ್ಲ

(೧೩ನೆಯ ಪುಟಕ್ಕೆ)

ಸ್ವಾತಂತ್ರ್ಯದಿನಕ್ಕಾಗಿ ಮುಖ್ಯಮಂತ್ರಿಗಳು ಕೊಟ್ಟ ಸಂದೇಶ

ನಮ್ಮ ಸ್ವಾತಂತ್ರ್ಯದ ಈ ಎರಡನೆಯ ವಾರ್ಷಿಕೋತ್ಸವದ ದಿನ ಕಳೆದ ವರ್ಷದಲ್ಲಿ ಸಾಧಿಸದ್ದನ್ನೂ ಸಾಧಿಸಿದ್ದನ್ನೂ ಗಣನೆಗೆ ತೆಗೆದುಕೊಂಡು, ಮುಂದಿನ ವರ್ಷ ನಾವು ಮಾಡಬೇಕಾಗಿರುವ ಮಹಾಕಾರ್ಯಕ್ಕಾಗಿ ಸಿದ್ಧರಾಗಬೇಕಾಗಿದೆ. ನಾವು ಮಾಡುವ ಕಾರ್ಯ ಮತ್ತು ಸಾಧಿಸುವ ಸಿದ್ಧಿಗಳಿಂದಲ್ಲದೆ, ಆಡುವ ಮಾತುಗಳಿಂದ ನಮ್ಮ ಬೆಲೆಯನ್ನಾರೂ ನಿರ್ಣಯಿಸುವುದಿಲ್ಲ.

ಈ ಬರಲಿರುವ ವರ್ಷದಲ್ಲಿ ಭಾರತದ ಪ್ರಜಾರಾಜ್ಯ ಅಸ್ತಿತ್ವದಲ್ಲಿ ಬರುವುದು ಮತ್ತು ನಮ್ಮ ನಾಡಿನ ಜೀವನೇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಗುವುದು. ಪರಿವರ್ತನೆಯ ಒಂದು ಕಾಲಾವಧಿ ಮುಗಿದು ಮತ್ತೊಂದು ಆರಂಭಿಸುವುದು. ನಿಧಾನವಾಗಿಯಾದರೂ ಖಂಡಿತವಾಗಿ, ನಮ್ಮಲ್ಲಿಯ ಅನೇಕರು ಕಟ್ಟಲು ಜೀವಾವಧಿ ಶ್ರಮಿಸಿದ ಭಾರತೀಯ ಪ್ರಜಾರಾಜ್ಯದ ಅಸ್ತಿವಾರವನ್ನು ನಾವು ಹಾಕುವೆವು.

ಆದಾಕಾರಣದಿಂದ ನಾವು ಭಾರತದ ಯಾವುದಾದರೊಂದು ಪಕ್ಷದ, ಉಪಜಾತಿಯ ಅಥವಾ ಪ್ರಾಂತದ ಹಿತವನ್ನು ಎಣಿಸದೆ, ಸಮಗ್ರ ಭಾರತದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ವೋದಯಕ್ಕಾಗಿ ಕೆಲಸ ಮಾಡಲು ಬದ್ಧರಾಗಬೇಕಾಗಿದೆ; ಎಲ್ಲಕ್ಕಿಂತ ಹೆಚ್ಚಾಗಿ, ಅನೇಕಾನೇಕ ಹೊಣೆಗಳನ್ನು ಹೊತ್ತಿರುವ ಸಾಮಾನ್ಯ ಪ್ರಜೆಗಳ ಯೋಗಕ್ಷೇಮವನ್ನು ಮೊದಲು ಎಣಿಕೆಗೆ ತಂದುಕೊಳ್ಳಬೇಕು-ಅವರ ಸುಖಸಂತೋಷ ಸಂತೃಪ್ತಿಗಳ ಮೇಲೆಯೇ ಭಾರತದ ಭವಿತವ್ಯತೆ ಕೊನೆಯದಾಗಿ ಅವಲಂಬಿಸಿದೆ. ಆರ್ಥಿಕ ಸಂಕಟಗಳು ಅವರ ಮೇಲೆ ಆಘಾತಮಾಡಿವೆ; ಅದರಲ್ಲೂ ಮಧ್ಯವರ್ಗದವರಿಗೆ ಮತ್ತಷ್ಟು ಬಲವಾಗಿ ಅವು ಪೆಟ್ಟುಕೊಟ್ಟಿವೆ. ಇದು ನಮ್ಮ ಹಣೆಬರಹ ಮಾತ್ರವಲ್ಲ, ಜಗತ್ತಿನ ಬಹುಭಾಗದವರಿಗೆ ಇಂಥ ದುರ್ಗತಿ ಪ್ರಾಪ್ತವಾಗಿದೆ.

ಎಲ್ಲಕ್ಕಿಂತ ಹೆಚ್ಚಾಗಿ ನಾವು ಒಂದನ್ನು ನೆನಪಿಟ್ಟುಕೊಳ್ಳಬೇಕು. ನಾವು ಯಾವ ಆರ್ಥಿಕ ಅಥವಾ ಇತರ ಧೋರಣವನ್ನು ಅನುಸರಿಸಿದರೂ ಅದು ಸಫಲವಾಗಬೇಕಾದರೆ ದೇಶದಲ್ಲಿ ಶಾಂತಿ ಸುವ್ಯವಸ್ಥೆ ಮತ್ತು ಸ್ಥಾಯಿ ಪರಿಸ್ಥಿತಿಗಳಿರುವುದು ಅವಶ್ಯವಿದೆ. ಅರಾಜಕತೆ ಅವ್ಯವಸ್ಥೆಗಳಿಂದ ಪ್ರಯೋಜನಕ್ಕೆ ಬರುವ ಯಾವುದೂ ಸಾಧಿಸದು. ಆದುದರಿಂದ ಭಾರತಹಿತೇಚ್ಛುವಾದ ಪ್ರತಿಯೊಂದು ವ್ಯಕ್ತಿಯೂ ಹಿಂಸೆ ಅವ್ಯವಸ್ಥೆಗಳನ್ನು ಎದುರಿಸಬೇಕು. ಅಲ್ಲದೆ, ಸ್ವತಂತ್ರ ಹಿಂದುಸ್ತಾನದ ಅನಿರ್ಬಂಧ ನಾಗರಿಕನಾಗಿರುವುದರಿಂದ ಪ್ರತಿಯೊಬ್ಬನೂ ತಾನು ಕರ್ತವ್ಯ ಮತ್ತು ಹೊಣೆಗಳ ಭಾರವನ್ನು ಕೆಲಮಟ್ಟಿಗೆ ಹೊರಬೇಕೆಂಬುದನ್ನು ಅರಿತುಕೊಳ್ಳಬೇಕಾಗಿದೆ. ಎಷ್ಟೇ ಒಳ್ಳೆಯವಿರಲಿ, ಸರಕಾರಗಳು ಮಿತಪ್ರಪಂಚದಲ್ಲಷ್ಟೇ ಕರ್ತವ್ಯವನ್ನು ಪಾಲಿಸಬಲ್ಲವು. ಯಾವುದಾದರೊಂದು ಮಹಾಸೇವೆ:ಸ್ಯೆಯನ್ನು ಬಿಡಿಸುವದರಲ್ಲಿ ಪ್ರಜಾಪ್ರಭುತ್ವ ಘಟಿತ ಸರಕಾರಕ್ಕೆ ಇತರೆ ಸರಕಾರಗಳಿಗಿಂತ ಹೆಚ್ಚಾಗಿ ಜನತೆಯ ಸಂಪೂರ್ಣ ಸಹಕಾರ ಮತ್ತು ಶ್ರಮಗಳು ಅವಶ್ಯಕವೆನಿಸುತ್ತವೆ.

ಭಾರತದ ಬಗೆಬಗೆಯ ಗುಂಪುಗಳಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ ಮತ್ತು ಬಹಳ ಟೀಕೆಗಳೂ ಎದ್ದಿವೆ. ಅದರಲ್ಲೂ ಆತ್ಮವಿಮರ್ಶೆ ಹೆಚ್ಚಾಗಿದೆ. ಟೀಕೆ ಆತ್ಮವಿಮರ್ಶೆಗಳಿಗೆ ಯಾವಾಗಲೂ ಸ್ವಾಗತವಿದೆ, ಆದರೆ ಯಾರೂ ಕರ್ತವ್ಯವನ್ನು ಬದಿಗೊತ್ತಿ ಟೀಕಿಸುವುದರಲ್ಲೇ ಕಾಲಕಳೆಯುತ್ತಿರಬಾರದು. ಇಂದು ಭಾರತ ತನ್ನ ಪ್ರಜೆಗಳಿಂದ ಕಾರ್ಯವನ್ನು ಅಪೇಕ್ಷಿಸುತ್ತದೆ.

ಮಾನವಕುಲದ ಪ್ರಾಥಮಿಕ ಅವಶ್ಯಕತೆ ಜೊತೆಸಿದ ಆಹಾರಸಮಸ್ಯೆ ನಮ್ಮೆದುರಿಗಿದೆ. ಇದಕ್ಕೆ ನಾವು ಪ್ರಥಮ ಸ್ಥಾನವನ್ನು ಕೊಟ್ಟಿದ್ದೇವೆ ಮತ್ತು ಇದರಲ್ಲಿ ನಮಗೆ ದೊರೆಯುವ ಜಯದ ಪ್ರಮಾಣವೇ ವಿಶಾಲ ಅರ್ಥಕ್ಷೇತ್ರದಲ್ಲಿ ದೊರೆಯಬಹುದಾದ ಜಯವನ್ನು ನಿರ್ಣಯಿಸುವದು. ಅಪವ್ಯಯವನ್ನು ಬಿಡುವದರಿಂದ ಮತ್ತು ಒಂದಲ್ಲ ಒಂದು ಬಗೆಯಿಂದ ಆಹಾರ ಪದಾರ್ಥಗಳನ್ನು ಬೆಳೆಸುವದರಿಂದ ಪ್ರತಿಯೊಬ್ಬ ಸ್ತ್ರೀ ಅಥವಾ ಪುರುಷನೂ ಆಹಾರೋತ್ಪಾದನೆಯಲ್ಲಿ ನೆರವಾಗಬಹುದಾಗಿದೆ. ಆಹಾರದಲ್ಲಿ ನಾವು ಸ್ವಾವಲಂಬಿಗಳೆನಿಸುವ ವರೆಗೆ ಪರಾವಲಂಬಿತ್ವ ನಮಗೆ ತಪ್ಪದು. ಆದುದರಿಂದ ನಮ್ಮಲ್ಲಿಯ ಪ್ರತಿಯೊಂದು ವ್ಯಕ್ತಿಯೂ ನಮ್ಮೆದುರಿರುವ ಈಗಲೇ ಮಾಡತಕ್ಕ ಕಾರ್ಯ ಕೈಕೊಳ್ಳಲಿ. ಈ ಕಾರ್ಯದಿಂದ ಹೆಚ್ಚಿನ ಸಹಕಾರವು ವಿಕೇಂದ್ರಿತ ಪ್ರಯತ್ನದಲ್ಲಿ ದೊರಕುವಂತಾಗುವದು; ಆ ಸಹಕಾರದಿಂದ ಇತರ ಅನೇಕ ಸಮಸ್ಯೆಗಳು ಬಗೆಹರಿಯುವವು.

ನಾವು ನಮ್ಮ ಶ್ರದ್ಧೆಯ ಲಂಗರನ್ನು ಬಿಗಿಯಾಗಿ ಹಿಡಿದು ನಿಂತರೆ ಎಲ್ಲವೂ ಸರಿಹೋಗುವುದು. ಅದೆಂದರೆ ರಾಷ್ಟ್ರಪಿತನ ಸಂದೇಶವನ್ನೂ ಈಗ ರೂಪಿತವಾಗುತ್ತಿರುವ ಹೊಸ ಘಟನೆಯ ಉಪೋದ್ಘಾತದಲ್ಲಿ ಸ್ಫುಟವಾಗಿ ಹೇಳಿರುವ ಪ್ರಜಾಪ್ರಭುತ್ವದ ಧ್ಯೇಯಗಳನ್ನೂ ನೆನಪಿಟ್ಟುಕೊಳ್ಳುವುದು.

ಇದು ನಮಗೆ ಐತಿಹಾಸಿಕ ಮಹತ್ವವುಳ್ಳ ದಿನ. ಇಂದು ಮಹಾತ್ಮಾಗಾಂಧಿಯವರನ್ನೂ ಅವರ ಉಪದೇಶಗಳನ್ನೂ ಭಯಭಕ್ತಿಪೂರ್ವಕವಾಗಿ ಧ್ಯಾನಿಸಿ, ಬಂಧ ವಿಮೋಚನೆಯ ಹಾದಿಯಲ್ಲಿ ನಮ್ಮನ್ನು ನಡೆಸಿಕೊಂಡು ಹೋದ ಆತನಿಗೆ ತಕ್ಕವರಾಗಿ ಬಾಳಲು ಬದ್ಧಪ್ರತಿಜ್ಞರಾಗೋಣ.

–(ಸಹಿ) ಜ. ನೆಹರು.

Power of Nonviolence
(ಅಹಿಂಸಾ ಪ್ರಭಾವ)

"ಇದೊಂದು ಹೊಸ ಮಾದರಿಯ ಪುಸ್ತಕ. ಪುಸ್ತಕದ ಹೆಸರು ನೋಡಿದರೆ ಇದು ಇನ್ನೊಬ್ಬ ಕನಸಿಗನ ಪುಸ್ತಕವೆಂದೂ ಪುನಃ ಯಾರೋ ಒಬ್ಬ ತಾತ್ವಿಕನು ತನ್ನ ಕಣ್ಣು ಕೋರೈಸುವ ಕಾಮನಬಿಲ್ಲನ್ನು ರಚಿಸಿದ್ದಾನೆಂದೂ ಅದಾದರೂ ಯಾವಾಗಲೂ ಆಕಾಶದಲ್ಲೇ ಹಬ್ಬಿದ್ದೀತಲ್ಲದೆ ಭೂಮಿಯನ್ನು ಎಲ್ಲಿಯೂ ಮುಟ್ಟುವ ಸಂಭವವಿಲ್ಲೆಂದೂ ಯಾರಾದರೂ ಬಗೆಯುವ ಸಂಭವವಿದೆ.

"ಆದರೆ ಓದುಗನಿಗೆ ಈ ಪುಸ್ತಕದಲ್ಲಿರುವುದು ಬರಿ ಇನ್ನೊಂದು ಕನಸಲ್ಲ, ಕಾಮನಬಿಲ್ಲಿನ ವೈಖರಿಯೂ ಅಲ್ಲವೆಂದು ಬೇಗನೆ ಕಂಡುಬರುವದು. ಈ ಪುಸ್ತಕದಲ್ಲಿ ಧ್ಯೇಯವಾದವೆಷ್ಟಿದೆಯೋ ಅಷ್ಟೇ ವ್ಯವಹಾರವಾದವೂ ಇದೆ. ಈಗಿರುವದರೊಡನೆ ಇರಬೇಕಾದ ಬಗೆಯನ್ನು ಬೆರೆಸಿದ ಮಧುರ ಮಿಶ್ರಣವಿದು. ಏನಿಲ್ಲೆಂದರೂ ಈ ಲೇಖಕನ ಮಟ್ಟಿಗಾದರೂ ಅವನಿಗೆ "ಇರಬೇಕೆನಿಸುವ" ಬಗೆಯಲ್ಲ "ಈಗಿರುವ" ಬಗೆಯಿಂದಲೇ ಹುಟ್ಟಿ,–ಅಲ್ಲಿಂದಲೇ ಮೇಲೇರಿ, ಅಲ್ಲಿಯೇ ಬೇರೂರಿದೆ. ಕಾಲ್ಪನಿಕ ವಿಲಾಸಗಳು ಆಕಾಶಬಾಣಗಳಂತೆ ಏರುವದನ್ನು ಪ್ರೇಕ್ಷಿಸಲು ನಮಗೀ ಪುಸ್ತಕ ಕೇಳಿಕೊಳ್ಳುವದಿಲ್ಲ. ಇಲ್ಲಿ ಜೀವನವು ತನ್ನ ವ್ಯಕ್ತಿತ್ವವನ್ನು ತೋರಿಸುವ ಸಾರ್ಥಕವಾದ ರೀತಿಯೊಂದನ್ನು ಜಾಗರೂಕತೆಯಿಂದ ತರ್ಕಶುದ್ಧವಾಗಿ ಹೆಣೆದು ತೋರಿಸಿ ಅದರ ಪರಮ ಯೋಗ್ಯತೆಯನ್ನು ಆಚರಣೆಯ ಒರೆಗೆ ಹಚ್ಚಿ ಸಿದ್ಧಗೊಳಿಸಲಾಗಿದೆ.

× × ×

"ಇದೊಂದು ಕಟ್ಟುಕಥೆ ನಿಜ. ಆದರೆ ಅದು ಅತ್ಯಂತ ಘನತರವಾದೊಂದು ಸತ್ಯವನ್ನು ಧ್ವನಿಸುತ್ತದೆ. ದೇವರ ಸಹಾಯದಿಂದ ಮನುಷ್ಯರು ಈ ಭೂಮಿಯ ಮೇಲೆ ಹೊಸದೊಂದು ಶಾಶ್ವತತರವಾದ ಜಗತ್ತನ್ನು ಕಟ್ಟಬಲ್ಲರೆಂಬ ಶ್ರದ್ಧಾವಿಶ್ವಾಸಗಳುಳ್ಳವರು ಮಾತ್ರವೇ ನಮ್ಮನ್ನು ನಮ್ಮ ಧ್ಯೇಯರಾಜ್ಯದತ್ತ ಕರೆದೊಯ್ಯಬಲ್ಲರು. ಈ ಪುಸ್ತಕದ ಕರ್ತರಲ್ಲಿ ಈ ವಿಶ್ವಾಸ ಆಳವಾಗಿ ಬೇರೂರಿದೆ. ಅವರು ಅದನ್ನು ಚನ್ನಾಗಿ ಪ್ರತಿಪಾದಿಸಿದ್ದಾರೆ." (ಮೊದಲನೆಯ ಆವೃತ್ತಿಗೆ ಡಾ. ರೂಫಸ್ ಜೋನ್ಸರು ಬರೆದ ಮುನ್ನುಡಿಯಿಂದ)

"ಈ ಪುಸ್ತಕದ ಮೊದಲನೆ ಆವೃತ್ತಿ ೧೯೩೫ ರಲ್ಲಿ ಪ್ರಕಟವಾಗಿತ್ತು. ಈಗ ಅದರ ಪ್ರತಿಗಳು ಅಲಭ್ಯವಾಗಿವೆ. ಮೊದಲನೆಯ ಆವೃತ್ತಿಯಲ್ಲಿ ವಿಚಾರಿಸಿರದ ಎಷ್ಟೋ ಪ್ರಶ್ನೆಗಳು ಈಚೆಗಿನ ಘಟನೆಗಳಿಂದ ಉದ್ಭವಿಸಿವೆ." ಅದು ಕಾರಣವೇ ಈ ಆವೃತ್ತಿ. ಲೇಖಕರು ಮೊದಲನೆಯ ಆವೃತ್ತಿಯಲ್ಲಿದ್ದ ೮ ಅಧ್ಯಾಯಗಳನ್ನೂ ಅವುಗಳಿಗೆ ಸಂಬಂಧಿಸಿದ ಟಿಪ್ಪಣಿಗಳನ್ನೂ ಈ ಆವೃತ್ತಿಯಿಂದ ಲುಪ್ತಗೊಳಿಸಿ, ಹೊಸ ಮೂರು ಅಧ್ಯಾಯಗಳಲ್ಲಿ ವಿಷಯದ ವ್ಯಾವಹಾರಿಕ ಅಂಶಗಳನ್ನು ಚರ್ಚಿಸಿದ್ದಾರೆ. 'ಅದರ ಆಕಾರ ಕುಗ್ಗಿದ್ದರಿಂದ ಅದರ ಬೆಲೆಯೂ ಕಡಿಮೆಯಾದ ಕಾರಣ ಅದು ವಿಶಾಲತರವಾದ ವಾಚಕ ಮಂಡಲಿಯನ್ನು ಪಡೆದೀತು'. ಆದರೆ ಹಳೆಯ ಅಧ್ಯಾಯಗಳಲ್ಲಿ ಕೆಲವು ತುಂಬ ಬೋಧಪ್ರದವಾಗಿದ್ದುದರಿಂದ ಅವನ್ನು ಬಿಟ್ಟದ್ದನ್ನು ಅನೇಕರು ಮೆಚ್ಚಲಿಕ್ಕಿಲ್ಲ.

ಕಿ. ಘ. ಮ.

(ಪುಸ್ತಕವನ್ನು ಪ್ರಕಾಶಗೊಳಿಸಿದವರು ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ ರೂ. ೨|೮)



ಇಂಡೋನೇಶಿಯದ ಪ್ರಜಾರಾಜ್ಯದ ಮುಖ್ಯ ಮಂತ್ರಿ ಡಾ. ಹಾಟ್ಟಾರು ಕಳೆದ ವಾರ ಹೊಸ ದಿಲ್ಲಿಗೆ ಬಂದಾಗ ವಿಮಾನ ನಿಲ್ದಾಣದಲ್ಲಿ ಪಂ. ನೆಹರು ಅವರನ್ನು ಎದುರುಗೊಂಡರು ಪಂ. ನೆಹರು ಅವರ ಎಡಕ್ಕೆ ಕಾಣಿಸುವವರೇ ಡಾ. ಹಾಟ್ಟರು. ಅವರಿಗಿಂತಲೂ ಎಡಕ್ಕೆ ಕಾಣುವವರು ಭಾರತದಲ್ಲಿ ಡಚ್ ರಾಯಭಾರಿಗಳು. ಬಲತುದಿಯಲ್ಲಿ ಕಾಣುವವರು ಇಂಡೋನೇಶಿಯದಲ್ಲಿ ಭಾರತ ಪ್ರತಿನಿಧಿ ಶ್ರೀ ಯೂನಸರು.

ಮುಖ್ಯಮಂತ್ರಿಗಳ ಸ್ವಾತಂತ್ರ್ಯೋತ್ಸವದ ಸಂದೇಶ
ಹೊರನಾಡಿನಲ್ಲಿರುವ ಭಾರತೀಯರಿಗಾಗಿ

ಭಾರತಕ್ಕೆ ಸ್ವಾತಂತ್ರ್ಯ ಬಂದ ಎರಡನೆಯ ಹಾದ ಈ ವಾರ್ಷಿಕೋತ್ಸವದ ದಿನದಲ್ಲಿ ಹೊರನಾಡುಗಳಲ್ಲಿರುವ ಸ್ವದೇಶೀಯರಿಗೆ ನಾನು ಅಭಿನಂದನೆಯನ್ನು ಕಳಿಸುತ್ತೇನೆ. ಈಗ ಕಳೆದ ವರ್ಷದಲ್ಲಿ ನಾವು ಎಷ್ಟೋ ಕಾರ್ಯಗಳನ್ನು ಸಾಧಿಸಿದೆವು; ಮತ್ತು ನಾವು ಎಷ್ಟೋ ಅಪಾಯಕರ ಸನ್ನಿವೇಶಗಳನ್ನು ಎದುರಿಸಿದೆವು. ನಾನಾ ಬಗೆಯಿಂದ ನಾವು ಸಾಧಿಸಲು ಯತ್ನಿಸಿದ್ದರಲ್ಲಿ ಜಯಶೀಲರಾಗಲಿಲ್ಲ. ಸಂಕಟಕಂಟಕಗಳೆದುರಿಸುತ್ತಿದ್ದರೂ ನಾವು ಹೊಸ ವರ್ಷವನ್ನು ಧೈರ್ಯ, ಆತ್ಮವಿಶ್ವಾಸ ಮತ್ತು ಭಾರತದ ಭವಿತವ್ಯತೆಯಲ್ಲಿಟ್ಟ ಸಂಪೂರ್ಣ ಶ್ರದ್ಧೆಗಳಿಂದ ಪ್ರವೇಶಿಸುತ್ತೇವೆ. ಹೊರನಾಡಿನಲ್ಲಿರುವ ನಮ್ಮ ಅಧಿಕಾರಿಗಳೆಲ್ಲರೂ ಯಾವ ಕಾಲದಲ್ಲೇ ಆಗಲಿ, ಭಾರತದ ಸೇವೆ ಮಾಡುವುದೊಂದು ಹೆಚ್ಚಿನ ಹಕ್ಕು ಮತ್ತು ಹೊಣೆ ಎಂದು ಯಾವಾಗಲೂ ಸ್ಮೃತಿಪಥದಲ್ಲಿಟ್ಟುಕೊಳ್ಳಬೇಕು. ಅದರಲ್ಲೂ ಈ ಮಹತ್ವದ ಬದಲಾವಣೆಯ ಮತ್ತು ರೂಪಾಂತರದ ಅವಧಿಯಲ್ಲಿ ಭಾರತದ ಸೇವೆ ಮತ್ತಷ್ಟು ಹೊಣೆಗಾರಿಕೆಯದು ಎಂಬುದು ನೆನಪಿರಲಿ. ಭಾರತದ ಹೆಸರನ್ನು ಅಕಲಂಕವೂ ಶುಭ್ರವೂ ಆಗಿ ಉಳಿಯುವಂತೆ ಮಾಡಬೇಕಲ್ಲದೆ, ಹಿಂದೆ ನಮ್ಮನ್ನು ಕಾರ್ಯಕ್ಕೆ ಪ್ರೋತ್ಸಾಹಿಸಿದ ಮತ್ತು ಇಂದು ನಮಗೆ ಸ್ಫೂರ್ತಿಕೊಡುತ್ತಿರುವ ಧ್ಯೇಯಗಳನ್ನು ಅವರು ಕಣ್ಣೆದುರಿಟ್ಟುಕೊಳ್ಳಬೇಕು. ಆದುದರಿಂದ ಈ ಬರಲಿರುವ ವರ್ಷದಲ್ಲಿ ನಾವು ಪುನಃ ಭಾರತದ ಸೇವೆಗಾಗಿ ನಮ್ಮನ್ನು ಮುಡುಪಿಟ್ಟುಕೊಳ್ಳಬೇಕು.

– (ಸಹಿ) ಜ. ನೆಹರು.

ವ್ಯಾಪಾರಲೋಕ.

ಮುಂಬಯಿ ಶೇರಪೇಟೆ

	ತಾ. ೧೧
ಮುಂಬಯಿ ಡಾಯಿಂಗ್	೧೦೪೫-೦-೦
ಕೋಹಿನೂರು	೨೩೯-೦-೦
ಸ್ವದೇಶಿ	೨೫೩-೦-೦
ಗೋಕಾಕ	೨೫೨-೦-೦
ಸೆಂಚುರಿ	೨೭೮-೧೨-೦
ಸಿಂಪ್ಲೆಕ್ಸ	೧೬೭-೦-೦
ಟಾಟಾ ಸ್ಟೀಲ ಡೆಫರ್ಡ	೧೩೯೭-೮-೦
ಇಂಡಿಯನ್ ಅಯರ್ನ	೨೩-೧೧-೦
ಅಸೋ. ಸಿಮೆಂಟ್ಸ	೧೪೨-೮-೦
ಸೆಂಟ್ರಲ ಬ್ಯಾಂಕ್	೮೦-೦-೦
ಇಂಪೀರಿಯಲ್ (ಪೂರ್ಣ)	೧೬೩೮-೧೨-೦

ಚಿನ್ನ ಬೆಳ್ಳಿ

	ತಾ. ೧೧
ತಯಾರಿ ಬೆಳ್ಳಿ	೧೬೨-೮-೦
ತಯಾರಿ ಚಿನ್ನ	೧೧೫-೧೨-೦
ಸಾವರಿನ	೭೪-೮-೦

ಅರಳೆ

ಸೆಪ್ಟೆಂಬರ	೬೨೫.೦.೦

ಎಣ್ಣೆಕಾಳು

ಶೇಂಗಾ	೨೦೭-೮-೦

ಸಾಂಗಲಿ ಪೇಟೆ

	ತಾ. ೧೦
ಅರಿಸಿಣ(ಹೇರು)	೧೦೭-೧೦೪
ಮೆಣಸಿನಕಾಯಿ(ಹೇರು)	೧೯೦-೧೬೫
ಶೇಂಗಾ(ಖಂಡಿ)	೧೫೮-೦-೦
ಬೆಲ್ಲ(ಹೇರು)	೭೫.೮೦

ಶಿವಮೊಗ್ಗ ಅಡಿಕೆ ಪೇಟೆ

	ತಾ. ೧೧
ದೇಶಾವರ ನಂ. ೧ (ಮಣಕ್ಕೆ)	೪೧-೪೪
,, ೨	೩೯-೪೦
,, ೩	೩೬-೩೮
ರಾಜಾ ಅಲವು	೩೮-೪೦
ಕೊರಸಾಲು	೩೫-೩೮
ಬೆಟ್ಟೆವಂತಿ	೧೮-೨೦
ಬೆಟ್ಟೆ	೧೬-೧೮
ಪಟಿನ್	೪೨-೪೪

ಬೇಡಿಕೆ ಚನ್ನಾಗಿದೆ. ಸಾರಿಗೆಯ ಸೌಕರ್ಯವೂ ದೊರೆಯುತ್ತಿದೆ. ಬೆಲೆಗಳು ಏರುವ ಸಂಭವವಿದೆ. ಈ ವರ್ಷ ಬೆಳೆ ಚನ್ನಾಗಿರುವದೆಂದು ನಿರೀಕ್ಷಿಸಲಾಗಿದೆ. ಈ ವರೆಗೆ ರೋಗಗಳ ಸುದ್ದಿಯಿಲ್ಲ.

ಹುಬ್ಬಳ್ಳಿ
(ಅ. ಪ್ರೊ. ಮಾರ್ಕೆಟ ಕಮಿಟಿ ಹುಬ್ಬಳ್ಳಿ)

		ತಾ. ೧೧	
ಜಪೊ. ಹತ್ತಿ (ನಗಕ್ಕೆ)	ವ್ಯಾಪಾರ ನಡೆಯಲಿಲ್ಲ.		
ಅಪ್ಲಂಡ ಹತ್ತಿ	,,	,,	,,
ಜೇಸ್ ಅರಳೆ	,,	೪೧೨.೦.೦	೪೪೨.೦.೦
ಡಬಲ್ ರೋಲ್ ಅರಳೆ		೪೦೦.೦.೦	೪೨೪.೦.೦
ಕುಸುಬಿ (ಬ. ಮಣಕ್ಕೆ)		೧೫-೧೨	೦೧೬-೦-೬
ಅಗಸಿ (ಚೀಲಕ್ಕೆ)		೪೪.೦.೦	೪೪.೦.೦
ಜೋಳ	,,	೪೫.೦.೦	೪೬.೦.೦
ಜ. ಹೆಸರು	,,	೪೨.೦.೦	೪೪-೦-೦
ಕರಿ ಎಳ್ಳು	,,		೬೪.೦.೦
ಬಿಳಿ ಎಳ್ಳು	,,	೮೦.೦.೦	೮೪.೦.೦
ಕಡಲೆ	,,	೫೧.೦.೦	೫೪.೦.೦
ಉದ್ದು	,,	೪೬.೦.೦	೪೯-೦-೦
ಜ. ತೊಗರಿ	,,	೨೮.೦.೦	೪೦-೦-೦
ಹುರಳಿ	,,	೪೨.೦.೦	೪೪-೦-೦
ಕೆಂ. ಅಲಸಂದಿ	,,	೫೧.೦.೦	೫೪.೦.೦
ಬಿ. ಅಲಸಂದಿ	,,	೫೦-೦-೦	೫೬-೦-೦
ಬೆಲ್ಲ (ಹೇರಿಗೆ ೮ ಮಣ)		೬೪.೦.೦	೬೮.೦.೦
ಶೇಂಗಾ (ಹೇರು)		೪೮.೦.೦	೫೦-೦-೦
ಶೇಂಗಾ ಕಾಳು		೮೦.೦.೦	೮೪.೦.೦

Reg. No. B. 3148

LICENCE No 3
Licensed to Post without Prepayment

KARMAVEER 15-8-49

ಪಾರಿಯ ಕಟ್ಟಳೆ

(ಹಿಂದಿನ ಪುಟದಿಂದ)

ಹೇಗೆ? ಏಕೆ, ನನ್ನ ಪ್ರಕಾರ ನೀವು ಹೋಗ ಬಾರದೇಕೆ? ಹೀಗೇಕೆ ಮಾಡಬಾರದು. ಒಬ್ಬ ಮನುಷ್ಯ ಮನುಷ್ಯನಿಗೆ ಅಲ್ಲ ರಾಜ ಮಹಾರಾಜರ ಹಕ್ಕುಗಳನ್ನು ಪ್ರಯೋಜಿಸುವ ಆಗ್ನೆ ಏನು? ನನಗೆ ಕೆಲ ಸಲ ಬಹಳ ಆಶ್ಚರ್ಯ ವಾಗುತ್ತದೆ. ಈ ತರಹದ ಮನುಷ್ಯ ಹಕ್ಕು! ಈ ಜಗತ್ತಿನ ಪ್ರಕಾರದಲ್ಲಿ ಇದು ಮಹಾ ಶ್ರೇಷ್ಠವಾದ ವ್ಯಕ್ತಿ ಎಂಬುದನ್ನು ತಿಳಿದುಕೊಳ್ಳದೆ ಆ ಪಾರಿಯ ಗೊತ್ತಿನಂತಹದರಲ್ಲಿ ಕೇಳುತ್ತಿರುವುದನ್ನು! ಎಂದು.

ಒಬ್ಬ ಒಂದು ಅಭ್ಯರ್ಥಿ (ಒಂದುಭಾಗ) ದೊಡ್ಡಮನುಷ್ಯ ಹಲ ಪಟ್ಟಿಗೆಯನ್ನು ತಂದು, ತಿಮ್ಮ ರಜಾ ದಿನದ ಹತ್ತಿರ ಹೊತ್ತಿನಲ್ಲಿ ಆ ಒಡಲು ಪಟ್ಟಿಗೆ ಯನ್ನು ಬಿಚ್ಚುತ್ತಾನೆ. ಎಲ್ಲ ಕಿಟಕಿ, ಬಾಗಿಲುಗಳನ್ನು ತೆರೆದಿಟ್ಟು, "ನಿಯೂ ಫರ್ ಆಜಾ" ಅಥವಾ ಇದೇ ತರದ ಕಸದ ಗಲಿಬಿಲಿ ವಾದ್ಯಗಳ ಧ್ವನಿಯನ್ನು ಎಲ್ಲ ರಾಜ ಬೀದಿಗಳೂ ಗದ್ದಲಮಯವಾಗುವಂತೆ ಬಾರಿಸುತ್ತಾನೆನ್ನಿ. ಇದಕ್ಕೇನೂ ಕಾನೂನು ಕೊಂದರೆ ಕೊಡುವದ ರಿಂದ ಭಾವಿಸಬೇಕು. ಈ ತರಹದ ಸಂದರ್ಭ ದಲ್ಲಿ ಸಮಾಜದ ಸಾಮಾನ್ಯ ನಡವಳಿಕೆಯು ಬಿಟ್ಟು ಹೋಗುವದೇಕೆ? ಆದೇ ರೇಡಿಯೋ ವಾದ್ಯ ದಷ್ಟೇ ಉದಾಹರಣೆಗೆ ತೆಗೆದುಕೊಳ್ಳುವ. ಹೆಚ್ಚಿ ನ ಜನ ಕೇಳುವಂತೆ ತೆರೆಯುವದರಿಗಿಲ್ಲ ಇವನೊಬ್ಬ ಮಹಾ ಶೋಕಪ್ರಿಯನೇ. ಆದರೂ ಈ ಭಯಂಕರ ವಾದ್ಯವನ್ನು ಕಲಿಯುವ ಅಧಿಕಾರವು ಅವನಿಗೆ ತನ್ನ ಮನೆಯಲ್ಲಿ ಇದೆ. ಆದರೆ ಆ ಸಿಡಿಲಿನ ಹಾಗೆ ಮತ್ತು ಸಾಧ್ಯವಿದ್ದಷ್ಟು ಕರೆದು ಮಾಡುವುದು ಅವನ ಕರ್ತವ್ಯ. ಅವನು ತನ್ನ ಮನೆಯ ಮಾಳಿಗೆಯನ್ನೇರಿ ಎಲ್ಲ ಕಿಡಕಿ, ಬಾಗಿಲುಗಳನ್ನು ಮುಚ್ಚಿಟ್ಟುಕೊಂಡು ಅಭ್ಯಸಿಸಬೇಕು. ತನ್ನ ಮನೆಯ ಮುಂಭಾಗದ ಚಾವಡಿಯಲ್ಲಿ ಕಿಡಕಿ ಬಾಗಿಲುಗಳನ್ನು ತೆರೆದಿಟ್ಟು ನೆರೆಯವರ ಕಿವಿ ಕಿವುಡಾಗುವಂತೆ ಆ ವಾದ್ಯವನ್ನು ಬಡಿಗೆಯ್ಯಲು ಅವನಿಗೆ ಅಧಿಕಾರವಿಲ್ಲ. ಅಂತೆಯೇ ಈ ಹದ ಪೆಟ್ಟಿಗೆಯನ್ನು ನಿಮಗದು ಮೆಚ್ಚಿಗೆಯಾದರೆ ಇಟ್ಟುಕೊಳ್ಳುವ ಅಧಿಕಾರವು ನಿಮಗಿದೆ. ಆದರೆ ಅದರ ಧ್ವನಿಯನ್ನು ನಿಮ್ಮ ಮನೆ ಯೊಳಗೇ ಸುಳಿವಂತೆ ಮಾಡದಿದ್ದರೆ ನೀವು ಇತರರ ಅಧಿಕಾರಕ್ಕೆ ಭಂಗತರುತ್ತೀರಿ. ನಿಮ್ಮ ನೆರೆಯವರಿಗೆ ಈ "ನಿಯೂ ಫರ್ ಆಜಾ" ಬೇಡದಿದಬಹುದು. ಅವರು ಆಶಿಸಿದ ಒಳಹು, ಅವರ ರಜಾದಿನವು ಶಾಂತವಾಗಿರ ಬೇಕೆಂದು. ಬೇಕುಬೇಕೆಂತ ಈ ರೀತಿ ಯಿಂದ ಅವರ ಶಾಂತಿಭಂಗಮಾಡುವುದೂ ಬೇಳವ ಕೇಳವ ಅವರ ಮನೆಯೊಳಕ್ಕೆ ಹೋಗಿ ಅಲ್ಲಿರುವ ಎಳೆ ಮಗುಗಳನ್ನೆಲ್ಲಾ ಸುಳಿದು ಪೀಡಿಸಿಮಾಡುವುದೂ ಒಂದೇ.

ಕೆಲ ಸಂದರ್ಭಗಳಲ್ಲಿ ನಿಜವಾಗಿಯೂ ಸ್ವಾತಂತ್ರ್ಯಹರಣವು ಅನಿವಾರ್ಯವಾಗು ತ್ತದೆ. ನನ್ನ ಪರಿಚಯದ "ಕ" ಗೆಳೆಯರು ಗಾಂಧೀನಗರದಲ್ಲಿದ್ದಾರೆ. ಅವರನ್ನು ಒಳ್ಳೆಯ ಸ್ವಭಾವ ಮತ್ತು ಮುಂಗೋಪಿಸ್ವಭಾವ ಇವೆ ರಡರ ಒಂದು ಆಶ್ಚರ್ಯಕರವಾದ ಮಿಶ್ರಣ ವೆನ್ನಬಹುದು. ಹಂಗುರದವನ ಹಮದನ್ನು ಎಲ್ಲಾದರೂ ಕೇಳಿದರೆಂದರೆ ತೀರಿತು. ದಾರಿ ನೆಗೆದು ಓಡಿಸುತ್ತಾರೆ ಅವನನ್ನು. ಸಮೀಪದಲ್ಲೆ ವಿಚಿತ್ರ ಅಭಿ ರುಚಿಯುಳ್ಳ ಒಬ್ಬ ಹೆಂಗಸಿದ್ದಾಳೆ. ಅವಳಿಗೆ ಈ ಹಮುರುಗನ್ನ ನಿಯುಂದರೆ ಪಂಚಪ್ರಾಣ. ಆಮ ಕೇಳಿಕೆಂದರೆ ಸರಿ, ಬೆಲ್ಲಕ್ಕೆ ಇರುವೆ ಮುತ್ತುವಂತೆ ಹೋಗಿ ಮುತ್ತಿಕೊಳ್ಳು ಹಳು. ಇಲ್ಲಿ ಯಾರ ಸ್ವಾತಂತ್ರ್ಯಕ್ಕಾಗಿ ಯಾರ ಸ್ವಾತಂತ್ರ್ಯವನ್ನು ಹತ್ತಿಕ್ಕಬೇಕು? ನ್ಯಾಯಾಧೀಶ ಪಡಿಗೂ ಈ ಸಮಸ್ಯೆ ಬಗೆ ಹರಿಯು ವಂತಿಲ್ಲ. ಹಮುರವನ್ನು ಮೆಚ್ಚುವುದು ಸಂಗತ ವಾದರೆ ಮೆಚ್ಚದಿರುವುದೂ ಸಂಗತವೇ ಮತ್ತು ಮೆಚ್ಚುವುದು ಅಸಂಗತವಾದರೆ ಮೆಚ್ಚದಿರು ವುದೂ ಅಸಂಗತವೇ. ಇಂತಹ ಜಗುಟಿನ ಸಮಸ್ಯಾರೂಪಕ್ಕೆ ಕಾಳಿದಾಸನಂತಹ ಪ್ರತಿಭಾವಂತನನ್ನೇ ಹುಡುಕಬೇಕು.

ನನಗೆ ತೋರುವುದೇನೆಂದರೆ. ಈ ಕೊಡತಿನ ಪ್ರಸಂಗದಲ್ಲಿ ನಾವು ಪೂರ್ಣ ಅನಾಯಕನಾ ವಾದಿಗಳಾಗಲೂ ಸಾಧ್ಯವಿಲ್ಲ. ಪೂರ್ಣ ನ್ಯಾಯ ಕಟ್ಟಾವಾದಿಗಳಾಗಲೂ ಸಾಧ್ಯವಿಲ್ಲ. ಹೆಚ್ಚೆಂದರೆ ಅನೇಕರ ಮಧ್ಯೆ ಮಿತ್ರಭಾವಾಗಬೇಕು. ನಮ್ಮಲ್ಲಿ ವ್ಯಕ್ತಿತ್ವ ಮತ್ತು ಸಾಮಾಜಿಕ ಎಂಬುದೆ ವ್ಯಕ್ತಿಯ ಸ್ವಾತಂತ್ರ್ಯವಿದೆ. ಅದೆನ್ನನ್ನು ನಾವು ಕಾಪಾಡಬೇಕಾಗಿದೆ. ಒಂದಿದೆ ಅನಾಯಕವಾದವನ್ನು ಖಂಡಿ ಸುತ್ತ ಇನ್ನೊಂದರ ಸರ್ವಾಧಿಕಾರವಾದವನ್ನು ಮಂಡಿಸಬೇಕು. ನಾನು ಕಮ್ಯುನಿಸ್ಟ್ ಪಕ್ಷ ಕಾರ್ಯಕರ್ತ ಅಲ್ಲ, ಇತ್ತ ಗಾಂಧೀ ಪಕ್ಷ ಕಾರ್ಯಕರ್ತ ಅಲ್ಲ, ಅವರ ಅವರವರ ಒಂದು ಕಂಟಕರು. ನನ್ನ ಮಗನು ಈ ಶಾಲೆಗೇ ಹೋಗಬೇಕು, ಅದಕ್ಕಲ್ಲ ಎಂದೋ, ಕಲಾವಿದನೇ ಆಗಬೇಕು, ವಿಜ್ಞಾನಿ ಯುಳ್ಳ ಎಂದೋ, ಕಾರ್ಯೆಂದೇ ಆಗಬೇಕು ಕೃತೆಂದುಬೇಡ ಎಂದೋ ಹೇಳುವ ಹೊಣೆ ಯುನ್ನು ನಾನು ಹೊರಲಾರೆ. ಈ ಸಂಗತಿಗಳೆಲ್ಲ ವ್ಯಕ್ತಿಗತ. ಆದರೆ ನನ್ನ ಮಗನಿಗೆ ಯಾವ ವಿದ್ಯಾಭ್ಯಾಸವನ್ನೂ ಮಾಡಿಸದೆ ಆದಿಯುಗದ ಅನಾಗರಿಕನಂತೆ ಬಿಡುತ್ತೇನೆ, ಇಲ್ಲವಾದರೆ "ಫಾಗಿನ್" ನ ಶಿಸೆಗಳ್ಳರ ಶಾಲಶಾಲೆಗೆ ಕಳಿಸು ತ್ತೇನೆ, ಎಂದು ನಾನು ಹೇಳತೊಡಗಿದರೆ ಸೌಮ್ಯದಿಂದಲೇ ಅದರೆ ಖಂಡಿತವಾಗಿ ಸಮಾ ಜವು "ಆದಿಯುಗದ ವನ್ಯನಿಂದ ಏನೂ ಉಪ ಯೋಗವಿಲ್ಲ" ವೆಂದು ಹೇಳೀತು. ಶಿಸೆಗಳ್ಳ ತನಕ್ಕೆ ಕಠಿಣ ವಿರೋಧವನ್ನೂ ಮಾಡೀತು. ಅದ್ದರಿಂದ ನಾನು ಮೆಚ್ಚಲಿ ಬಿಡಲಿ; ನನ್ನ ಮಗ ನಿಗೆ ಸಾಧಾರಣದ ವಿದ್ಯಾಭ್ಯಾಸವನ್ನಾದರೂ ಮಾಡಿಸಬೇಕು. ಅವನನ್ನು ಸಮಾಜಕ್ಕೊಂದು ಹೊರೆಯಂತಾಗಲಿ ಪ್ರಪಂಚಕ್ಕೊಂದು ಕಂಟಕ ದಂತಾಗಲಿ ಮಾಡುವ ಸ್ವಾತಂತ್ರ್ಯವು ನನ ಗಿಲ್ಲ.

ಇಷ್ಟೆಲ್ಲ ಹೇಳಿಪುದೆಂದರೆ ಚಿಕ್ಕ ಚಿಕ್ಕ ಸಾಮಾಜಿಕ ನಡೆವಳಿಕೆಗಳಲ್ಲಿ ನಾವು ತಿದ್ದಿದ ವರೊ ಅಲ್ಲವೊ ಎಂಬುದನ್ನು "ಪಾರಿಯ ಕಟ್ಟಳೆ" ಯನ್ನು ವಿಚಾರಿಸಿ ತಿಳಿದುಕೊಳ್ಳ ಬೇಕೆಂದು. ಮಹಾತ್ಯಾಗದ ಸಂದರ್ಭಗಳು ನಮ್ಮ ಜೀವನದಲ್ಲಿ ಬರುವುದು ಬಹು ವಿರಳ. ಜೀವನಯಾತ್ರೆಯನ್ನು ಕಹಿಯಾಗಿಯೋ ಸಿಹಿ ಯಾಗಿಯೋ ಮಾಡುವುದು ಜೀವನದಲ್ಲಿನ ಚಿಕ್ಕ ಪುಟ್ಟ ಸಾಮಾಜಿಕ ವ್ಯವಹಾರಗಳೇ. ಈ ವಿಷಯವನ್ನು ರೈಲುಗಾಡಿಯಲ್ಲಿ ಸಂಧಿಸಿದ ಗೆಳೆಯರು ಚೆನ್ನಾಗಿ ವಿಚಾರಿಸುವರೆಂದು ನಾನು ಭಾವಿಸುತ್ತೇನೆ. ಹಾಗಾದರೆ ಪಾಕಿ ಸ್ತಾನದಲ್ಲಿ ತಪ್ಪಿತು, ಚೀನದಲ್ಲಿ ನೋಸ ಮಾಡಿತು ಮುಂತಾದ್ದನ್ನು ತನ್ನ ಗೆಳೆಯನಿಗೆ ವಿವರಿಸುವ ಅವರ ಸ್ವಾತಂತ್ರ್ಯಕ್ಕೆ ಏನೂ ಕುಂದುಂಟಾಗದು ಎಂದು ನಾನು ಧೈರ್ಯ ಹೇಳುವೆ. ಆದರೆ ನಾನು ಗಜೇಟನ್ನು ತೊಂದರೆ ಯಿಲ್ಲದೆ ಓದುವ ಅವಕಾಶವನ್ನು ನನಗೆ ತಪ್ಪ ದಂತೆ ಅವರು ಕೊಡಲೇ ಬೇಕು.

ಈ ಭಾರತ

ಬಿಹಾರದ ನೀರಾವರಿ ಮಂತ್ರಿ ಶ್ರೀ ರಾಮಚರಿತ ಸಿಂಹರ ಮಗನಾದ ಚಂದ್ರ ಶೇಖರ ಪ್ರಸಾದ ಸಿಂಹನನ್ನು ಪೋಲೀಸರು ಬಂಧಿಸಿದ್ದಾರೆ. ಕಮ್ಯುನಿಸ್ಟ ಪಕ್ಷಕ್ಕೆ ಸೇರಿದ ಈತನನ್ನು ಹಿಡಿಯಲು ಅವರು ಒಂದು ವರ್ಷ ಕಷ್ಟಪಟ್ಟರು. ತಲೆ ಮರೆಸಿಕೊಂಡಿದ್ದ ಅವ ನನ್ನು ಸಮಗಾರರ ಓಣಿಯ ಒಂದು ಮನೆಯಲ್ಲಿ ಹಿಡಿಯಲಾಯಿತು.

-ಪಿ. ಟಿ. ಐ.

ಕಳೆದ ಹೋಳಿ ಹಬ್ಬದ ದಿನ ಕಲಕತ್ತೆ ಯಲ್ಲಿ ಜತೀನ ವಿಶ್ವಾಸನೆಂಬವನ ಮೇಲೆ ಓಕುಳಿ ಚೆಲ್ಲಿ ಅವನನ್ನು ಹಿಡಿದು ಮುಖಕ್ಕೆ ಬಣ್ಣಬಳಿದ ಸುರೇಶಚಂದ್ರ ಚಂದಾ ಮತ್ತು ಜುರನಚಂದ್ರ ದತ್ತರೆಂಬವರಿಗೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ವಿಧಿಸಿದ ಐದು ರೂಪಾಯಿ ದಂಡವನ್ನು ಹೈಕೋರ್ಟ ನ್ಯಾಯಾಧೀಶ ಸೇನರು ಕಾಯಂ ಮಾಡಿದರು. ಕಲಕತ್ತೆ ಯಂಥ ನಗರದಲ್ಲಿ ತಂತಮ್ಮ ಕಾರ್ಯಗಳಿಗಾಗಿ ಓಡಾಡುತ್ತಿರುವ ಜನರ ಮೇಲೆ ಗುರುತು ಪರಿಚಯವಿಲ್ಲದವರು ಹೀಗೆ ಬಣ್ಣ ಹಾಕುವ ಪದ್ಧತಿ ಎಷ್ಟು ಬೇಗ ಹೋದರೆ ಅಷ್ಟು ಒಳ್ಳೆ ಯದೆಂದು ನ್ಯಾಯಮೂರ್ತಿಗಳು ಹೇಳಿದರು.

-ಅಮೃತಬಜಾರ ಪತ್ರಿಕೆ

ಯುಕ್ತಪ್ರಾಂತದ ಸರಕಾರದ ನ್ಯಾಯ ಖಾತೆಯಲ್ಲಿ ಸಮರ್ಥರಾದ ಕರಡು ಬರೆಯುವ ತಜ್ಞರ ಕೊರತೆಯುಂಟಾದ ಮೂಲಕ ಮಂತ್ರಿ ಗಳು ತಂತಮ್ಮ ಖಾತೆಯ ಮಸೂದೆಗಳ ಕರಡುಗಳನ್ನು ತಯಾರು ಮಾಡಿಸಿಕೊಳ್ಳ ಬೇಕಾದರೆ ನ್ಯಾಯಖಾತೆಯ ಬಾಗಿಲಲ್ಲಿ ಸರತಿ ಹಚ್ಚಿ ಕಾಯಬೇಕಾಗಿದೆ!

-ಹಿಂದುಸ್ಥಾನ ವಾರಪತ್ರಿಕೆ



ಕುಮಾರಿ ದಾವರರು (ಎಡಗಡೆ) ತಮ್ಮ ಚಿತ್ರವನ್ನು ವಿವರಿಸುತ್ತಿರುವುದು.



ಶ್ರೀ ಜಲಾನಿಯವರು (ಬಲಗಡೆ) ತಮ್ಮೊಂದು ಚಿತ್ರವನ್ನು ವಿವರಿಸುತ್ತಿರುವದು.

ಲಂಡನ್ನಿನಲ್ಲಿ ಭಾರತೀಯ ಕಲಾವಿದರ ಕೃತಿಗಳ ಪ್ರದರ್ಶನ

ಆಧುನಿಕ ಭಾರತೀಯ ಕಲಾಕೃತಿಗಳ ವಿಷ ಯದಲ್ಲಿ ಬ್ರಿಟಿಶ ಜನತೆಯ ಆಸ್ಥೆ ಹೆಚ್ಚುತಿದೆ. ಆಗಾಗಲೆ ಕೆಲ ಹಿಂದೀ ಚಿತ್ರಕಾರರು ತಮ್ಮ ಚಿತ್ರಗಳ ಪ್ರದರ್ಶನಗಳನ್ನೇರ್ಪಡಿಸಿ ಅಲ್ಲಿ ಜನ ಪ್ರಿಯರಾಗಿದ್ದಾರೆ. ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟದಲ್ಲಿ ಶಿಕ್ಷಣ ಹೊಂದಿ ಸದ್ಯ ಲಂಡನ್ನಿನಲ್ಲಿ ಉಚ್ಚಶಿಕ್ಷಣ ಪಡೆಯುತ್ತಿರುವ ಕುಮಾರಿ ಮೆಹರೂ ದಾವರ ಮತ್ತು ಶ್ರೀ ಗುಲಾಬ ಜಲಾನಿಯವರ ಚಿತ್ರ ಮತ್ತು ಶಿಲ್ಪಗಳ ಪ್ರದರ್ಶನ ನಡೆದಿದೆ. ಅಂರಾಷ್ಟ್ರೀಯ ಭಾಷಾ ಸಮಾಜದ ಕಟ್ಟಡದಲ್ಲಿ ಲಂಡನ್ನಿನ ಮೇಯರರಾದ ಗಿಬ್ಸನ್ನರು ಉದ್ಘಾಟಿಸಿದ ಈ ಪ್ರದರ್ಶನ ದಲ್ಲಿ ನೂರಕ್ಕಿಂತ ಹೆಚ್ಚು ಚಿತ್ರಗಳೂ ಪ್ರತಿಮೆ ಗಳೂ ಕಾಣಸಿಗುತ್ತವೆ. ಅವುಗಳಲ್ಲಿ ಅಧಿಕ ಸಂಖ್ಯೆಯವು ಈಗಾಗಲೆ ಮಾರಿ ಹೋಗಿರು ವುದು ಅವುಗಳ ಜನಪ್ರಿಯತೆಯ ದ್ಯೋತಕ ವಾಗಿದೆ. ಕುಮಾರಿ ದಾವರರ ಅನೇಕ ಕೃತಿ ಗಳು ತುಂಬ ಅವಸರದಿಂದ ರಚಿಸಲ್ಪಟ್ಟಂತಿ ದ್ದರೂ ಕಲಾಸೃಷ್ಟಿಯ ಉತ್ತಮ ಮಾದರಿಗ ಳೆಂದು ಗಣಿಸಲ್ಪಟ್ಟವೆ. ಅವುಗಳಲ್ಲಿ ಕೆಲವು ಕ್ರಾಂತಿಕಾರಕವಾಗಿವೆಯೆಂದು ವಿಮರ್ಶಕರ ಮತ. ಹೈದರಾಬಾದಿನಲ್ಲಿ ಈಗಾಗಲೆ ಶಿಕ್ಷಕ ವೃತ್ತಿಯನ್ನು ಮಾಡಿರುವ ಶ್ರೀ ಜಲಾನಿಯ ವರ ಕೃತಿಗಳು ಪರಂಪರಾಗತ ಅಭಿಜಾತ ಪದ್ಧ ತಿಯನ್ನನುಸರಿಸಿದ ನಾಜೂಕಾದ ಚಿತ್ರಗಳು. ಅದಕ್ಕಿಂತಲೂ ಅವರ ಮೂರ್ತಿಶಿಲ್ಪ ಅತಿಶಯ ಸುಂದರವಾಗಿವೆಯೆಂದು ಭಾವಿಸಲ್ಪಟ್ಟಿದೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.